# ಕೊಡಗು ಸಂಗಾತಿ


ಆಗಸ್ಟ್ 16 ರಿಂದ 31, 2000 ಪಾಕ್ಷಿಕ ಪತ್ರಿಕೆ (ಆಟಿ 31, ಸೋಣ 1-15 )

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

KA/SK/MYS-88 ಸಂಪುಟ : 4 ಸಂಚಿಕೆ : 16 ಪುಟಗಳು : 24 ಬೆಲೆ ರೂ. : 6-00




ಲೇಖನ : ಒಳಪುಟಗಳಲ್ಲಿ

**ಕೊಡಗು ಜಿಲ್ಲೆಯ ಅರೆಭಾಷೆ ಗೌಡರ ಸವ್ಯಸಾಚಿ ಚೆಟ್ಟಳ್ಳಿಯ ದಿ|| ಪೇರಿಯನ ಎಂ. ಪೂವಯ್ಯನವರು**

ನಾಡಿನ ಸಮಸ್ತ ಓದುಗರಿಗೆ ಶ್ರೀ ಕೃಷ್ಣ ಜನ್ಮಾಷ್ಟಮಿಯ ಶುಭಾಶಯಗಳು

ಮಿಲೇನಿಯಂ
ವರ್ಷ-2000 ಹಾಗೂ
5ನೇ ವರ್ಷದ
ಅದ್ದೂರಿ
ಕಾರ್ಯಕ್ರಮ

# ಕಾವೇರಿ ನಾಡು ಸಾಂಸ್ಕೃತಿಕ ಅಕಾಡಮಿ (ರಿ.)

ಬೆಂಗಳೂರು

**ದಿನಾಂಕ 10-9-2000**

## 5ನೇ ವರ್ಷದ ಕೈಲ್ ಮುಹೂರ್ತ ಹಬ್ಬದ ಆಮಂತ್ರಣ ಪತ್ರಿಕೆ

## ಕಾವೇರಿ ನಾಡು ಸಾಂಸ್ಕೃತಿಕ ಅಕಾಡಮಿ ಉದ್ಘಾಟನೆ.

ಐದನೇ ವರ್ಷದ ಕೈಲ್ ಮುಹೂರ್ತ ಹಬ್ಬನ ತಾರೀಕ್ 10-9-2000 ನೇ ಐತ್ವಾರ ಬೆಳಿಗ್ಗೆ 9ಗಂಟೆಗೆ ಕಾವೇರಿ ನಾಡ್ ವಿದ್ಯಾಸಂಸ್ಥೆ, ಕಾಡುಕರೇನಹಳ್ಳಿ, ಮಹದೇವಪುರ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ನಡ್ಸಿಕೆ ತೀರ್ಮಾನ ಮಡ್ಯೊಳೊ. ಆದ್ದರಿಂದ ಕಾವೇರಿನಾಡ್ ನಿವೇಶನಗಳ ಸದಸ್ಯರ್‌ಗ, ಕಾವೇರಿ ನಾಡ್ ಸಾಂಸ್ಕೃತಿಕ ಅಕಾಡಮಿಯ ಸದಸ್ಯರ್‌ಗ ಗೌಡ ಬಂದ್ ಬಾಂದವರ್‌ಗ ಮತ್ತೆ ಆಹ್ವಾನಿತರ್ ಸರಿಯಾದ ಸಮಯಕ್ಕೆ ಆಗಮಿಸಿ ಸಮಾರಂಭನ ಚಂದಗಾಣಿಸಿ, ಯಶಸ್ವಿಯಾಗಿ ನಡಿಯುವಂಗೆ ಮಾಡೋಕುಂತೇಳಿ ಕೇಳಿ ಕೊಂಡವೆ.

**ಮುಖ್ಯ ಅತಿಥಿಗಳು :**

**ಶ್ರೀ ಕುರಂಜಿ ವೆಂಕಟರಮಣ ಗೌಡರು,** ಅಧ್ಯಕ್ಷರು, ಅಕಾಡಮಿ ಆಫ್ ಲಿಬರಲ್ ಎಜುಕೇಷನ್ (ರಿ.), ಸುಳ್ಯ
ಶ್ರೀ ವೈ.ಕೆ. ರಾಮಯ್ಯನವರು,ಎಂ.ಎಲ್.ಎ.,
ಶ್ರೀ ಕೆ.ಬಿ. ಶಾಣಪ್ಪನವರು,ಎಂ.ಎಲ್.ಸಿ.,
ಶ್ರೀ ಗಂಗಹನುಮಯ್ಯನವರು, ಸಮಾಜ ಸೇವಕರು
ಶ್ರೀ ತುಮ್‌ತಜ್ಜೆ ಗಣೇಶರವರು, ಅಧ್ಯಕ್ಷರು, ಕೊಡಗು ಗೌಡ ಸಾಂಸ್ಕತಿಕ ಅಕಾಡಮಿ, ಮಡಿಕೇರಿ,
ಶ್ರೀಮತಿ ಚಿಯಂಡಿ ರಾಧ ಯಾದವ್‌ರವರು, ಅಧ್ಯಕ್ಷೆ, ಕೊಡಗು ಗೌಡ ಮಹಿಳಾ ಒಕ್ಕೂಟ, ಮಡಿಕೇರಿ,
ಶ್ರೀ ಕೇಟೋಳಿರ ಯತೀಶ್ ಕುಮಾರ್‌ರವರು, ಡೆಪ್ಯೂಟಿ ರಿಜಿಸ್ಟ್ರಾರ್, ಬೆಂಗಳೂರು.

### ಕಾರ್ಯಕ್ರಮಗಳು

1. ಜ್ಯೋತಿ ಬೆಳಗುವ ಕಾರ್ಯಕ್ರಮ
2. ಸಾಂಸ್ಕೃತಿಕ ಕಾರ್ಯಕ್ರಮಗಳು ವಿವಿಧ ತಂಡದವರಿಂದ
3. ಅತಿಥಿಗಳಿಗೆ ಸ್ವಾಗತ ಮತ್ತು ಸತ್ಕಾರ
4. ಕೊಡುಗೈ ದಾನಿಗಳಿಗೆ ಸನ್ಮಾನ
5. ನಾಡ ಹಬ್ಬದ ಅದ್ದೂರಿಯ ಊಟ
6. ನಾಡ ಕೊಡಗು ವಾಲಗ ಕುಣಿತ
7. ನಾಡ ಪದ್ಧತಿಯಂತೆ ಕಾಯಿಗೆ ಗುಂಡು ಹೊಡೆಯುವುದು.

**ವಿಶೇಷ ಸೂಚನೆ :** ಬೆಳಿಗ್ಗೆ ಉಪಹಾರದ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರಿನ ಬೇರೆ ಬೇರೆ ಸ್ಥಳಗಳಿಂದ ಈ ಹಿಂದಿನಂತೆ ಬಂದು ಹೋಗಲು ಬಸ್ಸಿನ ವ್ಯವಸ್ಥೆ ಮಾಡಲಾಗಿದೆ.

### ಕಾರ್ಯಕಾರಿ ಮಂಡಳಿಯ ಸದಸ್ಯರುಗಳು

**ಅಧ್ಯಕ್ಷರು :** ಅಮ್ಮಾಜೀರ ಎಸ್. ಪೊನ್ನಪ್ಪನವರು
**ಉಪಾಧ್ಯಕ್ಷರು :** ಬಿಟ್ರ ಚೊಂದಮ್ಮ ಶಂಬುರವರು
**ಕಾರ್ಯದರ್ಶಿ :** ಕಡ್ಯದ ಜಿ. ಅರುಣ್‌ಕುಮಾರ್‌ರವರು
**ಖಜಾಂಚಿ :** ಕಾಚಿಲಂಡ ಅಶೋಕ್ ಪೂವಯ್ಯರವರು

### ಸದಸ್ಯರುಗಳು:

ತೇನನ ರಾಜೇಶ್ ಸೋಮಣ್ಣರವರು, ಸುಳ್ಯಕೋಡಿ ವೈಶಾಲಿ ಅಮರ್‌ನಾಥ್‌ರವರು, ಕಲ್ಲುಮುಟ್ಲು ಆರ್. ಬಸಪ್ಪನವರು,
ಮಾಡಾವು ಸಂಪಾಜೆ ವಿಜಯ್‌ಕುಮಾರ್‌ರವರು, ಕುಯ್ಯಮುಡಿ ನವೀನ್ ಕುಮಾರ್‌ರವರು,
ಬಗ್ಗನ ದೀಪಕ್ ಜೋಯಪ್ಪರವರು, ಕುದುಕುಳಿ ಜನಾರ್ದನ್‌ರವರು.

**ವಿಳಾಸ :** ಕಾಡುಕರೇನ ಹಳ್ಳಿ, ಮಹದೇವಪುರ, ನೆಲಮಂಗಲ ತಾಲೊಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ
ದೂರವಾಣಿ : 080/6342822, ಮೊಬೈಲ್ : 9844003501

ಸಹಬಾಳ್ವೆ ಸಂಘಟನೆಯ ಸಮ್ಮಿಲನವೇ ನಮ್ಮ ಧ್ಯೇಯ.

# 2000, ಆಗಸ್ಟ್ 16 ರಿಂದ 31 ರ ತನಕ

## ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಸುದ್ದಿ ಹಾಡುಗಳು | - ಸಂಪಾದಕೀಯ | 02 |
| "ಟಿ.ವಿ. ಸ್ಪರ್ಧೆಗೆ ಸರಿಸಾಟಿಯಾದ ಪತ್ರಿಕೆ" | - ಸಂಗಾತಿ | 02 |
| 'ಪತ್ರಕರ್ತನಿಗೆ ಸತತ ಅಧ್ಯಯನ ಅಗತ್ಯ' | - ಸಂಗಾತಿ | 02 |
| ವ್ಯಕ್ತಿ ಪರಿಚಯ : ಚೆಟ್ಟಳ್ಳಿಯ ಸವ್ಯಸಾಚಿ ದಿ. ಪೇರಿಯನ ಎಂ. ಪೂವಯ್ಯನವರು | - ಪಿ. ಜಿ. ಅಂಬೆಕಲ್ | 03 |
| ಮಳೆಗಾಲದ ಜನಪ್ರಿಯ ತರಕಾರಿ : ಕಣಿಲೆ | - ಸಿ. ಎಸ್. ಸುರೇಶ್ | 05 |
| ಕೊಡಗು ರಾಜರ ಕಾಲದಲ್ಲಿ ಗೌಡರ ಕಟ್ಟು ಕಟ್ಟಳೆಗಳನ್ನು ತೀರ್ಮಾನಿಸಲು | | 04 |
| ಭಾಗವಹಿಸಿದ ಮಹನೀಯರು ಮತ್ತು ತೀರ್ಮಾನಗಳು | - ದಿ. ಕೋಟೇರ ಎಸ್. ಕಾರ್ಯಪ್ಪನವರು | 06 |
| ಹನಿಗವನ : ನನ್ನವಳ ಇಷ್ಟ | | |
| ಉಚ್ಚಾರಣೆಯ ತೊಡಕುಗಳು | - ಚಾಂಗನ ಸಿ. ಪೂವಯ್ಯ | 07 |
| ಸಂಗಾತಿ ಭವಿಷ್ಯ | - ಜ್ಯೋತಿಷ್ಯ ಗಿರೀಶ್‌ಕುಮಾರ್ | 09 |
| ಇಂಟರ್‌ನೆಟ್ : ಎಳೆಯರಿಗೆ ಎಷ್ಟು ಸುರಕ್ಷಿತ? | - ಸುಧಾ ಗೋಪಾಲಕೃಷ್ಣ | 13 |
| ಪಂಚಲಿಂಗ ದರ್ಶನ | - ಎಡಿಕೇರಿ ಸುದರ್ಶನ್ | 14 |
| ಹಸೆ ಮಣೆ (ಶೀರ್ಷಿಕೆ) : ವಿಮರ್ಶೆ | - ಗುತ್ತಿ ಮುಂಡನ ಗಿರೀಶ್‌ಕುಮಾರ್ | 15 |
| ಸರ್ಪಗಂಧ - ಧಾರವಾಹಿ - 36 | - ಕೌಂಡಿನ್ಯ | 16 |
| ವಿದ್ಯಾವಂತ ನಿರುದ್ಯೋಗಿಗಳಿಗೆ ಮಾರ್ಗದರ್ಶನ ಕೈಪಿಡಿ (ಮುಂದುವರಿದ ಭಾಗ) | - ತಡಿಯಪ್ಪನ ಕುಮಾರ ಜಯ | 17 |
| ಪತ್ರ ವಿಭಾಗ : ಕಂಪ್ಯೂಟರ್ ಬಲೆಯಲ್ಲಿ ಕೊ. ಮತ್ತು ದ.ಕ. ಗೌಡ ಸಮಾಜ | - ಪೊಕ್ಕುಲಂಡ್ರ ಅಪ್ಪಾಜಿ ಪ್ರಹ್ಲಾದ್ | 19 |
| **ಅರೆಭಾಷಿಕ ವಿಭಾಗ** | | |
| ಹೆಂಗೊಳರಿ? | - ಬಿ. ಆರ್. ಜೋಯಪ್ಪ | 04 |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 16 | - ಶಂಕರನ ಬಸಪ್ಪ | 10 |



| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ**, 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, **ಫೋನ್ : 08272/28047** |
| ಚಿಹ್ನೆ, ಹಸೆಮಣೆ, ಕ್ಯಾಸೆಟ್/ಶುಭಾಶಯ ಕಾರ್ಡ್ಸ್/ಕೀ ಚೈನ್ ಲಭ್ಯ | **ಪಾಂಡ್ಯನ್ ಕ್ಯಾಸೆಟ್ ಅಂಗಡಿ**, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ **ಫೋನ್** : 08272/29620 |
| ಕುಶಾಲ ನಗರ | **ಕುಂಭಗೌಡನ ಸೋಮಣ್ಣ**, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, **ಕುಶಾಲನಗರ** - 571 234 **ಫೋನ್** : 08276/73370 |
| ಬೆಂಗಳೂರು ಮಹಾನಗರ | **ಅಮ್ಮಾಜೀರ ಪೂಣ್ಣಚ್ಚ**, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, **ಬೆಂಗಳೂರು** - 04, **ಫೋನ್** :080/6342822 |
| ಬೆಂಗಳೂರು ಮಹಾನಗರ | **ಕಲ್ಲುಮುಟ್ಲು ಬಸಪ್ಪ**, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,**ಫೋನ್** : 080/6500946 |



ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ **-75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), **ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.**

# ಸಂಪಾದಕೀಯ : ಸುಬ್ಬಿ ಹಾಡುಗಳು

ಗೌಡರಲ್ಲಿ ವಿವಾಹ ಸಮಯದಲ್ಲಿ ಹಾಡುವ ಸೋಬಾನೆ ಹಾಡುಗಳಂತೆ ಗೌಡರ ಮಹಿಳೆಯರು ಒಟ್ಟು ಸೆರಿ ಕೆಲಸ ಮಾಡುತ್ತಿದ್ದ ಮಳೆಗಾಲದ ಅಗೆ ತೆಗೆಯುವ ಕೆಲಸ, ಬೇಸಗೆಯಲ್ಲಿ ಒಕ್ಕಲಿನ ಹುಲ್ಲುಕಟ್ಟುವ ಸಮಯದಲ್ಲಿ ಅವರು ಮಾಡುವ ಕೆಲಸದ ಕಷ್ಟವನ್ನು ನಿವಾರಿಸಲು ಹೆಂಗಳೆಯರು ಗುಂಪು ಸೇರಿ ಸುಬ್ಬಿ ಹಾಡುಗಳನ್ನು ಹಾಡುತ್ತಾ ಕೆಲಸ ಯಾವ ರೀತಿಯ ಬೇಸರವನ್ನು ತಾರದಂತೆ ಸುಬ್ಬಿ ಹಾಡುಗಳನ್ನು ಬಾಯಿಂದ ಹೇಳುತ್ತಾ ಆಗಿನ ಹೆಂಗೆಳೆಯರು ಓದು ಬರಹ ಕಲಿಯದಿದ್ದರೂ ಬಾಯಿಂದ ಹೇಳಿದ ಹಾಡುಗಳನ್ನು ಮೆಲಕುತ್ತಾ ಪ್ರತಿಯೊಬ್ಬರೂ ಹಾಡುವ ಪ್ರವೃತ್ತಿ ಬೆಳೆಸಿಕೊಂಡಿದ್ದರು. ಈ ರೀತಿ ಹಾಡುವುದರಿಂದ ಅಗೆ ತೆಗೆಯುವುದರಲ್ಲಾಗಲೀ ಅಥವಾ ಹುಲ್ಲು ಕಂತೆ ಕಟ್ಟುವುದರಲ್ಲಾಗಲೀ ಕೆಲಸವು ಉತ್ಸಾಹದಿಂದ, ಲವಲವಿಕೆಯಿಂದ ಸಾಗುತ್ತಿದ್ದವು. ಹಾಗಾಗಿ ಹೆಂಗಳೆಯರು ಕೆಲಸಕ್ಕಾಗಿ ಜೊತೆ ಸೇರಿದಾಗ ಬೇಡದ ಒಣಹರಟೆ, ದೂರುಮಾತುಗಳಿಗೆ ಎಡೆ ಇಲ್ಲದೆ ಸಂತೋಷದಿಂದ ಕೆಲಸ ಮಾಡುವ ಪರಿಸ್ಥಿತಿ ಇತ್ತು.

ಈ ರೀತಿಯ ಸುಬ್ಬಿ ಹಾಡುಗಳನ್ನು ಮಹಿಳಾ ಕೂಟಗಳು ಸಂಗ್ರಹಿಸಿ ನಮ್ಮ ಮುಂದಿನ ಪೀಳಿಗೆಗೆ ಅವುಗಳ ಪರಿಚಯ ಮಾಡಿಸಿಕೊಟ್ಟರೆ ಯುವ ಪೀಳಿಗೆಯು ತಮ್ಮ ಗುಂಪು ಕೆಲಸಗಳನ್ನು ಲವಲವಿಕೆಯಿಂದಲೂ ಸಂತೋಷದಿಂದಲೂ ಮಾಡುವಂತಾಗಲೀ ಎಂದು ಸಂಗಾತಿಯ ಬಯಸುತ್ತದೆ.

## "ಟಿ.ವಿ. ಸ್ಪರ್ಧೆಗೆ ಸರಿಸಾಟಿಯಾದ ಪತ್ರಿಕೆ"

ಇಂದಿನ ದಿನಗಳಲ್ಲಿ ಟಿ. ವಿ. ಚಾನಲ್‌ನಂತಹ ಮಾಧ್ಯಮಕ್ಕೆ ಸರಿಸಮನಾಗಿ ಪತ್ರಿಕಾ ಮಾಧ್ಯಮ ಓದುಗರನ್ನು ಸ್ಪಂದಿಸುವಂತೆ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ದೂರದರ್ಶನ ಹಾಗು ಅದರ ಅಂಗವಾಗಿರುವ ಚಾನಲ್‌ನಲ್ಲಿ ಬರುವ ಮಾಹಿತಿಗಳು ಕೇವಲ ಕ್ಷಣಿಕವಾಗಿದ್ದು, ಪತ್ರಿಕೆಗಳಲ್ಲಿ ಬರುವ ಎಲ್ಲಾ ವಿಧದ ವಿಷಯಗಳು ದಾಖಲೆಗಳಾಗಿ ಉಳಿಯಬಲ್ಲದು.

ಪತ್ರಿಕಾ ಮಾಧ್ಯಮವು ವಿದ್ಯಾರ್ಥಿಗಳಿಗೆ ಬಹಳ ಅವಶ್ಯಕವಾಗಿದೆ. ಕಾಲಹರಣ ಮಾಡದೆ ಪತ್ರಿಕೆಯ ಓದುವಿಕೆಯ ಕಡೆ ಆಸಕ್ತಿ ತೋರಿಸಬೇಕು. ಸರಕಾರವು ಪತ್ರಕರ್ತರಿಗೆ ಹೆಚ್ಚಿನ ಸೌಲಭ್ಯ ನೀಡಲು ಮುಂದೆ ಬಂದು ಸಹಕರಿಸಬೇಕು.

ಇಂದಿನ ದಿನಗಳಲ್ಲಿ ಪತ್ರಿಕಾ ಮಾಧ್ಯಮ ಬಲಿಷ್ಠವಾಗಿ ಬೆಳೆಯುತ್ತಿದೆಯಾದರು ರಾಜ್ಯದಲ್ಲಿ ಪತ್ರಿಕಾ ಓದುಗರ ಸಂಖ್ಯೆ ಕಡಿಮೆ ಇದೆಯಾದರು ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯ ಉತ್ತಮಪಡಿಸಿಕೊಳ್ಳಲು ಶ್ರಮ ಪಡಬೇಕು. ಹಾಗೂ ಪತ್ರಿಕೆಯನ್ನು ಓದುವುದರಿಂದ ಅವರ ಜ್ಞಾನರ್ಜನೆ ಹೆಚ್ಚುತ್ತದೆ.

ಪತ್ರಿಕೆಯು ಓದುಗರಿಗೆ ಜಗತ್ತಿನ ವಿಷಯಗಳನ್ನು ಮೂಲೆ ಮೂಲೆಗಳಲ್ಲಿ ನುಗ್ಗಿ ಪ್ರಚಾರ ಪಡಿಸುತ್ತಿವೆ. ಈ ನಿಟ್ಟಿನಲ್ಲಿ ಕೊಡಗು ಸಂಗಾತಿಯು ಬಹಳ ಕೆಲ ಮಟ್ಟದಲ್ಲಿ ಹಳ್ಳಿ ಹಳ್ಳಿಯಲ್ಲಿ ರಾರಾಜಿಸಿ ಸಾಕಷ್ಟು ಓದುಗರನ್ನು ಪಡೆದಿದೆಯೆಂದರು ಅತಿಶಯೋಕ್ತಿಯಲ್ಲವೆಂದು ಹೇಳಬಹುದು. ಜನಾಂಗದ ದೃಷ್ಟಿಯಿಂದ ಸಂಗಾತಿಯು ಗ್ರಾಮವಾರು ಸಂಚರಿಸಿ ಕಾರ್ಯ ಪ್ರವೃತ್ತಿಯಾದಾಗ ಮಾತ್ರ ಜನಾಂಗ ಬಂಧುಗಳು ಒಂದು ಸಂಘಟನೆಯ ನೆಪದಲ್ಲಿ ಒಂದಾಗಿ ಬರಲು ಸುಲಭ ಸಾಧ್ಯವೆಂದೆನ್ನಬಹುದು.

- ಸಂಗಾತಿ

## 'ಪತ್ರಕರ್ತನಿಗೆ ಸತತ ಅಧ್ಯಯನ ಅಗತ್ಯ'

ಪತ್ರಕರ್ತರು ಯಾವುದೇ ಸುದ್ದಿಯನ್ನು ಮಾಡಬೇಕಾದರೆ ಸತತ ಅಧ್ಯಯನ ಮಾಡಿ ಸಮಗ್ರವಾಗಿ ಪರಿಶೀಲಿಸಿ ಓದುಗರು ಉತ್ಸಾಹ ತೋರಿಸುವಂತಹ ಸುದ್ದಿಗಳನ್ನು ವಿಮರ್ಶಿಸಿ ವರದಿ ಮಾಡಬೇಕಾಗಿದೆ.

ಸ್ವಾತಂತ್ರ್ಯ ಹೋರಾಟ ಸಮಾರಂಭದಲ್ಲಿ ಪತ್ರಿಕೆಗಳು ದೇಶದಲ್ಲಿ ಜನ ಜಾಗೃತಿ ಉಂಟುಮಾಡುವುದರಲ್ಲಿ ಅಪಾರವಾಗಿ ಕೆಲಸ ನಿರ್ವಹಿಸಿವೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಪತ್ರಿಕಾರಂಗ ಬೆಳವಣಿಗೆಯಾಯಿತು ಎನ್ನಬಹುದು.

ಪತ್ರಕರ್ತರು ಬದಲಾವಣೆಗಳಿಗೆ ಹೊಂದಿಕೊಂಡು ಹೊಸದನ್ನು ಅಧ್ಯಯನ ಮಾಡುತ್ತಾ ಆತ್ಮ ವಿಮರ್ಶೆಯೊಡನೆ ಕಾರ್ಯ ನಿರ್ವಹಿಸುವುದಲ್ಲದೆ ನೋವುಂಡ ಪತ್ರಕರ್ತರನ್ನು ನೆನೆಯಲು ಹಾಗೂ ಪತ್ರಕರ್ತರು ತಮ್ಮನ್ನು ತಾವು ಮತ್ತೆ ಸಮಾಜಕ್ಕೆ ಅರ್ಪಿಸಿಕೊಳ್ಳಲು ಪತ್ರಿಕಾ ದಿನಾಚರಣೆಯನ್ನು ಆಚರಿಸುತ್ತಿರುವುದು ಸೂಕ್ತವು ಆಗಿದೆ.

ಸ್ವಾತಂತ್ರ್ಯ ನಂತರ ಪತ್ರಿಕಾ ವೃತ್ತಿಯಾಯಿತು. ಆದರೆ ಆಧುನಿಕ ತಂತ್ರಜ್ಞಾನದ ಕ್ರಾಂತಿಯ ನಂತರ ಪತ್ರಿಕಾ ವೃತ್ತಿ ಪತ್ರಿಕೋದ್ಯಮವಾಗಿ ಪರಿಣಮಿಸಿತು. ಪತ್ರಿಕೆಗಳು ಸಮಾಜದ ಓರೆಕೋರೆಗಳನ್ನು ತಿದ್ದುತ್ತಾ ಜನರ ಹಿತ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸಿದವು.

ಭಾರತದ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಬೇರೆ ದೇಶಗಳಿಗೆ ಹೋಲಿಸಿದರೆ ಪೊಲೀಸ್ ವ್ಯವಸ್ಥೆ ಅತ್ಯಂತ ಉತ್ತಮ ಹಾಗೂ ಬಲಶಾಲಿ ಪ್ರಜಾತಂತ್ರ ವ್ಯವಸ್ಥೆಯಾಗಿದೆ. ಇದಕ್ಕೆ ಸರ್ಕಾರದ ಮೂರು ಅಂಗಗಳಷ್ಟೇ ಪ್ರಾಮುಖ್ಯವಾಗಿ ಪತ್ರಿಕಾರಂಗದ ಕಾರ್ಯ ಶೈಲಿಯು ಕಾರಣವಾಗಿದೆ.

- ಸಂಗಾತಿ

**ಕೊಡಗು ಸಂಗಾತಿ, ಪಾಕ್ಷಿಕ ಅನ್ನು ಕೊಂಡು ಓದಿರಿ.**

ಮೌನಂ ಪಂಡಿತ ಲಕ್ಷಣಂ, ಉದ್ಯೋಗಂ ಪುರುಷ ಲಕ್ಷಣಂ

# ವ್ಯಕ್ತಿ ಪರಿಚಯ : ಚೆಟ್ಟಳ್ಳಿಯ ಸವ್ಯಸಾಚಿ ದಿ|| ಪೇರಿಯನ ಎಂ. ಪೂವಯ್ಯನವರು

ತಾನು, ತನ್ನವರು ಮತ್ತು ತನ್ನೂರು ಇವುಗಳ ಏಳಿಗೆಯ ಕನಸ್ಸನ್ನು ಹೊತ್ತು ಅದನ್ನು ನನಸು ಮಾಡಲು ತನ್ನ ಕೊನೆಯ ಉಸಿರಿನವರೆಗೂ ಅಹರ್ನಿಶಿ ಶ್ರಮಿಸಿದ ಹಿರಿಯ ಚೇತನ ದಿವಂಗತ ಪೇರಿಯನ ಎಂ. ಪೂವಯ್ಯನವರು. ಇವರನ್ನು ನೆನೆದಾಗಲೆಲ್ಲಾ ನಮಗೆ ಮೊದಲು ನೆನಪಿಗೆ ಬರುವುದು ಚೆಟ್ಟಳ್ಳಿ ಪ್ರೌಢಶಾಲೆ. ಇಂದು ಕೊಡಗಿನ ಪ್ರೌಢಶಾಲೆಗಳಲ್ಲಿ ಒಂದು ಉತ್ತಮ ಪ್ರೌಢಶಾಲೆ ಎಂಬ ಕೀರ್ತಿಗೆ, ಭಾಜನವಾದ ಚೆಟ್ಟಳ್ಳಿ ಪ್ರೌಢಶಾಲೆ ದಿವಂಗತರ ಕನಸಿನ ಕೂಸು ಎಂದರೂ ತಪ್ಪಾಗಲಾರದು. 'ಈ ಊರಿನಲ್ಲಿ, ಪ್ರೌಢಶಾಲೆ ತೆರೆದರೆ ನಿನ್ನ ದನಕಾಯಲು ಮಕ್ಕಳು ಸಿಗಲಾರರು!' ಎಂಬ ಎಚ್ಚರಿಕೆಯ - ಅನೇಕ ವೈರುದ್ಧಗಳ ನಡುವೆಯೂ ಛಲ ಬಿಡದ ತ್ರಿವಿಕ್ರಮನಂತೆ ದುಡಿದ ದುಡಿಮೆಯ ಫಲವಾಗಿ ಇಂದು ಚೆಟ್ಟಳ್ಳಿಯಲ್ಲಿ ಮಡಿಕೇರಿ - ಸಿದ್ದಾಪುರ ರಸ್ತೆಯ ಬದಿಯ ಪುಟ್ಟ ಗುಡ್ಡದ ಮೇಲೆ ಪ್ರಕೃತಿಯ ಮಡಿಲಲ್ಲಿ ಪ್ರೌಢಶಾಲೆಯೊಂದು ತಲೆ ಎತ್ತಿ ನಿಂತಿದೆ. ಪೂವಯ್ಯನವರ ಹೆಸರನ್ನು ಚಿರಕಾಲ ಬೆಳಗುವ ನಂದಾದೀವಿಗೆಯಾಗಿದೆ.

ದಿ. ಪೇರಿಯನ ಮುದ್ದಯ್ಯ ಮತ್ತು ದಿ. ಚಿಣ್ಣಮ್ಮನವರ ದ್ವಿತೀಯ ಪುತ್ರರಾಗಿ ದಿನಾಂಕ 3-11-1911ರಲ್ಲಿ ಪೂವಯ್ಯನವರ ಜನನವಾಯಿತು. ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮರಗೋಡು ಶಾಲೆಯಲ್ಲಿ ಮತ್ತು ಚೆಟ್ಟಳ್ಳಿಯ ಕೈಸಂಬಳ ಶಾಲೆಯಲ್ಲಿ ಮುಗಿಸಿ, ಮಡಿಕೇರಿಯ ಅಂದಿನ ಸೆಂಟ್ರಲ್ ಹೈಸ್ಕೂಲ್ (ಈಗ ಸರಕಾರಿ ಪದವಿ ಪೂರ್ವ ಕಾಲೇಜು)ನಲ್ಲಿ ಮೆಟ್ರಿಕ್‌ವರೆಗಿನ ಶಿಕ್ಷಣ ಪಡೆದರು. ಅಂದು ಅವರು 'ಕಮರ್ಷಿಯಲ್' ಪಾಠಗಳನ್ನು ಮತ್ತು ಸಂಸ್ಕೃತ ಭಾಷೆಯನ್ನು ಕಲಿತರಂತೆ ! 1934ರಲ್ಲಿ ದಂಬೆಕೋಡಿ ಬೋಪಯ್ಯನವರ ಮಗಳು ಪೂವಮ್ಮನವರ ಕೈಹಿಡಿದು ತುಂಬಿದ ಸಂಸಾರದಲ್ಲಿ ಆದರ್ಶ ಸತಿಪತಿಗಳಾಗಿದ್ದರು. ಮೂವರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಪಡೆದ ತುಂಬು ಸಂಸಾರ ಇವರದು.

'ಊಟಕ್ಕೆ ಇಲ್ಲದವನಿಗೆ ಉಪಾಧ್ಯಾಯ ಕೆಲಸ' ಎಂದು ಆಡಿಕೊಳ್ಳುತ್ತಿದ್ದ ಕಾಲದಲ್ಲಿ, ಈ ಮಾತಿಗೆ ವಿರುದ್ಧವಾಗಿ ಚೆಟ್ಟಳ್ಳಿ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯನಾಗಿ ವೃತ್ತಿ ಜೀವನಕ್ಕೆ ಪಾದಾರ್ಪಣೆ ಮಾಡಿದರು. ತದನಂತರ ಮಡಿಕೇರಿ ಪಿಯರ್‌ಲೆಸ್ ಕಂಪೆನಿ, ಸಿಂಕೋನ ಕಂಪೆನಿಗಳಲ್ಲಿ ಗುಮಾಸ್ತರಾಗಿ, ಭೂತನಕಾಡ್, ಪಾಲಿಬೆಟ್ಟ, ಎಮ್ಮೆಗುಂಡಿ ಕಾಫಿ ತೋಟಗಳಲ್ಲಿ 'ರೈಟರಾಗಿ', ಖಾಸಗಿ ಬಸ್ಸಿನವರಿಗೆ ಪರವಾನಗಿ ನೀಡುವಂತ ಜವಾಬ್ದಾರಿಯುತ 'ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ'ಯಾಗಿ, ಮೂರು ವರ್ಷಗಳ ಕಾಲ 'ಜ್ಯೂರಿ' (ಎಸ್ಸೆಸ್ಸರ್) ಆಗಿ ವಿವಿಧ ರಂಗಗಳಲ್ಲಿ ದುಡಿದು ಅಪಾರ ಅನುಭವ ಸಂಪನ್ನರಾಗಿದ್ದರು. 1937ರಲ್ಲಿ ಉದ್ಯೋಗ ಬಿಟ್ಟು ತನ್ನ ಮನೆ ತೋಟಗಳ ಕಡೆ ಹೆಚ್ಚು ಗಮನವಿತ್ತು ಉತ್ತಮ ವ್ಯವಸಾಯಗಾರ, ಆದರ್ಶ ಕೃಷಿಕರೆಂಬ ಹೆಗ್ಗಳಿಕೆಗೆ ಪಾತ್ರರಾದರು.

'ಜನತಾ ಸೇವೆಯೇ ಜನಾರ್ಧನನ ಸೇವೆ' ಎಂಬ ನಾಣ್ನುಡಿಯಂತೆ ಪೂವಯ್ಯನವರು ಊರ ಹಾಗೂ ಪರಊರಿನ ಅನೇಕ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದವರು. ಚೆಟ್ಟಳ್ಳಿ ಸಹಕಾರ ಸಂಘದ ಸದಸ್ಯರಾಗಿ, ಕಾಯದರ್ಶಿಯಾಗಿ ಹಾಗೂ ಅಧ್ಯಕ್ಷರಾಗಿ ವಿವಿಧ ಸ್ಥಾನಗಳಲ್ಲಿ ದುಡಿದು ಸಂಘದ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾದರು. 1946ರಿಂದ ಅಂದಿನ ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ರಾಜಕೀಯದಲ್ಲಿ ದುಡಿದರು. ಆಸ್ತಿಕರಾದ ಇವರು ಚೆಟ್ಟಳ್ಳಿ ಭಗವತಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಶ್ರಮಿಸಿದರು. ತಮ್ಮ ಕಾಲದಲ್ಲಿ ವಿದ್ಯೆಗೆ ಹೆಚ್ಚು ಉತ್ತೇಜನ ಇಲ್ಲದ್ದನ್ನು ಮನಗಂಡ ಇವರು ಚೇರಳ ಶ್ರೀಮಂಗಳ ಕಿರಿಯ ಪ್ರಾಥಮಿಕ ಶಾಲೆ, ಚೆಟ್ಟಳ್ಳಿ ಮಾದರಿ ಪ್ರಾಥಮಿಕ ಶಾಲೆ, ಮರಗೋಡು, ನುಜರಾಯ ಪಟ್ಟಣ, ಮದೆನಾಡು ಪ್ರೌಢಶಾಲೆಗಳಿಗೂ ಧನಸಹಾಯ ಮಾಡಿದ್ದರು. ಚೆಟ್ಟಳ್ಳಿ ಪ್ರೌಢಶಾಲಾ ರೂವಾರಿಗಳಲ್ಲಿ ಪ್ರಮುಖರಾಗಿ, ಚೆಟ್ಟಳ್ಳಿ ವಿದ್ಯಾವರ್ಧಕ ಸಂಘದ ಸ್ಥಾಪನೆಯಿಂದಲೇ ಅದರ ಗೌರವ ಕಾರ್ಯದರ್ಶಿಯಾಗಿ ಹಾಗೂ ಶಾಲೆಯ ಸಂಚಾಲಕರಾಗಿ ಸುಮಾರು ಒಂದುವರೆ ದಶಕಗಳ ಕಾಲ ದುಡಿದರು. ತಮ್ಮ ಮಾತಾಪಿತರ ಜ್ಞಾಪಕಾರ್ಥ ಒಂದು ಕೋಣೆಯನ್ನು ಕಟ್ಟಿಸಿದ್ದಲ್ಲದೆ ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ಕಾರಣರಾದರು. ಅಪ್ಪಟ ಕನ್ನಡಾಭಿಮಾನಿಯಾದ ಇವರು ಚೆಟ್ಟಳ್ಳಿ ಮತ್ತು ಮದೆನಾಡು ಪ್ರೌಢಶಾಲೆಗಳಲ್ಲಿ ತಮ್ಮ ಮಾತಾಪಿತರ ಜ್ಞಾಪಕಾರ್ಥ ದತ್ತಿ ನಿಧಿಯನ್ನು ಸ್ಥಾಪಿಸಿ, ಪ್ರತಿ ತರಗತಿಯಲ್ಲಿ ಕನ್ನಡ ಪಾಠದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆಯುವ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ವಿದ್ಯಾರ್ಥಿವೇತನ ದೊರೆಯುವಂತೆ ಮಾಡಿದರು. ತಮಗಿದ್ದ ದೀನದಲಿತ ಜನರ ಕಕ್ಕುಲತೆಯ ದ್ಯೋತಕವಾಗಿ ಚೆಟ್ಟಳ್ಳಿ ಸರಕಾರಿ ಆಸ್ಪತ್ರೆ, ಮಡಿಕೇರಿ ಅಶ್ವಿನಿ ಆಸ್ಪತ್ರೆ ಮೊದಲಾದವುಗಳಿಗೆ ಧನಸಹಾಯ ಮಾಡಿರುವರು. ಕೊಡಗಿನ ಯಾವುದೇ ಉತ್ತಮ ಕೆಲಸ ಕಾರ್ಯಗಳಿಗೆ ಅವರ ಸಹಾಯ ಹಸ್ತ ಯಾವತ್ತೂ ಇದ್ದೇ ಇರುತ್ತಿತ್ತು. ತಾನು ಸಹಾಯ ಮಾಡುವುದಲ್ಲದೆ ಅನ್ಯರೂ ಸಹಾಯ ಮಾಡುವಂತೆ ಪ್ರೋತ್ಸಾಹಿಸುತ್ತಿದ್ದರು.

ನಮ್ಮವರು ಮುಂದೆ ಬರಬೇಕೆಂಬ ಪ್ರೀತಿ ಅಭಿಮಾನಗಳಿಂದ ಕೊಡಗು ಗೌಡ ವಿದ್ಯಾ ಸಂಘದ ಗೌರವ ಕಾರ್ಯದರ್ಶಿಯಾಗಿ ಸುಮಾರು 15-16 ವರ್ಷಗಳ ಕಾಲ ಸೇವೆ ಸಲ್ಲಿಸಿರುವರು. ಮೈಸೂರಿನಲ್ಲಿರುವ 'ಕೊಡಗು ಗೌಡ ವಿದ್ಯಾರ್ಥಿ ನಿಲಯ' ಕಟ್ಟಡ ಸಮಿತಿಯ ಅಧ್ಯಕ್ಷರಾಗಿ ಮಾಡಿದ ಕೆಲಸ ಎಂದೂ ಯಾರೂ ಮರೆಯುವಂತದ್ದಲ್ಲ. ಮಡಿಕೇರಿಯ ನೂತನ ಕಲ್ಯಾಣ ಮಂಟಪವಲ್ಲದೆ [redacted]ಡ ಸಮಾಜ ಕಲ್ಯಾಣ ಮಂಟಪಗಳಿಗೆ ಇವರ ಸಹಾಯ ಹ[redacted]ದ್ದೇ ಇರುತ್ತಿತ್ತು. ಗೌಡ ಜನಾಂಗದಲ್ಲೇ ಮೊದಲ ಬಾರಿಗೆ ಕೆಲವು ಸ್ನೇಹಿತರೊಂದಿಗೆ ಸೇರಿ ಶ್ರೀಮಂಗಲ ಗ್ರೂಪ್ ಆಫ್ ಎಸ್ಟೇಟ್‌ನ್ನು (ಕಂಪೆನಿ ತೋಟ) ಸ್ಥಾಪಿಸಿದ ಕೀರ್ತಿ ಇವರದು.

---

**ನಾಯಿಯ ಬಾಲ ನಳಿಗೆಯಲ್ಲಿ ಹಾಕಿದರೆ ಡೊಂಕು ಬಿಟ್ಟೀತೆ ?**

'ತಂದೆಯಿಂದ ಬಳುವಳಿಯಾಗಿ ಬಂದ ಜನಾಂಗ ಪ್ರೇಮ ಮತ್ತು ಛಲ, ತಾಯಿಯ ಪ್ರೀತಿ ಶ್ರಮದ ದುಡಿಮೆ, ಕೈ ಹಿಡಿದ ಪತ್ನಿಯಿಂದ ಸಮಾಜ ಸೇವೆಗೆ ಉತ್ತೇಜನ ಇವುಗಳು ನನ್ನ ಈ ಎಲ್ಲಾ ಕೆಲಸಗಳಿಗೆ ಪ್ರೇರಣೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಪೂವಯ್ಯನವರು 23-1-1997 ರಲ್ಲಿ ತನ್ನ 86ರ ಹರೆಯದಲ್ಲಿ ಇಹಲೋಕ ಯಾತ್ರೆಯನ್ನು ಮುಗಿಸಿದರು. ಇವರ ಶಿಕ್ಷಣ ಸಹಕಾರ ರಂಗಗಳಲ್ಲಿನ ಸಮಾಜಸೇವೆಯನ್ನು ಗುರುತಿಸಿ 1985ರಲ್ಲಿ ಸುಳ್ಯದಲ್ಲಿ ನಡೆದ ಪ್ರಥಮ ದಕ್ಷಿಣ ಕನ್ನಡ ಮತ್ತು ಕೊಡಗು ಗೌಡ ಸಮ್ಮೇಳನದಲ್ಲಿ ಸನ್ಮಾನಿಸಿದರು. ತಮ್ಮ ಇಳಿ ವಯಸ್ಸಿನಲ್ಲೂ ಯುವಕರನ್ನು ನಾಚಿಸುವ ಹುಮ್ಮಸ್ಸಿನಿಂದ ಇರುತ್ತಿದ್ದ ಪೂವಯ್ಯನವರು 'ನಮ್ಮವರು ಎಂದೂ ಯಾರಿಗೂ ಕೀಳಲ್ಲ; ನಮ್ಮಲ್ಲಿರುವ ಕೀಳರಿಮೆಯನ್ನು ಬಿಟ್ಟು ಛಲದಿಂದ ಮುನ್ನುಗ್ಗಬೇಕು' ಎಂದು ಹೇಳುತ್ತಿದ್ದ ಮಾತು ಅಂದು, ಇಂದು ಎಂದೆಂದೂ ಅನುಕರಣೀಯ.

ಪಿ. ಜಿ. ಅಂಬೆಕಲ್ ಚೆಟ್ಟಳ್ಳಿ

## ಹೆಂಗೊಳರಿ?

ಬಿ. ಆರ್. ಜೋಯಪ್ಪ, ಮದೆ

ನಿಮ್ಮನ ಕಾಂಬದೆ ಭಾಳ ಸಮೆ ಆತಲ್ಲಾ? ಹೆಂಗೊಳರಿ, ಏನ್ ಕಥ! ಮನೆಲೆಲ್ಲಾ ಸೌಖ್ಯನಾ? ಅಂದ್ ಮದುವೆ ಮನೇಲೋ, ಸಂತೆಲೋ ಅಥವಾ ಕೆಸ್ರ್‌ಗದ್ದೆ ಓಟಲೋ ಎಲ್ಲೋ ನಿಮ್ಮನ ಒಮ್ಮೆ ಆಂಜಿದಂಗಾತ್. ನೀವು ಹೌದೋ ಅಲ್ಲೋ ಸರಿಯಾಗಿ ಕಂಡತ್‌ಲೆ. ಈ ಸರ್ತಿ ಸಕತ್ ಮೊದುವೆಗಲ್ಲಾ? ನಮ್ಮನೇಲಿ ಒಬ್ಬಂಗೆ ಆ ಮೊದುವೆಗೆ ಈ ಮೊದುವೆಗೆ ಸುತ್ತುದೇ ಡ್ಯೂಟಿ ಆಗೋಗಿತ್ತ್. ಅಲ್ಲಿ ಇಲ್ಲಿ ಉಂಡ್ ತಿಂದ್ ಮನೇಲಿ ಊಟಕ್ಕೆ ಅಂವ ಕೈ ಕುತ್ತಿಕಿಲೆ. ಅದೆಲ್ಲಾ ಇರ್ಲಿ, ನಿಮ್ಮ ನಾಟಿ ಕೆಲ್ಸ ಹೆಂಗಾತ್? ಅಲ್ಲಾ ಈ ಮಳೆದ್ ಕಥೆ ಎಂತದ್ ತಾ? ಮಾನಿ ಗದ್ದೆ ನಾಟಿಗೆ ಗೆದ್ಲ್ ಹತ್‌ತಾ ಉಟ್ಟುತ ಸುದ್ದಿ! ನಡ್‌ಸಾಲವು ಬದ್ಕಿಕಂಡವೆ. ಆದರೆ ಈ ಕರೆ ಸಾಲ್‌ನವರ ಕಥೆ? ಸಧ್ಯ ನೀವು ನಿಮ್ಮ ಗದ್ದೆನ ಶುಂಠಿ ಬೆಳೆವುಕೆ ಕೊಟ್ಟುತ್‌ಲೆ ತಾನೆ? ಗದ್ದೆಲಿ ನಾಟಿ ನೆಟ್ ಆ ನಾಟಿ ಕಪ್ಪು ಹತ್ತಕನ ಗದ್ದೆನ ನೋಡಿಕೆ ಎಂಥಾ ಪೊರ್ಲು! ಆ ನಾಟಿ ಚಂಡೆ ಹೊಡ್ಡು ಬಾದು, ಅದರ್ಲಿ ಹೊಡೆ ಬಾದು, ಅದ್ ಕದ್ರ್ ದಾಟುದು, ಕಾಯಿ ಬಾಂಗುದು, ಹಣ್ಣಾದು, ಆಗ ಗದ್ದೆ ಪುಣಿಲಿ ಓಡಾಡಕೆನ ಬೆಳೆದ್ ಗಮ್ ಗಮಾ ವಾಸನೆ ಬಾದು ಕೊಯ್ಲ್ ಮಾಡಿ ಒಕ್ಲು ಹಾಕುದು, ಬತ್ತ ಬೀಸುದು, ಕಡಿಕೆಲೋ, ಪತ್ತಾಯಲೋ ತುಂಬಿ ತುಳುಕುದರ ನೋಡು ಲಾಯ್ಕನೋ ಅಥವಾ ಗದ್ದೆನ ಪೂರಾ ಶುಂಠಿಯವ್ಕೆ ಕೊಟ್ ಕಂಡ್ ಅಂಗಡಿಂದ ತೂಕ ಮಾಡ್ಸಿಕಂಡ್ ಅಕ್ಕಿ ತಾದು ಲಾಯ್ಕನೋ? ಹೌದಪಾ, ಶುಂಠಿಲಿ ದುಡ್ಡು ಬಂದತ್. ದುಡ್ಡು.... ದುಡ್ಡು.... ದುಡ್ಡು.... ದುಡ್ಡಿದ್ದಂವ ನೆಮ್ಮದಿಂದ ಇಲ್ಲೆ. ಶುಂಠಿ ಗದ್ದೆಲಿ ಚರಂಡಿ ತೆಗ್ದ್ ಆ ಚರಂಡಿನ ಮುಚ್ಚೊಕೊರೆ, ತು[illegible] ಏರಿನೆಲ್ಲಾ ಸರಿ ಮಾಡೊಕೊರೆ ಶುಂಠಿಲಿ ಬಂದ ದು[illegible] ಇನ್ನೆತ್ತಲೋ ಹೋದೆತ ಯಾರೋ ಹೇಳ್ತಿದ್ದ್.

ಆಹಾರದ ಬೆಳೆ ಬತ್ತ. ಅದರ ಬೆಳೆದ ಗದ್ದೆಲಿ ಅದೇ ಬೆಳೆ ಇದ್ದರೆ ಅದೇ ನಮ್ಮ ಭಾಗ್ಯ. ಒಂದ್ ಕಾಲಲಿ ಗದ್ದೆ ಕೋವುಲಿ ಹೋದೇ ಒಂದು ಖುಷಿ. ಸಾಲ್‌ನಾಟಿ, ಆ ಗದ್ದೆಲಿ ಉದ್ದೋಕೆ ಕರಿಗುತ್ತಿ, ಆ ಗುತ್ತಿ ಮೇಲೆ ಬೆತ್ ಹಕ್ಕಿ- ಇಂದ್? ಅದೆಲ್ಲಾ ಹೋತು. ನಾಟಿಗದ್ದೆ ಅಲ್ಲ ಶುಂಠಿ ಗದ್ದೆ. ಪೊಲಿ ಪೊಲಿ ದೇವಾ.....ಅತ ಹೇಳಿಕಂಡ್ ಶುಂಠಿ ಬುಡನ ಕೊಯ್ಯೋದಾ?

ಓಹೋ! ನಾ ಏನೋ ಹೇಳಿಕೆ ಹೊರ್ಟಂವ ಇನ್ನೆತ್ತಲೋ ಹೊರ್ಟೊಳೆ. ನಿಮ್ಮ ಮಕ್ಕ ಸ್ಕೂಲ್, ಕಾಲೇಜಿಗೆ ಹೋಗ್ತಾ ಒಳೊಲ್ಲಾ. ಸ್ಕೂಲ್ ಮಕ್ಕಳ್‌ದ್ ಹೆಂಗೂ ಆದು. ಈ ಕಾಲೇಜ್ ಮಕ್ಕಳ್‌ದ್ ಮಾತ್ರ ಕಷ್ಟ. ದಿನಕ್ಕೊಂದು ಬಟ್ಟೆ. ಆರು ದಿನಕ್ಕೆ ಆರ್ ಸೂಟು! ಎಲ್ಲಿಂದ ತಾದು? ಈಗಂತೂ ಕಂಪ್ಯೂಟರ್ ಗಾಳಿ! ಯಾರ ಬಾಯಲೂ ಅದೇ ಮಾತ್.

ಹೇಳ್ದಂಗೆ ಮಡಿಕೇರಿ ಪ್ರೈವೇಟ್ ಬಸ್‌ಸ್ಟ್ಯಾಂಡ್‌ನ ಬದಲಾಯಿಸುವೆ ಗಡ. ಒಳ್ಳದಲ್ಲಾ ! ಅಂ ನೀವು ಈಗಳೂ ಪಿಲ್ಸ್, ಟಾನಿಕ್ ತಕಣ್‌ತಾ ಒಳರಿನಾ? ! ಕೆಲವು ಕಾಯಿಲೆಗ ಬಂದ್ ಬಂದ್ ಬಾಗ್ಲ್ ಬಡ್ಡವೆ. ಹಾಳಾದ ಮಾತ್ರೆಗಳೋ ಅಬ್ಬಬ್ಬಾ ಆ ಮಾತ್ರ ತಿಂದರೆ ಎದೆ ಉರಿ, ಈ ಮಾತ್ರೆ ತಿಂದರೆ ಹೊಟ್ಟೆಉರಿ, ಇನ್ನೊಂದ್ ತಿಂದರೆ ಕಣ್ಣುರಿ, ತಲೆ ಸುತ್ತು....ಏನೋ ಅವು ಕೊಟ್ಟವೆ, ತಕ್ಕಂಡವ್ ತಿಂದವೆ. ಎಂತ ಅವಸ್ಥೆ ಅಲಾ.

ಕೊಟ್ಟ ಗೂಡೆ ಬಂದಿತ್ತಾ? ಹತ್ತೊಳೊಯೋದು, ಆಟಿ ಕೂರ್ದು ಎಲ್ಲಾ ಆತಾ? ಈಗೆಲ್ಲಾ ಯಾರ್ ಕಳ್ಸಿವೆ. ಶಾಸ್ತ್ರಕ್ಕೆ ಬಂದಂಗೆ ಮಾಡಿ ಹೋಬುಟ್ಟವೆ.

ನಾ ಮರ್ತೇಬುಟ್ಟಿದೆ. ಬಂದೇ ಬುಡ್ತಲ್ಲಾ? ವರ್ಷಕ್ಕೊಂದೇ ಹಬ್ಬ. ಕೈಲ್ ಪೋದ್. ಮಳೆ ಬರ್ಲಿ, ಬುಡಲಿ, ಬೆಳೆ ಬರ್ಲಿ, ಬುಡಲಿ ಆ ಹಬ್ಬನ ಮಾತ್ರ ಬುಡಂಗಿಲ್ಲೆ. ವರ್ಷಂದ ವರ್ಷಕ್ಕೆ ಗೌಜಿನೇ ಜಾಸ್ತಿ. ಮೂರು ಕೆ. ಜಿಯವು ಐದಕ್ಕೆ, ಎರಡ್ ಕುಪ್ಪಿಯವು ನಾಕ್ ಕುಪ್ಪಿಗೆ ಕೈ ನೀಂಡಿವೆ. ಅಯ್ಯೋ ತಿಂದ್ ಉಂಡ್ ಸಂಪಾದ್ನೆ ಗೆಯ್ಯೊದ್ ಯಾಕೆ? ಸುಖಪಡಿಕೆ. ನಿಜ, ಆದರೂ ಹಂಗೆ ಖರ್ಚ ಮಾಡ್ದು ಯಾಕೆ?

ಮುಖ್ಯ ವಿಷಯ ಗೊತ್ತುಟಾ? ಬೈತಡ್ಕ ಶ್ರೀಮತಿ ಜಾನಕಿಯವು ಸಂಗ್ರಹ ಮಾಡ್ದ - ಹಸೆಮಣೆ - ನಿಮ್ಮನೇಲಿ ಉಟ್ಟಾ? ಒಳ್ಳೆ ಪುಸ್ತಕ ಕಷ್ಟಪಟ್ಟ್ ಹಾಡ್‌ಗಳ ಸಂಗ್ರಹ ಮಾಡಿಯೊಳೊ. ನೀವೂ ತಕ್ಕಂಡ್ ಅವುಕೆ ಪ್ರೋತ್ಸಾಹ ಕೊಟ್ಟರೆಂತೇಳುವ ವಿಶ್ವಾಸ ಉಟ್ಟು. ನಮಸ್ಕಾರ.

ಆಗಲಿ, ಇಲ್ಲಿಗೆ ನನ್ನ ಕೊರ್ತನ ನಿಲ್ಸನೆ. ಇನ್ನೊಮ್ಮೆ ಕಂಡ್‌ಕಂಬನೊ ನಮಸ್ಕಾರ.

### ಪ್ರಿಯಕ(ಕೆ)ರ

ಪ್ರಿಯಕರನು ಅವನು
ಮದುವೆಯಾಗುವರೆಗೂ,
ನಂತರ ಆಗುವ ಅವಳ
ಪ್ರಿಯ ಕೆರ

ಚಾಂಗನ ಪಿ. ಪೂವಯ್ಯ, ಮೊಣ್ಣಂಗೇರಿ.

ಸಾಲಿಲ್ಲದ ಮನೆಯಿಲ್ಲ, ಸೋಲಿಲ್ಲದ ಮನುಷ್ಯನಿಲ್ಲ

# ಮಳೆಗಾಲದ ಜನಪ್ರಿಯ ತರಕಾರಿ : ಕಣಿಲೆ

ಮಳೆಗಾಲದಲ್ಲಿ ಕೊಡಗಿನವರು ಬಳಸುವ ತರಕಾರಿಗಳ ಪಟ್ಟಿಯಲ್ಲಿ ಕಣಿಲೆಗೆ ಮೊದಲ ಸ್ಥಾನ. ಊರ ಸಂತೆಯಲ್ಲಿ ಮಾರುಕಟ್ಟೆಯಲ್ಲಿ ಕಣಿಲೆ ಕಾಣ ಸಿಕ್ಕಿದರೆ, ಬೇರೆ ತರಕಾರಿ ಕೊಳ್ಳುವದನ್ನು ಬಿಟ್ಟು ಕಣಿಲೆಯನ್ನು ಕೊಂಡು ಕೊಳ್ಳುವತ್ತ ಆಸಕ್ತಿ ತೋರುವವರು ಅಧಿಕ. ಮಳೆಗಾಲ ಬಂತೆಂದರೆ, ಹಳ್ಳಿಗಳಲ್ಲೇಕೆ? ಕೊಡಗಿನ ಪಟ್ಟಣಗಳಲ್ಲೂ ಕಣಿಲೆಗೆ ವಿಶೇಷ ಬೇಡಿಕೆ.

'ನಿಮ್ಮಲ್ಲಿ ಕಣಿಲೆ ಇದೆಯಾ?' ನೋಡಿ ಎಲ್ಲಾದರೂ ಸಿಕ್ಕಿದರೆ ನಮಗೊಂದಿಷ್ಟು ಕಣಿಲೆ ತಲುಪಿಸಿ' ಎಂದು ನಗರದವರು ಹಳ್ಳಿಗರನ್ನು ಕೋರುವ ದೃಶ್ಯ ಸಾಮಾನ್ಯ. ಹಳ್ಳಿಗರೂ ಅಷ್ಟೇ, ಸಿಕ್ಕಲ್ಲಿಂದ ಕಣಿಲೆಯನ್ನು ಕುಯ್ದು ತಂದು ಮಾರಿ ಒಂದಷ್ಟು ಕಾಸು ಮಾಡಿಕೊಳ್ಳುತ್ತಾರೆ.

ಕಣಿಲೆ ಶೀತ ಪ್ರದೇಶಕ್ಕೆ, ಅಲ್ಲಿನ ಹವಾಮಾನಕ್ಕೆ ಹೇಳಿ ಮಾಡಿಸಿದ ಜನಪ್ರಿಯ ತರಕಾರಿ. ಸಾಕಷ್ಟು ವೈವಿಧ್ಯಮಯ, ಸ್ವಾದಿಷ್ಟ ಖಾದ್ಯಗಳನ್ನು ಅದರಿಂದ ಮಾಡಬಹುದು. ಅಡುಗೆ ನುರಿತವರ ಕೈಯ್ಯಲ್ಲಿ ಕಣಿಲೆ ನಾನಾ ರೀತಿಯ ಸ್ವಾದಿಷ್ಟ ತಿಂಡಿ ತಿನಿಸುಗಳಾಗಿ ಬಾಯಲ್ಲಿ ನೀರೂರಿಸುತ್ತದೆ. ಮಳೆಗಾಲದಲ್ಲಿ ಕಣಿಲೆಯ ಸಾರು, ಪತ್ರೊಡೆ, ಪಲ್ಯ ವಡೆ, ರೊಟ್ಟಿ, ಉಂಡಲಕಾಳು, ಉಪ್ಪಿನಕಾಯಿ ಮುಂತಾದ ನೂರೆಂಟು ವಿಶಿಷ್ಟ ತಿಂಡಿ ತಿನಿಸುಗಳ ತಯಾರಿಕೆಗೆ ಕಣಿಲೆಯನ್ನು ಬಳಸಿ ಕೊಳ್ಳುವ ಗುಟ್ಟು ಕೊಡಗಿನ ಮಹಿಳೆಯರಿಗೆ ಗೊತ್ತಿದೆ.

ಇದೇನಿದು ಕಣಿಲೆ? ಎಂದು ಕೊಡಗಿನೇತರರು ಅಚ್ಚರಿ ಪಡಬಹುದು. ಕೊಡಗಿನಂತೆ ಇತರೆಡೆಗಳಲ್ಲಿ ಕಣಿಲೆಯನ್ನು ಬಳಸುವವರು ಬಹಳ ಕಡಿಮೆ. ದಕ್ಷಿಣ ಕನ್ನಡದವರಿಗಂತೂ ಕಣಿಲೆಯ ಬಗ್ಗೆ ಅಸಡ್ಡೆಯೇ. ಹಾಗೆಂದು ಕಣಿಲೆ ಅಸಡ್ಡೆ ತೋರುವ ವಸ್ತುವೇನಲ್ಲ. ಜನಪ್ರಿಯ ತರಕಾರಿಯಾಗಿ ಮೆರವು ಕಣಿಲೆ ಬಿದಿರಿನ ಎಳೆಯ ಕುಡಿಗಳು!

ಹಾಗೆ ನೋಡಿದರೆ, ಬಿದಿರಿನೊಡನೆ ಮನುಷ್ಯನದು ಒಂದು ವಿಧದ ಭಾವನಾತ್ಮಕ ಸಂಬಂಧ. ಅನಂತ ವಿಸ್ಮಯಗಳ, ಅಪಾರ ಬಳಕೆಗಳ ಬಿದಿರು ಎಲ್ಲರಿಗೂ ಪರಿಚಿತ ಸಸ್ಯ. ಹೇರಳವಾಗಿ ಅದು ಲಭ್ಯವೂ ಕೂಡಾ,. ನಿತ್ಯ ಬಳಕೆಯಲ್ಲಿರುವ ಬಿದಿರನ ಬುಟ್ಟಿ, ತಟ್ಟೆ, ಮೊರ, ಗೂಡೆಗಳನು, ತಡಿಕೆಗಳು, ಸುಂದರ ಕಲಾಕೃತಿಗಳು ಒತ್ತಟ್ಟಿಗಿರಲಿ, ಬಿದಿರು ಮೊಳಕೆಯೊಡೆದು ಬರುವಾಗಲೇ ಜನ ಸಾಮಾನ್ಯರ ಆಹಾರವಾಗಿ ಬಳಕೆಯಾಗುವುದು ವಿಶಿಷ್ಟವೇ ಸರಿ!

ಬಿದಿರು ಕೇವಲ ಒಂದು ಹುಲ್ಲು ಸಸ್ಯ. ಎಂಥದೇ ಪರಿಸರದಲ್ಲಿ ಉಳಿಯಬಲ್ಲ, ಬೆಳೆಯಬಲ್ಲ ಸಾಮರ್ಥ್ಯ ಹೊಂದಿರುವ ಬಿದಿರು, ಹಲವಾರು ವರ್ಷಗಳಿಂದ ಭೂಮಿಯಲ್ಲಿ ಅಸ್ತಿತ್ವವನ್ನು ಕಂಡುಕೊಂಡಿದೆ. ಯಾವ ಹುಲ್ಲನ್ನು ಹೋಲದಿದ್ದರೂ, ಬಿದಿರು ಅಪ್ಪಟ ಹುಲ್ಲು ಸಸ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಅದು ಬಹುವಾರ್ಷಿಕ ಬದುಕಿನ ಹುಲ್ಲು ಗಿಡ. ಇದಕ್ಕೆ ಕಾಂಡವಿದೆ, ಬಹುಗಣ್ಣುಗಳ ಈ ಕಾಂಡ ಒಳಗೆಲ್ಲ ಬರಿ ಟೊಳ್ಳು ಬಿದರ ಮೆಳೆ ನೆಲದೊಳಗೆ ಲೈಸೋಮುಗಳ ಜಾಲವನ್ನ ಹರಿಯಬಿಟ್ಟಾಗ ಅಲ್ಲಿಂದೆಲ್ಲ ಹೊಸ ಹೊಸದಾಗಿ ಮೊಳಕೆಯೊಡೆದು ಕಣಿಲೆ ರೂಪುಗೊಳ್ಳುತ್ತದೆ. ಕಣಿಲೆಯನ್ನು ಕಡಿಯದೆ ಬಿಟ್ಟರೆ ಎತ್ತರೆತ್ತರಕ್ಕೇರಿ ಬಿದಿರ ಮೆಳೆ ರೂಪುಗೊಳ್ಳುತ್ತದೆ.

ಕಣಿಲೆ ಹುಟ್ಟಲು ಮುಂಗಾರು ಕಾಣಿಸಿಕೊಳ್ಳಬೇಕು. ಮಳೆ ಬಿದ್ದು ಇಳೆ ತಂಪಾದಾಗ ದಟ್ಟ ಬಿದಿರ ಮೆಳೆಗಳೆಡೆಯಿಂದ ಮೊಳಕೆ ಹೊರ ಬರುತ್ತದೆ. ಈ ಮೊಳಕೆಯೇ ಕಣಿಲೆ. ಬಿದಿರು ಮೊಳಕೆಯೊಡೆದು ಕೆಲವು ದಿನಗಳಲ್ಲೇ ಕತ್ತರಿಸಿ ತಂದರೆ, ಅದರಿಂದ ದೊರಕುವ ತರಕಾರಿ ಉತ್ತಮವಾಗಿರುತ್ತದೆ. ಸುಮಾರು 2-3 ಅಡಿ ಎತ್ತರದ ಕಣಿಲೆಗಳೂ ಮಾರಾಟಕ್ಕೆ ಬರುತ್ತದೆ. ಕಣಿಲೆಯ ಮೇಲ್ಭಾಗದ ಪದರವನ್ನು ಬಿಡಿಸಿ ತೆಗೆದು ಒಳಗಿನ ನಾಜೂಕಾದ ತುಂಡಿನ ಮೃದು ಭಾಗವನ್ನು ಕತ್ತರಿಸಿ ತೆಗೆಯ ಬಹುದು. ಬೆಳೆದ, ಗಟ್ಟಿಯಾದ ತುಂಡು ಉಪಯೋಗಕ್ಕೆ ಬಾರದು. ಕಣಿಲೆಯ ಮೃದು ಭಾಗವನ್ನು ಚಕ್ರಾಕಾರವಾಗಿ ಕತ್ತರಿಸಿ ಸಾಮಾನ್ಯವಾಗಿ ಮೂರು ದಿನಗಳು ನೀರಿನಲ್ಲಿ ನೆನೆ ಹಾಕಬೇಕು. ಪ್ರತಿ ದಿನ ನೀರನ್ನು ಬದಲಿಸುತ್ತಾ ಮೂರು ದಿನಗಳ ನಂತರ ಕಣಿಲೆ ಯನ್ನು ವಿವಿಧ ತಿನಿಸುಗಳ ತಯಾರಿಕೆಯಲ್ಲಿ ಬಳಸಬಹುದು.

ಕಣಿಲೆ ಒಂದು ಉಷ್ಣ ತರಕಾರಿ. ಅದಕ್ಕೆ ಏನಾದರೂ ಔಷಧೀಯ ಮಹತ್ವ ಉಂಟೇ ಎಂಬುದರ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಂತಿಲ್ಲ. ಶೀತ ನಿವಾರಣೆಗಷ್ಟೇ ಯೋಗ್ಯ ಎಂದು ಕೊಂಡಿರುವ ಬಹಳಷ್ಟು ಮಂದಿ ಕಣಿಲೆಯನ್ನು ಎಲ್ಲಿಂದಾದರೂ ಸಂಪಾದಿಸಿ ತಿನಿಸುಗಳ ತಯಾರಿಕೆಗೆ ಬಳಸಿಕೊಳ್ಳುತ್ತಾರೆ.

ಮಕ್ಕಳಿಗಂತೂ ಕಣಿಲೆಯನ್ನು ಸಾಕಷ್ಟು ಸಾಹಸದಿಂದ ಸಂಗ್ರಹಿಸಿ ತರುವ ಕೆಲಸ ಖುಷಿ ಕೊಡುತ್ತದೆ. ಕಾವೇರಿ ನದಿಯ ತೀರದಲ್ಲಿ, ಕಾಫಿ ತೋಟಗಳ ಬದಿಯಲ್ಲಿ, ಮೈದಾನದಲ್ಲಿ ದಟ್ಟವಾಗಿ ಹಬ್ಬಿರುವ ಬಿದಿರು ಮೆಳೆಗಳ ನಡುವೆ ನುಸುಳಿ, ಬಿದಿರ ಮುಳ್ಳುಗಳನ್ನೆಲ್ಲ ಜಾಗರೂಕತೆಯಿಂದ ಕಡಿದು ತೆಗೆದು ಬುಡದ ಕಣಿಲೆಯನ್ನು ಕಿತ್ತು ತರುವುದೆ ಸಾಹಸದ ಮಾತೇ ಸರಿ. ಹಲವೆಡೆ ಕಣಿಲೆಯನ್ನು ಕುಯ್ಯಲೆಂದು ಉದ್ದನೆಯ ಕತ್ತಿಯನ್ನು ಇಟ್ಟು ಕೊಂಡಿದ್ದು, ಈ ಉದ್ದನೆಯ ಕತ್ತಿಯ ಜತೆಗೆ ಮರದ ಗಾಳವೊಂದಿದ್ದರೆ, ಎಂತಹ ಬಿದಿರ ಮೆಳೆಯನ್ನೂ ನುಸುಳಿ ಕಣಿಲೆ ತರುವ ಸಾಹಸ ಕಾರ್ಯವನ್ನು ಚಿಣ್ಣರು ಮಾಡುತ್ತಾರೆ.

ಈಗೀಗ ಕಣಿಲೆ ಮೊದಲಿನಂತೆ ಸುಲಭವಾಗಿ ಲಭಿಸುವುದಿಲ್ಲ. ಆರಂಭದಿಂದಲೂ ಮಾನವನ ಸಂಗಾತಿಯಾಗಿ, ಸಂಪನ್ಮೂಲವಾಗಿ ಮನ ಬೆಳವಣಿಗೆಯ ಸಾಧನವಾಗಿ ಬಂದ ಬಿದಿರು, ಈಗ ಅವನಿಂದಲೇ ಅವನತಿಯ ಹಾದಿ ಹಿಡಿದಿದೆ. ಮನುಷ್ಯನ ಅವ್ಯಾಹತ ದಾಳಿಯಿಂದಾಗಿ ಬಿದಿರ ವಂಶಗಳೇ ನಿರ್ವಂಶವಾಗ ಲಾರಂಭಿಸಿದೆ. ಮೊಳಕೆ ಯೊಡೆಯುವಾಗಲೇ ಮೂಡುವ ಕಣಿಲೆಯಿಂದ ಹಿಡಿದು ಬೆಳೆದ ಬಿದಿರಿನ ಕಾಂಡಗಳವರೆಗೆ ಬಹುಪಯೋಗಿಯಾಗಿರುವ ಬಿದಿರು ತನ್ನ ಅಂತ್ಯ ಕಾಣ ತೊಡಗಿದ್ದರೆ, ಸ್ವಾದಿಷ್ಟ ಜನಪ್ರಿಯ ತರಕಾರಿಯ ರುಚಿಯನ್ನು ಬೇಗನೆ ಮರೆಯಬೇಕಾಗಬಹುದು.

- ಪಿ. ಎಸ್. ಸುರೇಶ್ ಕಗ್ಗೋಡ್ಲು

ತಾಯಿಯನ್ನು ಹೊಡೆಯ ಬಾರದು, ಗುಬ್ಬಿಹಕ್ಕಿಯ ಗೂಡನ್ನು ನಾಶ ಮಾಡಬಾರದು

# ಕೊಡಗು ರಾಜರ ಕಾಲದಲ್ಲಿ ಗೌಡರ ಕಟ್ಟು ಕಟ್ಟಳೆಗಳನ್ನು ತೀರ್ಮಾನಿಸಲು ಭಾಗವಹಿಸಿದ ಮಹನೀಯರು ಮತ್ತು ತೀರ್ಮಾನಗಳು : ಸಂಗ್ರಹಗಾರರು : ದಿ. ಕೋಟೇರ ಎಸ್. ಕಾರ್ಯಪ್ಪನವರು, ಬಲ್ಲಮಾವಟಿ

(ಶ್ರೀ ಕೆ.ಎಸ್. ಕಾರ್ಯಪ್ಪನವರು ಗೌಡರ ಸಂಸ್ಕೃತಿ ಬಗ್ಗೆ ಮಾಹಿತಿಯನ್ನು ಪಡೆಯಲು ತುಂಬಾ ಶ್ರಮಿಸಿದ್ದಾರೆ. ಅವರು ಹಲವಾರು ಜನರನ್ನು ಬೇಟಿ ಮಾಡಿ ಇಂತಹ ವಿಷಯಗಳನ್ನು ಸಂಗ್ರಹಿಸುವುದಕ್ಕೆ ಪ್ರಯತ್ನ ಪಟ್ಟಿದ್ದು ನಮಗೆ ಪ್ರೋತ್ಸಾಹ ದಾಯಕವಾಗಿದೆ.)

ಶ್ರೀಮುಖ ಸಂವತ್ಸರ ಆಶ್ವೀಜ ಶುದ್ಧ ಹದ್ನೆ (1808) ಮುತ್ತು ಕಟ್ಟೆಮನೆ ದೇರಣ್ಣ ಗೌಡ ಕೊಡಗು ಜಿಲ್ಲೆ ಪುತ್ತೂರು ತಾಲೋಕು ಮಾಗಣೆ ಅಬಕಚೆ ಗೌಡ ನೆಡವಾಳಿ ಕುಂಬಗೌಡ, ಬೆಳ್ಳಾರಿ ಮಾಗಣೆ ಮಲ್ಲಜ್ಜನ ದೇರಗೌಡ, ಕೊರತದ ತಿಮ್ಮೇಯ್ಯ ಗೌಡ, ಬೊಳದ ಬೆಳ್ಳಿಗೌಡ, ಸರ್ವಕಜೆ ತಿಮ್ಮಯ್ಯಗೌಡ, ಕಾಸ್ಪಾಡಿ ತಿಮ್ಮಾಡ್ರು ಈಶ್ವರಗೌಡ, ಗಾಳಿಬೆಪ್ಪದೆರಯ್ಯಗೌಡ ಮೆರಕಟದ ಮಲ್ಲಪ್ಪ ಗೌಡ; ಕೂತನ ಮರಿಗೌಡ, ತೆಕ್ಕನರ ಲಿಂಗಗೌಡ, ಬಿರುಗಲು ಹಿಮ್ಮಣ್ಣಗೌಡ, ಬೊಳಪದವಾತಿ ಕಜಿ ದೆರಣಗೌಡ, ಕೂಳದ ತಿಮ್ಮಪ್ಪಗೌಡ, ಅಮರಸೀಮೆ ಚೊಕ್ಕಾಡಿ ಬೊಳೂರು ಸೋಮಗೌಡ, ಉಮ್ಮಣ್ಣದ ಡ್ಣ್ಣಾ ಗೌಡ, ಕಂದರ್ಪಡಿ ಕೋಬಿಲದ ಮುತ್ತಣ್ಣ ಗೌಡ, ಕೂವಳದ ಕೂಬಗೌಡ, ಮುಂಡೊಡಿ ಚನ್ನಪ್ಪಗೌಡ, ವಾಲ್ಕಜೆ ಚೆನ್ನೇಗೌಡ, ಮಡುಪಾಡಿ ಯೆಂಕಣ ಗೌಡ, ದೇವದ ಪುಟ್ಟಗೌಡ, ಬೀರೆಕಲ್ಲು ತಮ್ಮಣ್ಣಗೌಡ, ವೊಗುದ ಕುಮ್ಮಣ್ಣಗೌಡ, ಮಲ್ಕಜಿ ಪುಟ್ಯಗೌಡ, ಯಾಣಿಕಲ್ಲು ಬಾಳೆಡಿ ತಮ್ಮಣ್ಮ ಗೌಡ, ಉಡದೊಳಿ ಸುಬ್ಬುಗೌಡ, ಕಡೆಂಬಾಲ ಕೊಟಿಗೌಡ, ಬನ್ನಡ್ಕದ ಸುಬ್ಬೆಯಗೌಡ, ಹೌವುರೂನೆ ಬಾಯದ ಗೌಡ, ಕಡಮಕಲ್ಲು ಕೊಪ್ಪಡ್ಕದ ಸಣ್ಣಗೌಡ, ನೆಚ್ಯಣಕೆ ಗೌಡ ಅಜಪಾರರ ಕುಂಬಗೌಡ, ನೂಜಲದ ತಾಳಗೌಡ, ಪೆರಾಜೆ ಗ್ರಾಮದ ಮೊಟ್ಟಗೌಡ, ನೆಲ್ಲಡ್ಕದ ಸುಬ್ಬಗೌಡ, ನೂಜಿಲದ ತಾಳದ ಹೊಸೂರು ಮೋಚಗೌಡ, ಸಂಪಾಜೆ ದೇವಜನ ತಿಮ್ಮಗೌಡ, ತಾವುನಾಡು ರಾಮಗೌಡ, ಚೂರ್ತಲೆ ದೆರಣಗೌಡ, ಚಿರಕಜೆ ಲಿಂಗಗೌಡ, ಬಲ್ಯಾಯಿರ ವಂಟಿದೇರಣ್ಣಗೌಡ, ಬೆಂಗುನಾಡು ಪಟ್ಟೆ ಶಂಕರ ಗೌಡ, ಅತ್ತಿಯಾಡಿ ತಿಮ್ಮಗೌಡ, ಸುಳ್ಳಿ ಕೋಡಿ ಬೊಮ್ಮಗೌಡ, ಮೂರ್ನಾಡು ಉಳುವಾರ್ರ ದೇವಪ್ಪಗೌಡ, ಕೊಡಕಲ್ಲು ದೇವಣ್ಣ ಗೌಡ; ಕುಂಬಡ್ಕದ ಮಲ್ಲಪ್ಪಗೌಡ, ಕಗ್ಗೋಡುವಿತ್ತು ಪೈಕದ ಕರ್‍ರಿಯಣಗೌಡ, ದೆಸ್ಕೊಡಿ ತಮ್ಮಗೌಡ, ಸುಬೊಜಿ ನಾಡು ಹುದಿಕೇರ್‍ರಿನಾಡು ಬೊಳೂರು ತಿಮ್ಮೆಯ್ಯಗೌಡ, ನಿಡುಂಪಾಡಿ ದುಗ್ಗಣಗೌಡ, ಹೊರೂರು ನೂರೊತ್ಲು ನಾಡು ಕೊಡಕಲ್ಲು ಕುಂಬಗೌಡ, ಹಾಲೇರಿನಾಡು ಉಪ್ಪುಗಾಲದ ಪುಟ್ಟಗೌಡ; ಸಬ್ಬಜ್ಜನ ತಿಮ್ಮೆಗೌಡ, ಮಡಿಕೇರಿ ನಾಡು ಗುಡ್ಡಜನ ಕ್ಣುಣಗೌಡ ಮತ್ತು ನಾಡು ಕೊಂದಾಳದ ಪೂಜಾರಿ ತಿಮ್ಮೇಗೌಡ, ಮಡಿಕೇರಿ ಹೊರವಲೆ ನಾಡು ಯಾಲದಾಳು ಸುಜ್ಜಪಾಡಿ ತಿಮ್ಮಯ್ಯಗೌಡ, ನಾಲ್ಕೂರು ಸುಬ್ಬಗೌಡ, ಕಡಿಯತ್ತು ನಾಡು ಕಟ್ಟೆ ಮುತ್ತಣ್ಣ ಗೌಡ, ಕಾಜಮುಲ್ಲ ಅಪ್ಪುಗೌಡ, ಯೆಡೆ ನಾಲ್ಕು ನಾಡು ಯಜುನೂರು ಚೆನ್ನಪ್ಪಗೌಡ, ಅಮತ್ತಿನಾಡು ಪುಟ್ಟೇಗೌಡ ಮುಂತಾದ ಸಮಸ್ತಗೌಡುಗಳು ಕೂಡಿ ಆಲೋಚನೆಮಾಡಿ ಬರೆಸಿದ ಪಟ್ಟಿ ವಿವರ.

ನಮ್ಮ ಗೌಡುಗಳು ಜಾತಿ ಕುಟ್ಟಕ್ಕೆ ಮಾಯವೆಮಾನಳ್ಯ ಸುಭಾಸೊಬಾನ ಮುಂತಾಗಿ ನಡಿಯುವಂತಾದಕ್ಕೆ ಇದು ಸಾಕ್ಷಿ. ಸಿಂಗೇರ್‍ರಿ ಮಠದಿಂದ ಬ್ರಾಮರ ಆಚಾರ ವಿಚಾರ ಆದ ಗೊತ್ರಸ್ತರಾಗಿ ಇದ್ದ ಪಂಡಿತ ರಾಮಯ್ಯನು ನಮ್ಮ ಗೌಡುಗಳ ಜಾತಿಯಲ್ಲಿ ನಡೆಯುವಾತದಕ್ಕೆ ತಂಟೆಮಾಡಿ ಮದುವೆಯಾಗುವಂತಾದನ್ನು ನಿಲ್ಲಿಸಿದರಿಂದ ಪ್ರಕೊ ನಮ್ಮ ಜಾತಿ ಕಟ್ಲೆ ಒಳಗೆ ನಡೆದು ಬರುವಂತಾದ್ದು ತಲೆ ಬಾಪುರ್‍ರಿ ಬಾಸಿಂಗ, ನಡೆ ಮುಡಿ, ವಾದ್ಯ, ಹನ್ನೆರಡು ಕಂಬ ಪಿರಣೆ ವಯಕತೊರಣ ದಾರೆ ಮಂಟರ ದಂಡಿಗೆ ಬ್ರಾಹಮ್ಮರ ಕೈದಾರೆ ಮುಂತಾಗಿ ಸಲ್ಲುವಂತಾದ್ದುಯೆಂಬದ್ದಾಗಿ ಪಳಮ ಕೇಳಿದ್ದರಿಂದಲೂ ಪ್ರಕೊರಾಬ್ಯಾದಿಂದ ಗುರುಕಾಣಿಕೆ ಕಟ್ಟೆ ಇಲ್ಲ. ಇನ್ನು ಮುಂದೆ ಕಟ್ಟುವದಕ್ಕೂ ಇಲ್ಲ ಎಂಬದಾಗಿ ನಾವು ಹೇಳಿದರಿಂದ ಗುರುಕಾಣಿಕೆ ಕಟ್ಟಿದ ಮೇಲೆ ಬ್ರಾಮರ್‍ರದಾರ್‍ರೆಗೆ ಕೊಡುವದು ಇಲ್ಲ ಎಂಬದಾಗಿ ಸದ್ರಿ ಪಂಡಿತ ರಾಮ್ಯೆಯ್ಯನು ಮದುವೆ ತಡೆ ಮಾಡಿಸಿದ ಕಾರಣ ಈ ವ್ಯಾಜವು ಮಡಿಕೇರಿ ಅರಮನೆ ದಿರ್ವಾ ಕಚೇರಿಗೆ ಬಂದು ಹೇಳಿ ಕೊಂಡಲ್ಲು ಈ ಬಗ್ಗೆ ಕಾರ್‍ಯಪ್ಪ ದಿವಾನ್ ಸಹೆಬರ್‍ರು ಮುದ್ದು ಸ್ವಾಮಿಯವರು ಲಿಂಗ ರಾಜೇಂದ್ರ ಒಡೆಯಿರ್‍ರು ಈ ಅಭಿಪ್ರಾಯವನ್ನು ಅರಿಕೆ ಮಾಡಕೊಂಡಲ್ಲಿ ಕೂಡಿ ಅಪ್ಪಣೆ ದಯಪಾಲಿಸಿದ ಮೇರೆಗೆ ಕಾರ್‍ಯಪ್ಪ ದಿವಾನರು ಮೊಕಾಂತರ ತಾಕೀತಿ ಇದೆ. ವಿವರ ನೀವು ವಿಷ್ಣು ದೇವರ ಸಕ್ರಪೆಯನ್ನು ದಾರ್‍ಪದ ಅರಮನೆ ಮೂಹುರ್ತ ಆಗುವ ಸಮಯದಲ್ಲಿ ದೆಸಮಹಾನಾಡು ನಾಡು ಕೂಡತ್ತಧೆ. ವಿಷ್ಣು ವೆಳ್ಯದಲ್ಲು ನಿಮಗೆ ಗುರು ಕಾಣಿಕೆ ಕಟ್ಟತಕ್ಕದ್ದು ಉಂಟು ಇಲ್ಲವೆಂಬದಾಗಿ ಗೊತ್ತು ಮಾಡಿಸಿ ಕೊಟ್ಟೇವು. ಪರಿಯಂತ ಬ್ರಾಹಮರ ದಾರೆ ಬಗ್ಗ ಕೊಡಿಯೆಂಬದಾಗಿ ತಾಕೀತಾ ಮಾಡಿದರಿಂದ ಅವರೇಗೂ ನಡೆದು ಬಂತು ಆ ಮೇಲೆ ಹಾಲೇರಿ ಸಮಸ್ತಾನದವರು ಅರಮನೆಗೆ ಸ್ವಾಮಿಯವರೂ ಪೂರ್ವದ ಮೇರೆ ನಮ್ಮ ಜಾತಿ ಕಟ್ಟಳೆಗೆ ಪ್ರಕೊಯಿದೇ ಮೇರೆಗೆ ನಡೆದುಬರುವಲ್ಲಿ ಅಡ್ಡ ಬಾರದಂತೆ ನಗರ್‍ರ ಸಂಸ್ತಾನದಲ್ಲು ದಯೆವಿಟ್ಟು ನಿರೂಪ ಒಂದು. ಅಂದು ನಿರೂಪನಾಲ್ಕುನ್ನು ಮಹಾಸ್ವಾಮಿ ಲಿಂಗರಾಜೇಂದ್ರ ವಡೆಯರ್‍ರು ಪಾದಾರವಿಂದಕ್ಕೆ ತಂದು ಒಪ್ಪಿಸಿದರಿಂದ ಈ ನಾಲ್ಕು ನಿರೂಪವನ್ನು ಅಜಮೊಯಿಸಿ ನೋಡಿದಲ್ಲು ಗುರು ಕಾಣಿಕೆ ಕಟ್ಟುವ ಮಾಮೂಲು ಕಾಣುವದಿಲ್ಲ ಎಂಬುದಾಗಿ ಅಪ್ಪಣೆ ಆದ ಪ್ರಕಾರ ಕಾರ್‍ಯಪ್ಪ ದಿವಾನ್ ಸಾಹೇಬರವರು ನಮ್ಮಯೆಲ್ಲರ ಮೊಕ್ತ ತಾಕೀತಿ ವಿವರಯೆನೆಂದರೆ.

ಅಪ್ಪಣೆ ಅಂದು ನಿಮ್ಮ ಜಾತಿವಳಗೆ ಪ್ರಕು ಯಾವ ನಡೆದು ಬರುತಿತ್ತು ಆ ಮೇರೆ ಈಗಲೂ ನಡೆಕೊಳ್ಳುವಲ್ಲಿ ಅಡ್ಡಿ ಹರ್‍ಕತ್

ಬಾರದಂತೆ ಬುದ್ದಿ ಅಪ್ಪಣೆ ಆಗಿದೆ ಪ್ರಕು ನಗರ್‍ರ ಸಮಸ್ತನದ ನಿರೂಪ ಹಾಲೇರಿ ಸಮಸ್ಥಾನದ ನಿರೂಪ ಪ್ರಕಾರ ನಡಕೊಳ್ಳು ವಲ್ಲಿಯೆಂಬದಾದ ಅಪ್ಪಣೆ ಆಗಿದೆಯೆಂತ ದಿರ್ವಾ ಸಾಹೆಬ್ರು ತಾಕಿತಿ ಮಾಡಿದ ಬುದ್ದಿ ಅಪ್ಪಣೆ ಪ್ರಕಾರ ನಡೆಕೊಳ್ಳುವ ಬಖೆ ಕಟ್ಟು ಕಟ್ಟಳೆ ವಿವರ.

ಮದುವೆ ದಾರೆ ಮಾಡಿ ಬ್ರಾಮರಿಗೆ ಕೊಡತಕ್ಕದ್ದು ಅಕ್ಕಿ ಸೇರು 2, ತೆಂಗಿನಕಾಯಿ 2, ಬಾಳೆಹಣ್ಣು ಚಿಪ್ಪು 1, ವಿಶ್ಯ ಸೂಡಿ ಅರೆ, ಅಡಿಕೆ 5, ವಿವರ ಚಕ್ರ 2, ದಕ್ಷಣೆ ಬಖೆ ಬೆಳ್ಳಿಹಣ 1, ತೆರುವಿನ ಬಗ್ಗೆ ನಾಣ್ಯವರ 1, ಚಕ್ರ 2, ಮಡ್ಲು ತುಂಬುವದು 7, ತೆಂಗಿನಕಾಯಿ 5, ಆರತಿ 5, ವಿವರ ಮನೆ ಹರ್‍ಕೆ ಆರತಿ 1, ಬೆಳ್ಳಿಹಣ ಒಂದು, ಊರುಗೌಡನ ಹರ್‍ಕೆ ಆರತ್ತಿ ವೊಂದಕ್ಕೆ ಬೆಳ್ಳಿಹಣ 1, ಬಾಕಿ ಆರತಿ ಮೂರಕ್ಕೆ ಬೆಳ್ಳಿ ಹಣ 2, ಕಾಲು ತೊಳೆದ ಬಗ್ಗೆ ಬೆಳ್ಳಿ ಹಣ 1, ಹಸುರ ವಿಳ್ಯದೆಲೆ ಸೂಡಿ, ಅಡಿಕೆ 5, ಮದವೆ ಕುರಿ ಎಲೆ ಸೂಡಿ 1, ಅಡಿಕೆ 5, ಕಾಲುಂಗರದ ಎಲೆ ಸೂಡಿ 1, ಅಡಿಕೆ 5, ಆಚ್ಚೈ ಇಳಿಸುವ ಬಗ್ಗೆ ಎಲೆ ಸೂಡಿ ಅರೆ ಅಡಿಕೆ 3, ಮುಗವಳಿ ಎಲೆ ಸೂಡಿ 7, ಅಡಿಕೆ ನೂರು.

**ಬಣ್ಣ ಬಂಗಾರದ ವಿವರ**

ಜೂಟ್ಟಾ ಕಂಬಿಸೀರೆ 1, ಬಿಳಿ ರವಕೆ 1, ಮುಸರಗಿನ ಬಿಳಿವಸ್ತ್ರ 1, ಕೊಪ್ಪು ಜೋಡು 1, ಯಸಳು ಜೋಡು 1, ಕಡಗ ಜೋಡು 1, ಹಿಂಬಾಳೆ ಜೋಡು 1, ಚಿನ್ನದ ಮಣಿಸರ 2, ಕಡದ ಹವಳದ ಮಣಿಸರ 1, ತೋಳು ಸಲಿಗೆ 1, ನೇವಳದ ಸರಪಣಿ ಜೋಡು 1, ಕಾಲು ಮಿಂಚು ಜೋಡು 1, ಕೈ ಉಂಗುರು ಜೋಡು 1.

**ಓಲಗದವರಿಗೆ :** ರೂಪಾಯಿ 2, ಕೊಂಬಿನವರಿಗೆ ಚಕ್ರ 1, ಬೆಳ್ಳಿ ಹಣ 1, ಅಕ್ಕಿ ಸೇರು 1, ತೆಂಗಿನ ಕಾಯಿ 1, ವಿಳ್ಯದಲೆ 5, ಅಡಿಕೆ 1.

**ಮೈ ನೆರದದಕ್ಕೆ :** ಮಡಿವಾಳನಿಗೆ ಅಕ್ಕಿ ಸೇರು 1, ತೆಂಗಿನ ಕಾಯಿ 1, ವೀಳ್ಯದೆಲೆ 5, ಅಡಿಕೆ 1, ಬೆಳ್ಳಿ ಹಣ 1.

**ಜನನ ಅದಕ್ಕೆ :** ಗಂಡು ಹೆತ್ತರೆ ಬೆಳ್ಳಿ ಹಣ 1, ಹೆಣ್ಣು ಹೆತ್ತರೆ ಬೆಳ್ಳಿ ಹಣ ಅರೆ, ಅಕ್ಕಿ ಸೇರು 1, ತೆಂಗಿನಕಾಯಿ 1, ವೀಳ್ಯದೆಲೆ 5, ಅಡಿಕೆ 1.

**ಬುಡ್ದಾರೆಗೆ :** ಚಕ್ರ ಹತ್ತು ವೀಳ್ಯದೆಲೆ ಸೂಡಿ 10, ಅಡಿಕೆ 30, ಬಿಳಿ ಸೀರೆ 1.

**ನಾಲ್ಕನೆ ಬಾಳಿಗೆ :** ಚಕ್ರ 3, ಅಡಿಕೆ 30, ವೀಳ್ಯದೆಲೆ ಸೂಡಿ 3, ಬಿಳಿ ಸೀರೆ ಕೊಟ್ಟು ಮಡಗಿ ಕೊಳ್ಳುವಾಗ ಸದ್ರಿ ತೆರವು ಇಲ್ಲ.

**ಮೃತಪಟ್ಟದಕ್ಕೆ :** ಮೂರು ದಿನಕ್ಕೆ ಬೂದಿ ಮುಚ್ಚಿ ಅನ್ನ ಇಡುವುದು, ಪುಣ್ಯಾರ್ಚನೆ ದೇವಾಲದಲ್ಲು ತೀರ್ಥ ತಂದು ಶುದ್ದ ಮಾಡಿಸುವುದು. ಹನ್ನೊಂದನೇ ದಿನಕ್ಕೆ ದೇವಸ್ಥಾನದಿಂದಲೂ, ಪುಣ್ಯಾರ್ಚನೆ ತೀರ್ಥ ತಂದು ಶುದ್ದ ಮಾಡಿ ಜಾತಿಯವರಿಗೆ ಊಟ ಕೊಡುವುದು. **ಮಡಿವಾಳನಿಗೆ :** ಅಕ್ಕಿ ಸೇರು 1, ತೆಂಗಿನ ಕಾಯಿ 1, ವೀಳ್ಯದೆಲೆ 1, ಅಡಿಕೆ 1, ಬಾಳೆಹಣ್ಣು ಚಿಪ್ಪು 1, **ಹಜಾಮನಿಗೆ :** ಅಕ್ಕಿ ಸೇರು 1, ತೆಂಗಿನ ಕಾಯಿ 1, ವೀಳ್ಯದೆಲೆ 5, ಅಡಿಕೆ 1, ಬಾಳೆ ಹಣ್ಣು ಚಿಪ್ಪು 1, **ಬೈನೆ ಮರ ಸೇಂದಿ ಕಟ್ಟಿದರೆ ಜಾತಿಗೆ ಅಡಿಯಾಳಾಗಿ ಇರಬೇಕು.**

ತಂದಂತ ಹೆಣ್ಣಿನ ಊನ, ಕೊರತೆ, ತೊರದು ಬಿಟ್ಟರೆ ಅರಮನೆ ಅಪರಾಧದೊಂದಿಗೆ ಜಾತಿ ಸಹಾ ದಂಡ ಕೊಡಬೇಕೆಂತ ಮಾಡಿದೆ.

**ಕಳುಹಿಸಿದವರು : ಪ್ರೊ. ಪೂಜಾರಿ ಮೊಂಣಪ್ಪ, ಬೆಂಗಳೂರು**

---

## ಹನಿಗವನ : ನನ್ನವಳ ಇಷ್ಟ

ನನ್ನವಳು ಇಷ್ಟಪಡುತ್ತಾಳಂತೆ
ಬೆಳ್ಳಗಿರುವವನನ್ನೆ
ನಾನೇನು ಕಡಿಮೆಯೇ?
ಬೆಳ್ಳಗಿಲ್ಲವೆ ಇದ್ದಿಲಿಗಿಂತ!
ಅವಳು ನನ್ನನ್ನು
ನಿಂದಿಸುತ್ತಾಳೆ ಇದ್ದಿಲೆಂದು
ವಜ್ರದ ಮೂಲರೂಪ
ಇದ್ದಿಲಲ್ಲವೆ?
ನನ್ನವಳು ಇಷ್ಟಪಡುತ್ತಾಳಂತೆ
ಬೆಳ್ಳಗಿರುವನನ್ನೆ
ಬೆಳ್ಳಗಿರುವುದೆಲ್ಲ ಹಾಲಲ್ಲ
ಎಂದು ತಿಳಿದಿಲ್ಲವೆ, ಅವಳು
ಇರುತ್ತಾರೆ ಬೆಳ್ಳಗೆ
ಪೊರೆಕಳಚಿದ ಹಾವಿನಂತೆ!
ತಿಳಿದಿಲ್ಲವೆ ಅವಳಿಗೆ
ಅದರಲ್ಲಿದೆ ವಿಷವೆಂದು!
ನನ್ನವಳು ಇಷ್ಟಪಡುತ್ತಾಳಂತೆ
ಅಲ್ಯೂಮಿನಿಯಂ ನಂತಹ ಬಿಳಿಯನನ್ನೆ
ನಾನೇನು ಕಡಿಮೆಯೆ?
ಬೆಳ್ಳಗಿಲ್ಲವೆ ಕಬ್ಬಿಣಕಿಂತ!
ಅವಳು ತಿಳಿದಿದ್ದಾಳೆ
ಬೆಳ್ಳಗಿರುವರೆಲ್ಲ ಗಟ್ಟಿಗರೆಂದು
ಕಬ್ಬಿಣ ಅಲ್ಲವೆ ಗಟ್ಟಿ
ಅಲ್ಯೂಮಿನಿಯಂಗಿಂತ!
ನನ್ನವಳು ಇಷ್ಟಪಡುತ್ತಾಳಂತೆ
ಬೆಣ್ಣೆಯಂತಹ ಬಿಳಿಯನನ್ನೆ
ಸುಣ್ಣದ ಬಣ್ಣಸಹ
ಬೆಳ್ಳಗೆ ಅಲ್ಲವೆ?
ಬೆಳ್ಳಗಿರುವುದೆಲ್ಲ ಬೂದಿ
ಮುಚ್ಚಿದ ಕೆಂಡವಲ್ಲ- ಇದ್ದಲಿನ ಹಾಗೆ
ಬಣ್ಣಮಾತ್ರ ಬಿಳಿಯು
ಗುಣವು ಮಾತ್ರ ಕಪ್ಪು
ನನ್ನವಳು ಇಷ್ಟಪಡುತ್ತಾಳಂತೆ
ಬೆಳ್ಳಗಿರುವನನ್ನೆ
ಅವಳೇನು ಇಲ್ಲ ಬೆಳ್ಳಗೆ
ಇರುವಳು ನನಗಿಂತ ಕರ್‍ರಗೆ!!!

**ಕಾನಡ್ಕ ಹನೀಸ್ ಅಪ್ಪಾಜಿ, ಮರಗೋಡು.**

---

**ತಾಯಿಗಿಂತ ಹಿತವಂತರಿಲ್ಲ, ಸಕ್ಕರೆಗಿಂತ ಸವಿಯಿಲ್ಲ**

# ಉಚ್ಚಾರಣೆಯ ತೊಡಕುಗಳು

ತಮಿಳು ಮಾತೃ ಭಾಷೆಯನ್ನಾಡುವ ಕೆಲವರು ಕನ್ನಡ ಮತ್ತು ಇತರ ಭಾಷೆಗಳನ್ನು ಮಾತನಾಡುವಾಗ ಒಂದು ಬಗೆಯ ಅಸಂಬದ್ಧವಾದ ಉಚ್ಚಾರಣೆಯಲ್ಲಿ ತೊಡಗಿರುವುದನ್ನು ಗಮನಿಸುತ್ತಿರುತ್ತೇವೆ. ಈ ರೀತಿಯಲ್ಲಿ ಅವರ ಉಚ್ಚಾರಣೆ ವ್ಯತ್ಯಾಸಗೊಳ್ಳಲು ಕಾರಣವೇನೆಂದು ನೋಡಿದಾಗ ನಮಗೆ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ.

ಕನ್ನಡ ವರ್ಣಮಾಲೆಯ ವರ್ಗೀಯ ವ್ಯಂಜನಾಕ್ಷರಗಳಾದ ಕ,ಖ,ಗ,ಘ; ಟ,ಠ,ಡ,ಢ; ತ,ಥ,ದ,ಧ; ಪ,ಫ,ಬ,ಭ ಇವುಗಳ ಸ್ಥಾನದಲ್ಲಿ ತಮಿಳಿನಲ್ಲಿ ಒಂದೊಂದೇ ಅಕ್ಷರಗಳ್ನು ಬಳಸುವ ಕ್ರಮ ರೂಢಿಯಲ್ಲಿದೆ. ಇದೇ ರೀತಿ ಚ,ಶ,ಸ ಈ ಮೂರು ಅಕ್ಷರಗಳ ಬಳಕೆಗೂ ಅಲ್ಲಿರುವುದು ಒಂದೇ ಅಕ್ಷರ 'ಹ' ಕಾರ ರೂಢಿಯಲ್ಲಿದ್ದರೂ ಅದರ ಬದಲಿಗೆ ಹೆಚ್ಚಾಗಿ 'ಕ'ಕಾರ ಅಥವಾ 'ಗ' ಕಾರ ಬಳಕೆಯಾಗುತ್ತದೆ.

ಮೂರು ಅಥವಾ ನಾಲಕ್ಕು ಅಕ್ಷರಗಳ ಬಳಕೆಗೆ ತಮಿಳಿನಲ್ಲಿ ಒಂದೇ ಅಕ್ಷರವನ್ನು ಉಪಯೋಗಿಸುವ ಕ್ರಮ ರೂಢಿಯಲ್ಲಿದ್ದರೂ ಮಾತನಾಡುವಾಗ ಮಾತ್ರ ಆಯಾ ಸಂದರ್ಭಕ್ಕೆ ತಕ್ಕಂತೆ ('ಕ' ಅಥವಾ 'ಗ' ಮುಂತಾಗಿ) ಮಾರ್ಪಾಡು ಮಾಡಿಕೊಂಡು ಉಚ್ಚಾರಣೆ ಮಾಡುತ್ತಾರೆ. ಆದರೆ ಈ ರೀತಿ ಮಾರ್ಪಾಡು ಮಾಡಿಕೊಳ್ಳುವುದಕ್ಕೆ ಬಹುಪಾಲು ಅವರು ಹೆಚ್ಚಿನ ಪ್ರಾಮುಖ್ಯತೆಯನ್ನೇನೂ ಕೊಡುವುದಿಲ್ಲ. ಹಾಗಾಗಿ ಅನೇಕ ವೇಳೆ ಅಕ್ಷರಗಳು ಅದಲು ಬದಲಾಗಿಯೂ ('ಕ' ಸ್ಥಾನದಲ್ಲಿ 'ಗ' ಅಥವಾ 'ಗ' ಸ್ಥಾನದಲ್ಲಿ 'ಕ' ಮುಂತಾಗಿ) ಉಚ್ಚಾರಣೆಯಾಗುತ್ತವೆ. ಉದಾಹರಣೆಗೆ ವಿನಾಯಕ ಎಂಬ ಪದ ಅವರ ಉಚ್ಚಾರಣೆಯಲ್ಲಿ ವಿನಾಯಗ ಎಂದಾಗುತ್ತದೆ. ಈ ರೀತಿ ವ್ಯತ್ಯಾಸಗೊಂಡು ಉಚ್ಚಾರಣೆಯಾಗುವ ಪದಗಳಲ್ಲಿ ಕೆಲವನ್ನು ಇಲ್ಲಿ ನೋಡಬಹುದು.

| | | |
|---|---|---|
| ಶೇಖರ | ಸೇಗರ | 'ಖ' ಕಾರದ ಸ್ಥಾನದಲ್ಲಿ 'ಗ'ಕಾರ ಬಳಕೆ |
| ಕಾಡು | ಕಾಟ್ | 'ಡ' ಕಾರದ ಸ್ಥಾನದಲ್ಲಿ 'ಟ'ಕಾರ ಬಳಕೆ |
| ಸೇತು | ಸೇದು | 'ತ' ಕಾರದ ಸ್ಥಾನದಲ್ಲಿ 'ದ'ಕಾರ ಬಳಕೆ |
| ಪೂರಿ | ಬೂರಿ | 'ಪ' ಕಾರದ ಸ್ಥಾನದಲ್ಲಿ 'ಬ'ಕಾರ ಬಳಕೆ |
| ಚಂದ್ರ | ಸಂದ್ರ | 'ಚ' ಕಾರದ ಸ್ಥಾನದಲ್ಲಿ 'ಸ'ಕಾರ ಬಳಕೆ |
| ಶಂಖ | ಚಂಗ್ | 'ಶ' 'ಖ' ಕಾರದ ಸ್ಥಾನದಲ್ಲಿ 'ಚ' 'ಗ' |
| ಮಹಾರಾಜ | ಮಗಾರಾಜ | 'ಹ' ಕಾರದ ಸ್ಥಾನದಲ್ಲಿ 'ಗ'ಕಾರ ಬಳಕೆ |

ತಮಿಳು ಭಾಷೆಯಲ್ಲಿ ಮಾತನಾಡುವಾಗ ಅಕ್ಷರಗಳು ಸ್ಥಾನ ಪಲ್ಲಟಗೊಂಡು ಉಚ್ಚಾರಣೆಗೊಳ್ಳುವುದರತ್ತ ಅವರು ಹೆಚ್ಚಿನ ನಿಗಾವಹಿಸದೆ ಇರುವುದರಿಂದ ಇಂತಹ ವತ್ಯಾಸಗೊಂಡ ಉಚ್ಚಾರಣೆಗಳು ಅಲ್ಲಿ ಸಹಜವಾಗಿರುತ್ತವೆ. ಆದರೆ ಅವರು ಇತರ ಭಾಷೆಗಳನ್ನು ಮಾತನಾಡುವಾಗಲೂ ತಮ್ಮ ಸಹಜ ಶೈಲಿಯನ್ನು ಮುಂದುವರಿಸಿದಾಗ ಪದಗಳು ಅರ್ಥವ್ಯತ್ಯಾಸಗೊಂಡು ಕೆಲವೊಮ್ಮೆ ಅಪಾರ್ಥಕ್ಕೂ ಎಡೆಮಾಡಿ ಕೊಡಬಹುದು. ಇಂತಹ ಒಂದೆರಡು ಪ್ರಸಂಗಗಳನ್ನು ಇಲ್ಲಿ ನೆನಪಿಸಿಕೊಳ್ಳೋಣ.

ತಮಿಳು ಭಾಷಿಯಾದ ಹುಡುಗಿಯೊಬ್ಬಳು ಹರಟೆಯಲ್ಲಿ ತೊಡಗಿರುವ ಸಂದರ್ಭಗಳಲ್ಲೆಲ್ಲ ಸ್ವಲ್ಪ ಉಚ್ಚ ಸ್ವರದಲ್ಲೇ ಮಾತನಾಡುತ್ತಿದ್ದಳು. ಕನ್ನಡದ ಜೊತೆಗೆ ಹಿಂದಿ ಮುಂತಾದ ಭಾಷೆಗಳ ಪರಿಚಯವೂ ಆಕೆಗಿತ್ತು. ಹೀಗಾಗಿ ಕನ್ನಡದಲ್ಲಿ ಮಾತನಾಡುವಾಗ ಅವಳ ಮಾತಿನಲ್ಲಿ ಉಳಿದ ಭಾಷೆಗಳ ಮಿಶ್ರ ಪ್ರಭಾವವೂ ಅಡಗಿರುತ್ತಿತ್ತು. ಒಂದು ದಿವಸ ಗುಂಪಿನಲ್ಲಿ ಮಾತನಾಡುತ್ತಾ ಅವಳು ಹೇಳುತ್ತಿದ್ದುದು, "ನಾನು ರಾತ್ರಿ ಮಲಗುವಾಗ ಹತ್ತು ಗಂಡ ಆಗುತ್ತದೆ, ಬೆಳಿಗ್ಗೆ ಏಳುವಾಗ ಆರು ಗಂಡ ಆಗಿರುತ್ತದೆ" ಎಂದು .

ಕೆಲವರಿಗೆ ತಮ್ಮ ಉಚ್ಚಾರಣೆ ಸರಿಯಾದುದಲ್ಲವೆಂಬ ಅರಿವಿದ್ದರೂ ಅಭ್ಯಾಸ ಬಲದಿಂದಾಗಿ ಸರಿಯಾದ ಉಚ್ಚಾರಣೆ ಮಾಡಲು ಸಾಧ್ಯವಾಗುವುದಿಲ್ಲ.

ಒಮ್ಮೆ ತರಗತಿಯಲ್ಲಿ ಅಧ್ಯಾಪಕರು ವಿದ್ಯಾರ್ಥಿಗಳ ಹಾಜರಿ ಕರೆಯುತ್ತಿದ್ದರು. ಹೊಸದಾಗಿ ಸೇರ್ಪಡೆಯಾಗಿದ್ದ ವಿದ್ಯಾರ್ಥಿನಿಯೊಬ್ಬಳು ತನ್ನ ಹೆಸರು ಇಲ್ಲದಿರುವ ವಿಷಯವನ್ನು ಅಧ್ಯಾಪಕರ ಗಮನಕ್ಕೆ ತಂದು ಪಟ್ಟಿಯಲ್ಲಿ ಸೇರುವಂತೆ ಮಾಡಿದಳು. ಮಾರನೆಯ ದಿವಸವೂ ಹಾಜರಿ ಕರೆಯುವ ಸಮಯದಲ್ಲಿ ಕೊನೆಯವರೆಗೂ ಸುಮ್ಮನೆ ಕುಳಿತಿದ್ದ ಅದೇ ವಿದ್ಯಾರ್ಥಿನಿ ಹಿಂದಿನ ದಿನದಂತೆ ತನ್ನ ದೂರನ್ನು ಸಲ್ಲಿಸಿದಳು. ಆಕೆಯ ಹೆಸರಿನ ಬಗ್ಗೆ ಮತ್ತೆ ವಿಚಾರಿಸಿದ ಅಧ್ಯಾಪಕರು, ಆಕೆ 'ಗಾಂದಿಮದಿ' ಎಂದು ತನ್ನ ಹೆಸರನ್ನು ಹೇಳಿದುದನ್ನು ಕೇಳಿ ಸಿಟ್ಟಿಗೆದ್ದು, "ಈಗ ತಾನೆ ನಿನ್ನ ಹೆಸರನ್ನು ಕರೆದೆ, ನೀನೇನು ತೂಕಡಿಸುತ್ತಿದ್ದೆಯಾ?" ಎಂದು ಗದರಿದರು. ಆಗ ಅವಳು ಸರಿಯಾಗಿ ಉಚ್ಚಾರಣೆ ಮಾಡಲಾರದ ತನ್ನ ಅಸಹಾಯಕತೆಯನ್ನು ಹೇಳಿಕೊಂಡು ಒಡನೆಯೇ ಒಂದು ಬಿಳಿಯ ಹಾಳೆಯಲ್ಲಿ ತನ್ನ ಹೆಸರನ್ನು 'ಕಾಂತಿಮತಿ' ಎಂದು ಸ್ಪಷ್ಟವಾಗಿ ಬರೆದು ತೋರಿಸಿದಳು.

ಹೀಗೆ ಕೆಲವರು ತಮಗೆ ರೂಢಿಯಾಗಿರುವ ಮಾತಿನ ಶೈಲಿಯಲ್ಲಿ ಇಂತಹ ಅಸಂಬದ್ಧ ಉಚ್ಚಾರಣೆಯಲ್ಲಿ ತೊಡಗಿದ್ದರೆ ಇನ್ನು ಕೆಲವರು ಸ್ಪಷ್ಟವಾಗಿ ಉಚ್ಚಾರ ಮಾಡಲಾರದ ಅಸಹಾಯಕರಾಗಿರುತ್ತಾರೆ. ಒಟ್ಟಿನಲ್ಲಿ ಕೇಳುಗರಿಗೆ ಮಾತು ಹಾಸ್ಯಮಯವಾಗಿ ತೋರುತ್ತಿರುತ್ತದೆ.

**ಚಾಂಗನ ಸಿ. ಪೂವಯ್ಯ, ಮೊಣ್ಣಂಗೇರಿ.**

---

## ನಗೆಹನಿ

**ತಂಗ್ಯಮ್ಮಾ :** ನೀನ್ ಯಾಗೋಳ್ ರೇಡಿಯೋಲಿ ಬ್ಯಾರೆ ದೇಶದ ಸ್ಟೇಶನ್ ಕಾರ್ಯಕ್ರಮನ ಯಾಕೆ ಕೇಳಿಯಾ?

**ಅಕ್ಕಯ್ಯ :** ಯಾಕೆತೇಳಿರೆ ನಮ್ಮ ದೇಶದ ಕರೆಂಟ್ ಖರ್ಚ್ ಕಮ್ಮಿ ಆಗಲಿತ.

**ಸ್ನೇಹಿತ :** ಅಲ್ಲರ ನೀನ್ ಹಿಂದೆ ಬಹಳ ಲಾಚಾರ್ ಆಗಿದ್ದೆ ಈಗ ಭಾರಿ ದಪ್ಪ ಆಗಿ ಒಳ ಏನ್ ತಿಂದಿಯಾ?

**ಮಂತ್ರಿ :** ಅದ್ ನಾನ್ ಜನ್ರ ದುಃಖನ ತಿನ್ನ್‌ತ್ತೋಳೆ

**ಸ್ನೇಹಿತ :** ಆದ್ರೆ ಜನ ಏನ್ ತಿಂದವೆ?

**ಮಂತ್ರಿ :** ಅನ್ಯಾಯನ, ಮಂತ್ರಿ ಹೊಟ್ಟೆನ ಪೂಜಿಕಂಡ್ ಹೇಳ್ತ್.

**ಕುರಿಕಡ ಜಾಜಿ, ದೆಹಲಿ.**

---

ಕಾಲ ಯಾನವು ಯಾರನ್ನೂ ಕಾದು ನಿಲ್ಲದು

## ಸಂಗಾತಿ ಭವಿಷ್ಯ : ಆಗಸ್ಟ್ 16 ರಿಂದ 31, 2000

ಜೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷ ರಾಶಿ :** ದೈವಾನುಕೂಲವಿದೆ ಹಣಕಾಸಿನ ವ್ಯವಹಾರದಲ್ಲಿ ನೆಮ್ಮದಿ, ಗೃಹ ವಲಯದಲ್ಲಿ ಕಿರಿ ಕಿರಿ ತಪ್ಪಿದಲ್ಲ. ದೇಹದಲ್ಲಿರುವ ರೋಗವು ನಿವೃತ್ತಿಯಾಗಿ ನೆಮ್ಮದಿ ದೊರಕುವುದು. ಭೂ ಸಂಬಂಧ ವ್ಯವಹಾರಗಳಿಗೆ ಸ್ವಲ್ಪ ಮಟ್ಟಿಗೆ ನಷ್ಟ ಬರಬಹುದು. ಕುಲದೇವತಾರಾಧನೆ ಮಾಡಿಕೊಂಡು ಬರುವುದರಿಂದ ಸುಖ ದೊರೆಯಲಿದೆ.

**ವೃಷಭ ರಾಶಿ :** ಶನಿಯ ಉಪಟಳದಿಂದ ಆರೋಗ್ಯಕ್ಕೆ ಧಕ್ಕೆ ಉಂಟಾದಿತು. ಸಂಸಾರದಲ್ಲಿ ವ್ಯಾಧಿ ಕಾಣಿಸಬಹುದು. ಅನಾವಶ್ಯಕವಾಗಿ ಕಲಹ ಮಾಡಿಕೊಂಡಿರುವಿರಿ. ಲೆಕ್ಕಚಾರಗಳು ತಲೆ ಕೆಳಗಾಗಬಹುದು. ಶನಿ ಜಪ ಪ್ರತೀ ಶನಿವಾರ ಮಾಡಿಕೊಂಡು ಬರುವುದರಿಂದ ಮನಸ್ಸಿಗೆ ನೆಮ್ಮದಿ. "ಓಂ ಶನಿಯೆ ನಮಃ"

**ಮಿಥುನ ರಾಶಿ :** ಹಣಕಾಸಿನ ವ್ಯವಹಾರದಲ್ಲಿ ಸಾಧಾರಣವಾಗಿ ಫಲ ದೊರೆಯಬಹುದು ಅಷ್ಟೆ. ಅನಾವಶ್ಯಕವಾಗಿ ಪ್ರಯಾಣ ಬೆಳೆಸಲೂ ಇದು ಸಮಯ ಸೂಕ್ತವಲ್ಲ. ಮಿತ್ರರೊಂದಿಗೆ ಕಲಹಕ್ಕೆ ಆಸ್ಪದ ಕೊಡಬೇಡಿ. ವಾಹನದಲ್ಲಿ ಸಂಚಾರ ತೀರ ಕಡಿಮೆ ಮಾಡಿ. ದೇವತಾ ಧ್ಯಾನ ಮಾಡುವುದರಿಂದ ಇಷ್ಟ ಸಿದ್ಧಿ.

**ಕರ್ಕಾಟಕ ರಾಶಿ :** ಉದ್ಯೋಗ ವ್ಯವಹಾರಕ್ಕೆ ಸಂಬಂಧಿಸಿದಂತೆ ಬೇರೆ ಕಡೆಗೆ ಸಂಚಾರ ಯೋಗವಿದೆ. ಗೃಹ ವಲಯದಲ್ಲಿ ತುಸು ನೆಮ್ಮದಿ ಇರಬಹುದು. ಮಾತೃವಿನೊಂದಿಗೆ ಕಲಹ ಬೇಡ. ಹಣಕಾಸಿನ ವ್ಯವಹಾರದಲ್ಲಿ ಸಮಾಧಾನಕರವೆನಿಸಬಹುದು. ದೇವತಾರಾಧನೆ ಮಾಡಿಕೊಂಡು ಬನ್ನಿ.

**ಸಿಂಹ ರಾಶಿ :** ನಿಮ್ಮಲ್ಲಿರುವ ಅಂತಸ್ತಿಗೆ ಅನುಸಾರವಾಗಿ ನಡೆದುಕೊಂಡು ವ್ಯವಹರಿಸಿ ಹಣಕಾಸಿನ ವ್ಯವಹಾರದಲ್ಲಿ ಗುಪ್ತವಾಗಿ ವ್ಯವಹರಿಸಿ ಇಲ್ಲವಾದರೆ ನಿಮ್ಮ ಘನತೆಗೆ ಧಕ್ಕೆ ಬರಬಹುದು. ಗೃಹ ವಲಯದಲ್ಲಿ ನೂತನ ಕಾರ್ಯ ಪ್ರಾರಂಭ ಆಗಿ ಸಮಾಧಾನಕರ ವಾತಾವರಣ ವೇರ್ಪಡುವುದು.

**ಕನ್ಯಾ ರಾಶಿ :** ಗೃಹ ವಲಯದಲ್ಲಿ ಸಮಾಧಾನಕರ ವಾತಾವರಣವೇರ್ಪಡುವುದು. ಹಣಕಾಸಿನ ವ್ಯವಹಾರದಲ್ಲಿ ಲಾಭಾಂಶ ನಿಮ್ಮ ಕೈ ಸೇರುವುದು. ಅದೃಷ್ಟ ಒಲಿದು ಬಂದಾಗ ಹರ್ಷದಿಂದ ನಡೆದುಕೊಳ್ಳಬೇಡಿ. ಮುಂದೆ ದುರಂತದ ಮೊತ್ತ ಚಿಂತಿಸಬೇಕಾಗುವುದು. ಮಿತ್ರರನ್ನು ಕೀಳಾಗಿ ಕಾಣುವುದರಿಂದ ನೆಮ್ಮದಿ ತರುವುದು.

**ತುಲಾ ರಾಶಿ :** ವ್ಯವಹಾರ ಉದ್ಯೋಗದಲ್ಲಿ ಸ್ವಲ್ಪ ಮಟ್ಟಿಗೆ ಲಾಭಾಂಶವಿದೆ. ಸ್ವಮಿತ್ರರೊಡನೆ ಕಲಹಕ್ಕೆ ಆಸ್ಪದ ಕೊಡಬೇಡಿ. ಗೃಹವಲಯದಲ್ಲಿ ತುಸು ನೆಮ್ಮದಿ ಕಾಣಬಹುದು. ಭೂ ಸಂಬಂಧ ವ್ಯವಹಾರ ಉದ್ಯೋಗಗಳಲ್ಲಿ ಯಶಸ್ಸು ನಿಮ್ಮ ಪಾಲಿಗೆ ಬರುವುದು. ಶತ್ರುಗಳಿಂದ ದೂರವಿದ್ದು ವ್ಯವಹರಿಸಿಕೊಂಡು ಬನ್ನಿ.

**ವೃಶ್ಚಿಕ ರಾಶಿ :** ಯಾವುದೇ ಉದ್ಯೋಗ ವ್ಯವಹಾರ ಮಾಡುವಾಗ ಆಲೋಚಿಸಿ ಮುನ್ನಡೆಯಿರಿ. ಶತ್ರುಗಳು ನಿಮ್ಮ ಹಿಂದೆಯೇ ದಾಪು ಕಾಲು ಹಾಕುತ್ತಿದ್ದಾರೆ. ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿಗೆ ನೆಮ್ಮದಿ ಇದೆಯಷ್ಟೆ. ಗೃಹವಲಯದಲ್ಲಿ ಆಗಿಂದಾಗೆ ಕಲಹಗಳು ಏರ್ಪಡುವುವು.

**ಧನಸ್ಸು ರಾಶಿ :** ಗೃಹವಲಯದಲ್ಲಿ ತುಸು ನೆಮ್ಮದಿ ಉಂಟಾದಿತು. ವ್ಯವಹಾರ ಉದ್ಯೋಗದಲ್ಲಿ, ವಾದ ವಿವಾದಗಳು ಭುಗಿಲೇಳುವುವು. ದೇಹದಲ್ಲಿ ರೋಗವೂ ನಿಮ್ಮನ್ನು ಸಮೀಪಿಸುತ್ತದೆ. ಸರಕಾರೇತರ ವ್ಯವಹಾರಗಳಲ್ಲಿ ನಷ್ಟ ಅನುಭವಿಸುವಿರಿ. ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿಗೆ ಸುಧಾರಿಸಬಹುದಷ್ಟೆ. ಉಷ್ಣ ಸಂಬಂಧಿ ವ್ಯಾಧಿ ತಗಲಿದೆ.

**ಮಕರ ರಾಶಿ :** ಗೃಹ ವಲಯದಲ್ಲಿ ನೂತನ ಕಾರ್ಯಪ್ರಾರಂಭಿಸುವಿರಿ. ದೇವತಾ ಕಾರ್ಯ ಮಾಡುವ ಯೋಗವಿದೆ. ಸಂಸಾರ ವಲಯದಲ್ಲಿ ತುಸು ನೆಮ್ಮದಿ. ಕಳೆದು ಹೊದ ವಸ್ತು ಮತ್ತೆ ಕೈ ಸೇರಲಿದೆ. ನೂತನ ಮಿತ್ರರ ಭೇಟಿಯಿಂದ ವ್ಯವಹಾರದಲ್ಲಿ ಯಶಸ್ಸು ಕಾಣುವಿರಿ. ಮಹಾಕಾಲ ಮೃತ್ಯುಂಜಯ ಜಪ ಮಾಡಿಕೊಂಡು ಬನ್ನಿ.

**ಕುಂಭ ರಾಶಿ :** ಗೃಹ ವಲಯದಲ್ಲಿ ಶುಭ ಕಾರ್ಯಗಳು ಏರ್ಪಡುವುದು. ದೇಹದಲ್ಲಿ ಉದರ ವ್ಯಾಧಿ ಕಾಣಿಸಬಹುದು. ಹಣಕಾಸಿನ ವ್ಯವಹಾರದಲ್ಲಿ ನೂತನ ಮಿತ್ರರ ಭೇಟಿಯೊಂದಿಗೆ ಕೆಲಸ ಸುಗಮವಾಗುವುದು. ಹೊಸ ಭೂ ಸಂಬಂಧವಾಗಿ ಈಗ ವ್ಯವಹಾರ ನಡೆಸಿಕೊಂಡು ಬನ್ನಿ.

**ಮೀನ ರಾಶಿ :** ವಿಪರೀತ ಬುದ್ಧಿಯಿಂದ ದೊಡ್ಡದೊಂದು ಆಳಕ್ಕೆ ಬೀಳುವಿರಿ. ಹೊಸ ಮಿತ್ರರ ಭೇಟಿಯಿಂದಾಗಿ ಮನಸ್ಸಿಗೆ ನೆಮ್ಮದಿ. ನಷ್ಟ ನಿಷ್ಠುರಗಳು ನಿಮ್ಮನ್ನು ಕಾಡಲಿದೆ. ದೇಹದಲ್ಲಿ ಉಷ್ಣ ಸಂಬಂಧ ವ್ಯಾಧಿಗಳು ನಿಮ್ಮನ್ನು ಕಾಡಲಿದೆ. ಗುರು ಜಪ ಮಾಡಿಕೊಂಡು ಬನ್ನಿ. ಮನಸ್ಸಿಗೆ ನೆಮ್ಮದಿ.

---

ಕಾಲಗತಿಯನ್ನು ತಡೆಯಲು ಶ್ರೀಮಂತನ ಐಶ್ವರ್ಯವಾಗಲಿ, ಧರ್ಮವಂತನ ಪ್ರಾರ್ಥನೆಯಾಗಲಿ ಸಮರ್ಥವಾಗಲಾರವು

---

# ವಾಂಟೆಡ್ ಮಿಸ್ಟರ್ ರಾಜು [ನಮ್ಮ ರಾಜು ಮಂಜನ ಕಥೆ]

ಲೇಖನ : ಶಂಕರನ ಬಸಪ್ಪ

ಧಾರಾವಾಹಿ -16

ಹಿಂದೆ ನಡದದ್.......

Mrರಾಜು ತಂಗೆನ ಮದ್ವೆಗೋಸ್ಕರ ಹಣ ಸಂಪಾದಿಸುವ ಒಂದೇ ಗುರಿನ ಇಟ್ಟ್‌ಕಂಡ್ ಅದಕೋಸ್ಕರ ದಿನಕ್ಕೊಂದ್ ವೇಷನ ಹಾಕಂಡ್ ದಿನಕೊಂದ್ ತರದ ಕೆಲ್ಸಗಳನ್ನ ಮಾಡ್ತಿದ್ದದೆ. ಆದರೆ ಇದರ ಮದ್ಯೆ ಅಚಾನಕ್ ಆಗಿ ಮಾನವೀಯತೆಯ ದೊಡ್ಡ ಗುಣನ ತೋರ್ಸಿಕಂಬಂತಹ ಸಂದರ್ಭನೂ ಬಂದ್ ಒಂದ್ ಅಸಾಯಕ ಹೆಣ್ಣ್ ಗೂಡೆನ ಮಾನನ, ಪ್ರಾಣನ ರೌಡಿಗಳ ಕೈಯಿಂದ ಬಚಾವು ಮಾಡಿದೆ. ಮೈಸೂರು ಗೈಡ್‌ತರ ಹೋಗಿ ಬ್ರಂದಾವನ ಗಾರ್ಡ್‌ನಲಿ ನೀರ್ ಒಳಗೆ ಬಿದ್ದ ಹೆಂಗ್ಸನೂ ಒಂದು ಕೂಸುನೂ ಬಚಾವು ಮಾಡಿದೆ

ಮುಂದಕೆ...........

Mrರಾಜು ತಲೆ ತುಂಬಾ ಮನೆ ಕಡೇದೇ ಯೋಚನೆ ಮಾಡಿಕಂಡೇ ಮಲಗಿತ್. ಮನೇಲಿ ಈಗ ಎಲ್ಲವೂ ಮಗಳ ಮದ್ವೆ ಕಾರ್ ಬಾರ್‌ಗಳ ಮದ್ಯೆಲಿ ನನ್ನ ಹುಡುಕಾಡುವ ಕೆಲ್ಸ ಬೇರೆ ಮಾಡುತಾ ಇರ್ರೊ. ಇಲ್ಲಿ ನೋಡಿರೆ ನಂಗೆ ದಿನಕ್ಕೊಬ್ಬ ವೈರಿಗ ಹುಟ್ಟಿಕೊಳ್ಳುತಾ ಒಳೊ. ನಾನ್ ಹೆಂಗೆ ನನ್ನ ಗುರಿನ ಮುಂದಕ್ಕೆ ಸಾದಿಸುದೂ ತಾ ಗ್ಯಾನ ಮಾಡಿಕಂಡೇ ನಿದ್ರೆಹೋತ್.

ಈಗ 15 ದಿನಗಳಿಂದ ಆ ಲಾಡ್ಜ್‌ಲಿ ಬೆಳಿಗ್ಗೆ ಚಾಯಕಾಫಿನ ತಂದು ಕೊಡುವ ಹೈದನ ಸ್ವರ ಕೇಳಿಕಾಕನ ಕಟ್ಲ್ ಬುಟ್ಟು ಏಳುವಂತಹ ರೂಡಿ ಈಗ Mr ರಾಜುಗೆ ಆಗಿ ಹೋಗಿತ್. ಹಂಗೇ ಎದ್ದ್ ಅರ್ದಬಾಗ್‌ಲ್ ತೆಗ್ದ್ ಆ ಹೈದನ ಹತ್ರ ಒಂದು ಚೋಟಾಕಪ್ ಚಾಯನ ಕುಡ್ದ್ ಒಂದ್ I.T.C. smallಗೆ ಬೆಂಕಿ ತಗಲಿಸಿ ಕಂಡ್ ತನ್ನ ಬೆಳಿಗ್ಗೆನ ಕೆಲಸಗಳನೆಲ್ಲಾ ಮುಗ್ಸಿಕಂಡ್ ಮಾಮೂಲಿ ಗಾಂದಿ ಸರ್ಕಲ್‌ಲಿ ಇದ್ದ ಮದುನಿವಾಸಕ್ಕೆ ನುಗ್ಗಿತ್.

ಅಲ್ಲಿ ತಿಂಡಿ ತಿಂದ್‌ಕಂಡೇ ಹಂಗೇ ಬೆಳಿಗ್ಗಿನ ದಿನ ಪತ್ರಿಕೆನ ಕೈಗೆ ತಕಂಡ್ ಅದರ ಮೇಲೆಲ್ಲಾ ಕಣ್ಣಾಡಿಸಿಕೆ ಸುರುಮಾಡ್ತ್, ಅದರಲ್ಲಿ ದಂತ ಚೋರ ವೀರಪ್ಪನ್‌ನ ಹೊಗಳಿ ಬರೆದಿದ್ದರೆ, ಇನ್ನೊಂದು ಕಡೆ L.T.T.ಗಳ ಕಾರ್ಯಾಚರಣೆಗಳ ವಿವರಗ, ಉತ್ತರ ಪ್ರದೇಶಲಿ ಉಗ್ರಗಾಮಿಗಳ ಚಟುವಟಿಕೆಗ ಹಿಂಗೆಲ್ಲಾ ಸುದ್ದಿಗೆ ಇದ್ದೊ. ರಾಜುದು ತಿಂಡಿನೂ ತಿಂದ್ ಆತ್, Mr. Rajuಗೆ ಒಂದ್ ಒಳ್ಳೆ ಸಂಪಾದನೆ ಮಾಡಿಕೆ ದಾರಿ ತೋರ್ಸುವಂತಹ ಯಾವ ಸುದ್ದಿನೂ ಇತ್ಲೆ. ಹಂಗೇ ಅಲ್ಲೇ ಒಂದ್ ಧಂ ಸಿಗರೇಟ್‌ನ ಸೇದಿಕಂಡ್ ಆ ಪೇಪರ್ ಹಿಂದೆ ತಿರುಗಿಸಿ ನೋಡಿಕೆ ಸುರುಮಾಡ್ತ್, ಅದರಲ್ಲಿ ಒಂದ್ ಮೂಲೆಲಿ ಚೌಕಾಕಾರದ ಕಲಂಲಿ ಒಂದ್ ಪಬ್ಲಿಕೇಶನ್ ಕಣ್ಣಿಗೆ ಬೀತ್. "A" Negetive Blood ಕೂಡಲೆ ಬೇಕಾಗಿದೆ. ಸಹೃದಯದ ದಾನಿಗಳು ಕೂಡ್ಲೆ ಇಲ್ಲಿ ಹುಣಸೂರು ರೋಡಿನ ಬಿ.ಯಂ. ಆಸ್ಪತ್ರೆಗೆ ಬೇಟಿನೀಡಿ ಒಬ್ಬ ನಿಸ್ಸಾಯಕ ರೋಗಿಗೆ ಸಹಾಯ ಮಾಡಿದರೆ ತಕ್ಕ ಪ್ರತಿಪಲವನ್ನು ಕೊಡಲಾಗುವುದು.

ಇದರ ನೋಡ್ದ ರಾಜು ಮಂಜ್ನ ತಾನ್ ಸೇದುತಿದ್ದ ಸಿಗರೇಟ್‌ನ ಅರ್ಧಕ್ಕೆ ಬಿಸಾಕಿ, ಅಲ್ಲಿನ ಕೌಂಟರ್‌ಲ್ಲಿ ಬಿಲ್‌ನ ಪಾವತಿಮಾಡಿ ಹಂಗೇ ಹೊರಗೆ ಬಂದ್ ಗೇಟ್ ಹತ್ರ ನಿಂತಿದ್ದ ಒಂದ್ ಆಟೋನ ಹಿಡ್ದ್ ನೆಟ್ಟಂಗೆ ಬಿ.ಯಂ. ಆಸ್ಪತ್ರೆಗೆ ಹೊರಟಿತ್. ಇಂದ್‌ನ ಡ್ಯೂಟಿ ಒಬ್ಬ ರೋಗಿಗೆ ಸಹಾಯ ಮಾಡುದು ತ್ತಾ ನನ್ನ ರಕ್ತ ಆ ಮನುಷ್ಯಂಗೆ ಉಪಯೋಗಕ್ಕೆ ಬಂದ್ರೆ ನಾನ್ ನನ್ನ ರಕ್ತನ ಕೊಟ್ಟ್ ಒಂದ್ ಒಳ್ಳೆ ಕೆಲ್ಸ ಮಾಡಿದಂಗೆ ಆದೆತಾ ಗ್ಯಾನ ಮಾಡಿಕಂಡೇ ಇರ್‌ಕನ ಬಿ.ಯಂ. ಆಸ್ಪತ್ರೆ ಗೇಟ್ ಮುಂದೆ ಆಟೋ ಬಂದ್ ನಿಂತತ್.

ಇಂದ್ Mr. ರಾಜು ಒಳ್ಳೆ ನರ ಪೇತ್ಲನಂಗೆ ಬಿಳೀ ಬಣ್ಣದ ಒಂದ್ ಜುಬ್ಬ, ದೊಗಳೆ ಪೈಜಾಮ್‌ನ ಹಾಕಂಡ್ ಜೀರೋ ಪವರ್ ಗ್ಲಾಸ್‌ನ ಕಣ್ಣಿಗೆ ಹಾಕಂಡ್ ತಲೆಕೂದ್ಲ್‌ನೆಲ್ಲಾ ಕೆದರಿ ಕಂಡ್ ಸವೆದ್ ಹೋದ ಚಪ್ಪಲ್‌ನ ಮೆಟ್ಟಿಕಂಡ್ ಬಂದಂವ ನೆಟ್ಟಂಗೆ ಅಲ್ಲಿನ ರಿಸಪ್ಷನ್ ಕೌಂಟರ್ ಮುಂದೆ ಹೋಗಿ ಅಲ್ಲಿನ ರಿಸಪ್ಷನಿಸ್ಟ್ ಭವಾನಿನ ಮುಂದೆ ಹೇಳ್ತ್. ಗುಡ್ ಮಾರ್ನಿಂಗ್ ಸಿಸ್ಟರ್. ನಾನು. ಎಸ್. ನಾರಾಯಣ್ ತಾ ನನ್ನ ಹೆಸ್ರ್, ನಿರುದ್ಯೋಗಿ, B.Sc., ಗ್ರೇಜುಯೆಟ್ ಇಂದಿನ ಪೇಪರಲ್ಲಿ A ನೆಗೆಟಿವ್ ಗ್ರೂಪ್ ಬ್ಲೆಡ್ ಬೇಕಾಗಿಟ್ಟುತಾ ಬಂದಿತ್, ಅದಕ್ಕೊಸ್ಕರ ನಾನ್ ಬಂದದ್. ನಂದ್ A ನೆಗೆಟಿವ್ ಗ್ರೂಪ್‌ನೇ ಇರೋಕು. ಚೆಕ್ ಮಾಡಿ ನೋಡಿರೆ ಗೊತ್ತಾದು ನಾನ್ ಎಷ್ಟ್ ಬಾಟ್ಲಿ ರಕ್ತನ ಬೇಕಾದ್ರೂ ಕೊಟ್ಟನೆ ನಂಗೆ ಈಗ ಹಣ ಬೇಕಾಗುಟ್ಟು ತ್ತೇಳ್ತ್. ಆಗ ಭವಾನಿ ಸಿಸ್ಟರ್ ಈ ರಾಜುನ ಎರಡೆರಡ್ ಸರ್ತಿ ನೋಡ್ತ್. ಇಂವ ನ ಮೊದ್ಲೊಂದ್ ಸರ್ತಿ ಇಲ್ಲೆಲ್ಲೋ ನೋಡಿಯೊಳಲ್ಲಾತಾ ಗ್ಯಾನ ಮಾಡಿಕಂಡ್ ಏನೋ ಒಂದ್ ಚೀಟಿನ ಬರಿಯಕೆ ಸುರು ಮಾಡ್ತ್.

ಈ ಮಿ. ನಾರಾಯಣ್ ಎದುರುಗಡೆ ಕುರ್ಚಿಲಿ ಆರಾಂ ಆಗಿ ಕುದ್ದ್‌ಕಂಡ್ ಗ[illegible] ಮಾಡಿಕೆ ಸುರುಮಾಡ್ತ್. ಒಂದ್ [illegible]ಳಿಗೆಲಿ "ಉಂಬುಳಿ" [illegible] ರಕ್ತ ಹೀರಿದಂಗೆ ಏನೊ ಬೇನೆ ಆಗದಂಗೆ ಎರಡ್ ಬಾಟ್ಲ್ ರಕ್ತನ ಹೀರಿ ಹಾಕಿಬುಟ್ರೋಲ್ಲಾ? ಇವು ನಂಗೆ ಕೊನೆಗೆ ಹಣ ಎಷ್ಟ್ ಕೊಡುವೊ? ನಾನ್ ಮೊದ್ಲೇ ಇವರ ಹತ್ರ ಕಂಡೀಷನ್ ಆಗಿ ಮಾತಾಡಿ ಬುಡಕಾಯ್ತ್. ಈಗ ಅವು ಕೊಟ್ಟಸ್ಟ್ ಹಣಾನ ತಕಂಡ್ ಹೋಕು ತಾ ಗೇನ ಮಾಡಿ ಕಂಡಿರಿಕಾಕನ ರೀ ಮಿಸ್ಟರ್ ಎಸ್. ನಾರಾಯಣ್. ಬನ್ನಿ ಇಲ್ಲಿ ಈ ರಶೀದಿ ಮೇಲೆ ನಿಮ್ಮ ಸಿಗ್ನೇಚರ್ ಹಾಕಿತ್ತೆಳಿ ಆ ಭವಾನಿ ಸಿಸ್ಟರ್ ಹತ್ರಕೆ ಕರ್ದ್ ಅವರ ರಶೀಧಿ ಬುಕ್ಕ್‌ನ ಮುಂದೆ ಹಿಡ್ದೊ. ಆ ರಶೀಧಿ ಬುಕ್ಕ್ ಮೇಲೆ S. Narayanತಾ ಸಹಿ ಮಾಡಿ ಅಕ್ಯಾಕನ ಭವಾನಿ ಸಿಸ್ಟರ್ ನೂರರ 20 ನೋಟ್‌ನ ಲೆಕ್ಕ ಹಾಕಿ ಎರಡ್ ಸಾವಿರ ರೂಪಾಯಿನ ಕೊಟ್ರೊ.

ಹೊಳೆಯಲ್ಲಿ ಹರಿದುಹೋದ ನೀರಿನಂತೆ ಕಾಲವು ಮತ್ತೆ ಮರಳಿ ದೊರೆಯದು. ಒಮ್ಮೆ ಕಳೆದು ಹೋದರೆ ಕಳೆದು ಹೋದಂತೆಯೇ

ಇದರ ನೋಡ್ದ ಮಿ. ನಾರಾಯಣ್‌ಗೆ ಬಹಳ ಖುಷಿ ಆಗಿ ಹೋತ್. ಈ ಹಣಾನ ಡೈರೆಕ್ಟಾಗಿ ಆ ಪೇಶಂಟ್ ಪಾರ್ಟಿನೇ ಕೊಟ್ಟಿರೊಕು. ಇಲ್ಲೇತ್ತೇಳಿರೆ ಈ ಆಸ್ಪತ್ರೆನವು ಎರಡ್ ಬಾಟ್ಲಿ ರಕ್ತಕ್ಕೆ ಐನೂರು ರೂಪಾಯಿ ಕೊಟ್ರೇ ಅದೇ ಹೆಚ್ಚ್. ಯಾವುದಕ್ಕೂ ಇಲ್ಲಿಂದ ಬೇಗ ಜಾಗ ಖಾಲಿ ಮಾಡೂಕು. ಇಲ್ಲಿನವುಕೆ ನನ್ನ ಗುರ್ತು ಸಿಕ್ಕುತಾ ಉಟ್ಟುತಾ ಹೇಳಿಕಂಡ್ ಆ ಸಿಸ್ಟರಿಗೆ ವಿಷ್ ಮಾಡಿಕಂಡ್ ಅಲ್ಲಿಂದ ಬಂದ್ ಬೇಗ ಹೊರಗೆ ಆಟೋ ಹತ್ತಿ ಜೈನ್ ಲಾಡ್ಜಿಗೆ ಬಂದ್ ಇಳ್ತ್.

ಗಾಂದಿ ಸರ್ಕಲ್‌ಲಿ ಇಳ್ದ್ಂಗೆ ಎರಡ್ ಬೆಂಡ (ಎಳನೀರ್)ನ ಕಡ್ಸಿಕಂಡ್ ಕುಡ್ತ್, ಸದ್ಯ ಸಾಕ್ ಇಂದ್‌ನ ಸಂಪಾದನೆ ಆ ನನ್ನ ಗುರುಕಾರಣವನ ಆಶ್ರೀವಾದದ ಬಲದಿಂದ ನಂಗೆ ಇಂದ್ ಎರಡ್‌ಸಾವಿರ ರೂಪಾಯಿ ಸಿಗ್ತ್‌ತಾ ಗ್ಯಾನ ಮಾಡಿಕಂಡ್ ಬಂದ್ ತನ್ನ ಕಟ್ಲ್‌ಮೇಲೆ ಹೋಣಿಕಿ ಕುಂಡತ್. ಇನ್ನೂ ಮಧ್ಯಾನ ಹೊತ್ತ್ ಆಗಿತ್ಲ. ಆದ್ರುಂಡ ಒಂದ್ ಸಿಗರೇಟ್ ಹಚ್ಚಿ ಸೇದಿಕಂಡ್ ಮಲಗಿದವಂಗೆ ಕಣ್ಣಿಗೆ ಜೋಂಪು ಹತ್ತಿ ನಿದ್ರೆಗೆ ಜಾರ್ತ್.

ರಾಜುಗೆ ಎಚ್ಚರ ಆಗಿ ಎದ್ದ್ ನೋಡ್‌ಕನ ಗಂಟೆ ಐದು ಆಗಿ ಹೋಗಿತ್. ಆಕಳಿಸಿ ಮೈಮುರ್ದ್ ಎದ್ದ್ ಕೈಕಾಲು ಮುಖನ ತೊಳ್ಕೊಂಡ್ ಕನ್ನಡಿ ಮುಂದೆ ನಿಂತ್‌ಕಂಡ್ ದಪ್ಪಮೀಸೆ ಗುಂಗುರು ಕೂದ್ಲುನ ಬಾಚಿ ಕಂಡತ್. ಬಿಳಿಶರ್ಟ್‌ಮೇಲೆ ಒಂದ್ ಮಿಲ್ಟ್ರೀ ಜರ್ಕಿನ್‌ನ ಹಾಕಂಡ್ ಖಾಕಿ ಪ್ಯಾಂಟ್ ಮತ್ತೆ ಶೂವ್‌ನ ಹಾಕಂಡ್ ಹೋಟೆಲ್ ಸಂತೋಷ್‌ಗೆ ನುಗ್ಗಿತ್. ಅಲ್ಲಿ ಹೊಟ್ಟೆ ತುಂಬಾ ರವೆ ದೋಸೆ ಜಾಮೂನು, ಸಮೋಸ, ಹಿಂಗೆಲ್ಲಾ ತಿಂದ್ ಕಾಫಿ ಕುಡ್ದ್ ಇಂದ್‌ನ ದಿನ ಕಳಿಯಕೆ ಎತ್ತ ಹೋದುತಾ ಜೊತೆಗೆ ಮಾತುಕತೆ ಆಡಿಕೆ ಸನ ಯಾರೂ ಇಲ್ಲೆತಾ ಗ್ಯಾನ ಮಾಡಿಕಂಡ್ ಟೌನ್ ಹಾಲ್ ಮೈದನಕ್ಕೆ ಬಾತ್.

ಅಲ್ಲಿ ಆಗಳೇ ತುಂಬಾ ಜನ ಗುಂಪುಗುಂಪಾಗಿ ಹರಟೆ ಹೊಡಕಂಡ್ ಕುದ್ದಿದ್ದೊ. ಈ ಗುಂಪುಲಿ, ಸೋಮಾರಿ ಪಡ್ಡೆ ಹೈದಂಗ, ಮತ್ತೆ ರಾತ್ರಿ ಸಮಯಲಿ ಕನ್ನ ಹಾಕಿ ಕಳ್ಳತನ ಮಾಡುವ ಜನ, ಇದ್ದಿರವೋ, ಮತ್ತೆ ಕೆಲವು ಹೋಟೆಲ್‌ಗಳಲ್ಲಿ ಕೆಲ್ಸ ಮಾಡುವ ಹೈದಂಗ ಅಡಿಗೆ ಬಟ್ಟಂಗ ಅವರ ಬ್ರೇಕ್ ಅವರ್ಸ್‌ಲಿ (Rest time) ಟೈಂ ಪಾಸ್ ಮಾಡಿಕೆ ಇಲ್ಲಿ ಬಂದ್ ಕುದ್ದಿದ್ದವೆ. ಇವರನೆಲ್ಲಾ ನೋಡಿಕಂಡ್ ಹಂಗೇ ಅರಮನೆ ಮುಖ್ಯ ಗೇಟ್‌ನ ಕಡೆಗೆ ಹೊರಟತ್.

ಅಲ್ಲಿ ಆಂಜನೆಯ ಸ್ವಾಮಿ ದೇವಸ್ಥಾನದ ಎದುರುಗೆ ಎರಡು ಸಾಲುಗಳಲ್ಲಿ ಕೈಯಲ್ಲಿ ಕೆಲ್ಸ ಮಾಡಿಕೆ ಆಗದೇ ಇದ್ದ ಬಿಕ್ಷುಕಂಗ ಬಿಕ್ಷೆ ಬೇಡಿಕಂಡ್ ಕುದ್ದಿದ್ದೊ. ಕುರುಡರುಗ ಕುಂಟರ್‌ಗ, ಮತ್ತೆ ತುಂಬಾ ವಯಸ್ಸಾದ ನಿರ್ಗತಿ ಜನ ಹಿಂಗೆ ತುಂಬಾ ಇದ್ದೊ.

ಈ ಆಂಜನೆಯ ಸ್ವಾಮಿ ದರ್ಶನಕ್ಕೆ ತುಂಬಾ ಜನ ಭಕ್ತರ್‌ಗ ಬಂದವೆ. ಯಾಕೆತ್ತೇಳಿರೆ ಈ ದೇವರ ಹೆಸ್ರ್‌ಲಿ ಇಲ್ಲಿಂದ ಕೊಡುವ ಒಂದ್ ಮಂತ್ರದ ದಾರ, ಇಲ್ಲೇ ಒಂದ್ ನಿಂಬೆಹಣ್ಣ್ ಅಥವಾ ಒಂದ್ ತಾತಿನ ತಕಂಡ್ ಹೋದ್ರೆ ಆ ಜನರ ಮನೇಲಿ ಇದ್ದವರ ಖಾಯಿಲೆ, ಕಷ್ಟಗ ಪರಿಹಾರ ಆದೆತ್ತೇಳುವ ಒಂದು ನಂಬುಗೆ ತುಂಬಾ ಜನರಲ್ಲಿ ಉಟ್ಟು. ಹಂಗಾಗಿ ಈ ಬರುವ ಹೋಗುವ ಭಕ್ತರಿಂದ ಇಲ್ಲಿ ಬಿಕ್ಷೆ ಬೇಡುವಕ್ಕೂ ಒಳ್ಳೆ ಕಾಸ್ ಸಂಪಾದನೆ ಆಗುತಾ ಉಟ್ಟು. ಇದನೆಲ್ಲಾ Mr ರಾಜು ನೋಡಿ ಕಂಡ್ ಇದರ ಮದ್ಯೆ ದಾಟಿ ಹೋಕಾಕನ ಸಡನ್ ಆಗಿ ಒಂದು ಮುಪ್ಪಾದ ದಂಪತಿಗ ಅವು ಬಿಕ್ಷೆ ಬೇಡಿ ಇಟ್ಟ್‌ಕಂಡಿದ್ದ ಚಿಲ್ಲರೆ ಕಾಸ್‌ಗಳನ್ನ ಆತುರ ಆತುರ ಆಗಿ ಎತ್ತಿಕಂಡ್ ಎದೆ ಒಳಗಿದ್ದ ಜೇಬುನ ಒಳಗೆ ಸೇರಿಸಿಕಂಬಕೆ ಪ್ರಯತ್ನ ಪಟ್ಟೊ. ಅಷ್ಟೊತ್ತಿಗೆ ದೂರಂದ ಒಬ್ಬ ದಾಂಡಿಗ ಮನುಷ್ಯ ಕೆಟ್ಟ ಕೆಟ್ಟದಾಗಿ ಬೊಯ್ದಿ ಕಂಡ್ ಒಳ್ಳೆ ಗೂಳಿತರ ನುಗ್ಗಿಬಾತ್. ಹಂಗೇ ಬಂದಂವ ಈ ಅಜ್ಜ ಅಜ್ಜಿಗಳ ಬಿಕ್ಷೆ ತಟ್ಟೆನ ಹಾಸಿದ್ದ ಬಟ್ಟೆನ ಕಾಲ್‌ಲೇ ತಳ್ಳಿ ಹಾರ್ಸಿತ್. ಅಜ್ಜನ ಕುತ್ತಿಗೆ ಪಟ್ಟಿನ ಸೇರ್ಸಿ ಹಿಡಕಂಡ್ ಎಳ್ದ್ ನಿಲ್ಸಿಕಂಡ್ ಅವರ ಹೊಟ್ಟೆ ಒಳಗಿದ್ದ ಜೋಬೊಳಗೆ ಕೈ ಹಾಕಿತ್ ಅಜ್ಜ ಅಜ್ಜಿ ಗಾಬರಿ ಮತ್ತೆ ಭಯಲಿ ಕಾಪಾಡ್ರೊಪ್ಪಾ ತೇಳಿಕಂಡ್ ಮರಡ್‌ಕಂಡ್ ಕೈಮುಗ್ದ್‌ಕಂಡ್ ಕಿರುಚಾಡುತಿದ್ದೊ. ಇವರ ಈ ಅಸಾಯಕತೆಗೆ ಯಾರೂ ಹತ್ರ ಹೋಗುವಂಗೇ ಇಲ್ಲೆ. ಯಾಕೆತ್ತೇಳ್ರೆ ಆ ದಾಂಡಗ ಪೈಲ್ವಾನ್ ಕಂಠ ಪುಲ್ ಕುಡ್ದ್ ಭಯಂಕರ ಆಗಿ ಕೆಟ್ಟ ಬಾಷೆಲಿ ಬಯ್ಯತಿತ್ತ್. ಸರಿಯಾಗಿ ಕಾಸೆಲ್ಲಾ ಕೊಡ್ದೇ ಇದ್ರೇ ಇಲ್ಲೇ ಸಾಯಿಸಿ ಬುಟ್ಟನೆ ತ್ತೇಳಿಕಂಡ್ ಆ ಅಜ್ಜನ ತಲೆ ಕೂದ್ಲ್‌ನ ಸುತ್ತಿ ಹಿಡ್ದ್ ಕೆಳಗೆ ಬೊಗ್ಗಿಸಿತ್.

ಅಷ್ಟೊತ್ತಿಗೆ ಆ ದಾಂಡಿಗನ ಪಡನೆಟ್ಟಿಗೆ ಒಂದ್ ಪೆಟ್ಟ್ ಮುಖದ ಮೇಲೆ ಒಂದ್ ಗುದ್ ಮಿಂಚಿನ ವೇಗಲಿ Mr. Rajuನ ಕೈಯಿಂದ ಬಿತ್. ಅಂವ ಎದ್ದ್ ಎದುರಾಳಿ Mr. Rajuನ ನೋಡಿ ಗುದ್ದಿಕೆ ಕೈ ಎತ್ತಿಕೆ ಮುಂದೆ ಮೂಗ್‌ನ ಮೇಲೆ ಒಂದ್ ಮುಷ್ಠಿ ಗುದ್ದ್ ಬಿದ್ದ್ ತುಟಿ ಮೂಗ್ ಹರ್ದ್ ಹೋತ್. ಕಣ್ ಮಂಜಾತ್ ಗುದ್ದಿಕೆ ಎತ್ತಿದ ಕೈನ ಜೋಡಿಸಿ ನನ್ನ ಬಿಟ್ ಬಿಡಿ ಸ್ವಾಮಿ ನಂದ್ ತಪ್ಪಾತ್ ನಂದ್ ತಪ್ಪಾತ್ ಅಂತ ಬೇಡಿ ಕೊಂಡ. ಆಗ Mr. Raju ಅವನ ಎದೆ ಪಟ್ಟನ ಸೇರ್ಸಿ ಹಿಡ್‌ಕಂಡ್ ನಿಂಗೆ ಕಾಸ್ ಬೇಕಾ? ತಕ ನಾನ್ ಕೊಟ್ಟನೆತ್ತೇಳಿ ಇನ್ನೊಂದ್ ಗುದ್ದಿಕೆ ಕೈ ಎತ್ತಿತ್. ಆಗ ಇಂವ ಅವರ ಕಾಲ್ ಬುಡಕೆ ಕುಸ್ತ್‌ಕುದ್ದ್ ನನ್ನ ಬುಟ್ಟ್ ಬುಡಿ ಸ್ವಾಮಿ ಇನ್‌ಮ್ಯಾಕೆ ನಾನ್ ಹಿಂಗೆ ಮಾಡೊಲ್ಲಾ ಸ್ವಾಮಿತ್ತೇಳಿ ಬೇಡಿಕಂಡತ್. ಸರಿ ಏಳು ಮೇಲೆ ಈ ಅಜ್ಜಅಜ್ಜಿ ಯಾರ್? ನಾನ್ ಅವುಕೆ ಏನಾಕು? ಹೇಳ್ ತ್ತೇಳಿ ಸಿಟ್ಟ್‌ಲಿ ಕೇಳ್ತ್. ಸ್ವಾಮಿ ಇವು ನನ್ನ ಅಪ್ಪ ಅವ್ವಂಗ. ಇವರ ನಾನೇ ಈ ಜಾಗಲಿ ಕೂರ್ಸಿದ್. ಇಷ್ಟೊತ್ತಿಗೆ ನಂಗೆ ಇವು ಸ್ವಲ್ಪ ಚಿಲ್ಲರೆ ಕಾಸ್ ಕೊಡ್ತಿದ್ದೋ ಸ್ವಾಮಿ. ಅದಕ್ಕೇ ತ್ತಾ ಹೇಳಿ ರಾಗ ಎಳೆಯಕಾಕನ Mr. Rajuನ ಒಂದ್ ಗುದ್ದ್ ಅವನ ಎದೆಗೆ ಬಿದ್ದತ್. ಆ ರಭಸಕ್ಕೆ ಅಂವ ಅಷ್ಟು ದೂರ ಹೊಗಿ ಬಿದ್ದತ್. ಪುನಃ ಅವನ ಹಿಡ್ದ್ ಎತ್ತಿ ನಿಲ್ಸಿ ಹೇಳ್ತ್. ಮುಪ್ಪಾದ ಅಪ್ಪ ಅಮ್ಮಂದಿರಿಂದ ಸ್ವಂತ ಮಗನದೇ ಸುಲಗೆ ಯಾವ ಸೀಮೆ ರೌಡಿ ನೀನು? ಇನ್ನೊಂದು ದಪ್ಪಾ ನೀನು ಇವರ ಸುದ್ದಿಗೆ ಬಂದ್ರಾ ನಿನ್ನನ್ನೇ ಇಲ್ಲೆ ಇವರ ಜೊತೆಗೆ ಕೂರುವಂಗೆ ಮಾಡಿಬುಟ್ಟನೆ

ಮಾತು ಬಾರದಿದ್ದರೆ ಸಮ್ಮನಿರುವವನೆ ಜಾಣ

ರ್ಯಾಸ್ಕಲ್. ಯಾರೂಂತ ತಿಳ್ಕಂಡ ನನ್ನ? ಏನ್ ನಿನ್ನ ಹೆಸ್ರು? ಬಡ್ಡಿ ಮಗನೆ. ಆನೆ ತರ ಮೈ ಬೆಳಸಿ ಕಂಡೊಳ? ಈ ಕೈಯಲ್ಲಾಗದ ಅಪ್ಪ ಅಮ್ಮ ನಿಂಗೆ ಕಳ್ಳು ಕುಡಿಯೋಕೆ ಮಜ ಮಾಡೋಕೆ ಕಾಸುಕೊಡಕಲ್ಲಾ? ಇಷ್ಟು ಕೊಬ್ಬಿದ ನಿಂಗೆ ವಯಸ್ಸಾದ ಅಪ್ಪ ಅಮ್ಮನ ಸಾಕುವ ಯೋಗ್ಯತೆ ಇಲ್ಲೆಲ್ಲಾ? ನಡಿ ನಾ ನಿಂಗೆ ಕೆಲ್ಸ ಕೊಡ್ಸಿನೆ ಬಾ ನನ್ನ ಜೊತೇಲಿ ತೇಳಿ ಅವನ ಎಳ್ದಾಡ್ತ್, ಆಗ ಅಂವ ಬ್ಯಾಡ ಸ್ವಾಮಿ ಇನ್‌ಮುಂದೆ ನಾನೇ ಇವರನ ಸಾಕೋತ್ತೀನಿ. ಇವರ್‍ನ ಇನ್ ಮುಂದೆ ಇಲ್ಲಿ ಬಿಕ್ಷೆಗೆ ಕೂರ್‍ಸೋಲ್ಲ. ನಾನು ಸುಣ್ಣ ಬಣ್ಣ ಹೊಡಿಯುವ ಕೆಲ್ಸ ಮಾಡುತ್ತೇನೆ ಸ್ವಾಮಿ. ನನ್ನ ಇಲ್ಲೇ ಬುಟ್‌ಬುಡಿ ಬುದ್ದೀ ನನ್ನ ಅಪ್ಪ ಅವ್ವನ ಚೆಂದಾಗಿ ನೋಡಿಕಂಡನೆ ತಾ ಕೈಮುಕ್ಕಂಡೇ ಕೇಳಿಕಂಡತ್.

ಸರಿ ನಿನ್ನ ಗ್ರಹಚಾರ ನೆಟ್ಟಂಗುಟ್ಟ್. ನಿನ್ನ ತೊಪ್ಪ್‌ನ ನೀನ್ ಒಪ್ಪಿಕಂಡೊಳ. ಅದ್ರಂದ ನಿನ್ನ ಬುಟ್ಟನೆ. ಓಡ್ ಎದ್ದ್ ಓಡ್ ನನ್ನ ಮುಂದೆ ನಿನ್ನ ಮುಖ ತೋರ್‍ಸ್ ಬೇಡ ತ್ತೇಳಿ ಎಡ್ದ ಕೈ ಮುಷ್ಠಿ ಬಿಗಯತಿತ್ತ್. ಏಟ್‌ನ ರುಚಿನ ಲಾಯಕ್ಕಿ ತಿಂದಿದ್ದ ಈ ದಾಂಡಿಗ ತಿರುಗಿ ನೋಡ್ದೆ ಸದ್ಯ ಜೀವ ಉಳ್ಕಂಡ್ರೆ ಸಾಕ್ ತ್ತೇಳಿಕಂಡ್ ಎದ್ದ್ ಓಡಿಹೋತ್.

ಇಷ್ಟಾದ ಮೇಲೆ ಈ ಮುದಿ ದಂಪತಿಗ ಕೈ ಮುಕ್ಕಂಡ್ ಹತ್ರಕ್ಕೆ ಬಂದೊ. ಸ್ವಾಮಿ ನೀವು ಸಾಕ್ಷಾತ್ ಆಂಜನೆಯ ಸ್ವಾಮಿ ದೇವರಪ್ಪಾ ನನ್ನ ಕೇಡಿ ಮಗ ನಾಗನಿಗೆ ಒಂದೇ ನಿಮಿಷಕ್ಕೆ ದುಡಿದು ತಿನ್ನೊ ಬುದ್ದಿ ಕಲ್ಸಿದ ದೇವರು ನೀವುತ ಹೇಳಿಕಂಡ್ ಅವು ಇವನ ಪಾದಕ್ಕೆ ಬಿದ್ದ್ ಬುಟ್ಟೋ. ಅಯ್ಯೋಯ್ಯೋ ತ ನೂರ ಕಾಲೆಳಕಂಡ್ ಆ ಮಹಾಸ್ವಾಮಿಗೆ ನನ್ನ ಹೋಲಿಸ ಬೇಡಿ. ನಾನು ನಿಮ್ಮಂತೆ ಮನುಷ್ಯನೇ. ನಾಳೆ ಪುನಃ ಇಷ್ಟೊತ್ತಿಗೇ ಇಲ್ಲಿಗೆ ಬಂದನೆ. ಪುನಃ ನಿನ್ನ ಮಂಜ್ಜ ಹಿಂಸೆ ಕೊಟ್ರೆ ಹೇಳಿ ಅವಂಗೆ ನಾನ್ ಬುದ್ದಿ ಕಲ್ಸಿನೆ ತ್ತೇಳಿ ಸಮಾಧಾನ ಹೇಳ್ತ್. ಆಗಲಿ ನಮ್ಮ ಅಪ್ಪಾ ಹಂಗೇ ಮಾಡ್ತೀವಿ ದಿನಾ ನಾವು ಅವುನಿಗೆ 50 ರೂಪಾಯಿ ಹಣ ಕೊಡ ಬೇಕು ಈ ದಿನ ನಮಗೇ ಏನೂ ಸಂಪಾದನೆ ಆಗ್ಲಿಲ್ಲ ಸ್ವಾಮಿ ಈ ನನ್ ಮಗನ ಹಿಂಸೆ ದಿನಾ ಹೀಗೇನೇ ಶರಾಬ್‌ನ ಕುಡ್ದ್ ಬರ್‍ತನೆ. ನಮಗೆ ಹಿಡ್ದ್ ಬುಡ್ದ್ ದುಡ್ ಕಿತ್ ಕಂಡು ಹೋಗುತಿರುತ್ತಾನೆ. ಸ್ವಾಮಿ ತಾ ಬಹಳ ದುಃಖಲಿ ಹೇಳಿಕಂಡೊ. ಸರಿ ಇನ್ ಮುಂದೆ ಅಂವ ನಿಮಗೆ ಹಿಂಸೆ ಕೊಡದಂಗೆ ನಾನ್ ನೋಡ್ಕೋತೀನಿ ತ Mr. Raju ಧೈರ್ಯ ಹೇಳ್ತ್.

ಎಂಥಾ ಪ್ರಪಂಚಪ್ಪಾ ಇದ್? ಆಯಸ್ಸ್ ಮುಗ್ದ್ ಹಾಯುವ ಸಮಯದಲ್ಲೂ ತಾವು ಹೆತ್, ಹೊತ್ತ್ ಪ್ರೀತಿಂದ ಸಾಕಿದ ಈ ಮಂಜ್ಜನಿಂದೇ ಈ ಅಪ್ಪ ಅವ್ವನ ಸುಲಿಗೆ. ಹೇ ಪರಕಾರಣವನೇ ಆ ದಾಂಡಿಗ ನಾಗಂಗೆ ಒಳ್ಳೆ ಬುದ್ದಿ ಕೊಡಪ್ಪಾ ತೇಳಿ Mr. Raju ಮನ್ಸ್‌ಲೇ ಪ್ರಾರ್ತಿಸಿಕಂಡತ್.

ತಾತ ನಾಳೆ ನಿಮ್ಮ ಮಗ ಬಂದ್ ನಿಮಗೆ ಹಿಂಸೆ ಕೊಟ್ರು ನೀವು ಅಂವಂಗೆ ಹೇಳಿ ಇನ್‌ಸ್ಪೆಕ್ಟರ್ Rajuಗೆ ಹೇಳಿನೆ ತ . ಆ ನಿಮ್ಮ ಮಂಜ ನನ್ನ ಹೆಸ್ರ್ ಕೇಳಿಕಾಕನ ಇಲ್ಲಿಂದ ಜಾಗ ಖಾಲಿ ಮಾಡಿ ಒಡ್ಡು. ಧೈರ್ಯವಾಗಿರಿ. ಬರ್‍ಲಾ ತಾತಾ ತೇಳಿ ಅಲ್ಲಿಂದ ಹೊರಟತ್. ಇಂತ ಸಿನಿಮಯ ಫೈಟಿಂಗ್‌ನ ನೋಡಿಕೆ ಜನ ಸುತ್ತ ಬಂದ್ ಸೇರಿದ್ದೋ ಅಷ್ಟೋತ್ತಿಗೆಲ್ಲಾ ಇದರ ತೀರ್ಮಾನ ಆಗಿ ಹೋಗಿ ಪೆಟ್ ತಿಂದವ್ನೂ ಪೆಟ್ಟ್ ಕೊಟ್ಟವ್ನೂ ಆ ಜಾಗ ಖಾಲಿ ಮಾಡಿ ಹೋಗಿ ಬುಟ್ಟಿದ್ದೊ.

ಒಂದು ಮುಪ್ಪಾದ ಬಡ ಜೀವಕ್ಕೆ ಸ್ವಲ್ಪ ನೆಮ್ಮದಿ ಮಾಡಿದ ಈ ಕೆಲಸದಿಂದ Mr. Rajuಗೆ ಬಹಳ ಖುಷಿ ಆಗಿತ್. ಇಂತ ಜನ ಕಣ್ಣಿಗೆ ಬಿದ್ರೆ ಅವರ ಸೊಂಟನೇ ಮುರ್ದ್ ಬಿಕ್ಷೆ ಬೇಡಿಕೆ ಕೂರಿಸಿ ಬುಡೊಕು. ಆದ್ರೇ ನಾನೊಬ್ಬನೇ ಈ ಸಮಾಜದ ನ್ಯಾಯಕೆಲ್ಲಾ ದಾರಿ ತೋರ್‍ಸಿಕೆ ಆದ್ಯಾ?

ನನ್ನ ತರ ನೂರಾರ್ ಹುಡಗರ್ ಇಂತ ಅನ್ಯಾಯ ಆಗುವಕಡೆ ತಡೆಯಕೆ ನೋಡಿರೆ ನಮ್ಮ ಸಮಾಜಲಿ ದಿನ ಆಗುತ್ತಿರುವ ನಾನಾನ ತರದ ಶೋಷಣೆಗಳ ನಿಲ್ಸಕ್ ಎಲ್ಲದಕ್ಕೂ ಅವರವರ ಎದೆಲಿ ಆ ತರದ ಬಾವನೆ ಬೆಳ್ದರೆ ನಮ್ಮ ಸಮಾಜ ಸ್ವಲ್ಪ ಸರಿಯಾದು ಕಂಡದೆ ತ್ತೇಳಿಕಂಡ್ ಒಂದ್ ಸಿಗರೇಟಿಗೆ ಬೆಂಕಿಕಡ್ಡಿ ಗೀರ್‍ತ್.

(ಮುಂದ್‌ವರ್ದದೆ)

---

## ನಗೆಹನಿ

ಒಂದು ಸಲ ಸುಭಾಷ್ ಚಂದ್ರ ಭೋಸರು ಒಂದು ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಅವರಿದ್ದ ಭೋಗಿ ಖಾಲಿಯಾಗಿತ್ತು. ಮುಂದಿನ ನಿಲ್ದಾಣದಲ್ಲಿ ಒಂದು ಹೆಂಗಸು ಅದೇ ಭೋಗಿಯನ್ನು ಸೇರಿಕೊಂಡಳು,

ರೈಲು ಚಲಿಸಿತು. ಆಗ ಆ ತರುಣಿ ಮರ್ಯಾದೆಯಿಂದ ನಿಮ್ಮ ಕಿಸೆಯಲ್ಲಿರುವ ಹಣ, ಕೈಯಲ್ಲಿರುವ ವಾಚನ್ನು ನನಗೆ ಒಪ್ಪಿಸಿದರೆ ಸರಿ, ಇಲ್ಲವಾದರೆ ನೀವು ನನ್ನ ಮಾನ ಭಂಗಕ್ಕೆ ಯತ್ನಿಸಿದಿರಿ ಎಂದು ಜೋರಾಗಿ ಕಿರುಚಿಕೊಳ್ಳುತ್ತೇನೆ ಎಂದಳು. ಸುಭಾಷ್ ಚಂದ್ರ ಬೋಸರು ಹೆದರದೆ, ತಾನು ಕಿವುಡ, ಮೂಗನ ಹಾಗೆ ನಟಿಸಿ ನೀನು ಏನನ್ನು ನನಗೆ ಹೇಳಬಯಸುತ್ತೀಯೋ ಅದನ್ನು ಬರೆದು ಕೊಡು ಎಂದು ಪೆನ್ನು ಮತ್ತು ಹಾಳೆಯನ್ನು ಅವಳಿಗೆ ನೀಡಿ ಸನ್ನೆ ಮಾಡಿದರು. ಅದರಂತೆ ಅವಳು ಬರೆದುಕೊಟ್ಟಳು. ಆಗ ಸುಭಾಸ್ ಚಂದ್ರ ಭೋಸರು ನಸು ನಕ್ಕು ಈಗ ಹೇಳು ನಿನ್ನ ತೊಂದರೆ ಏನು ಎಂದಾಗ ಅವಳ ಸ್ಥಿತಿ ಏನಾಗಿರಬಹುದು ಯೋಚಿಸಿ.

ಕೆ.ಎ. ಶಿವಪ್ಪ, ಗಾಳಿಬೀಡು.

---

ಅಪ್ಪ : ಮಂಜ ಇಸ್ಪೀಟ್, ಸಿಗರೇಟ್, ಕ್ರಿಕೆಟ್, ಪಿಚ್ಚರ್, ಲಾಟರಿ ಟಿಕೇಟ್ ಎಲ್ಲಾ ಬುಟ್ಟ್ ಬುಡು ನಿಂಗೆ ತಿಂಗಳಿಗೆ ಸಾವಿರ ರೂಪಾಯಿ ಕೊಟ್ಟನೆ ತೇಳಿ ಹೇಳ್ದೆ

ಮಂಜ : ಆಗ ಹೇಳ್ತ್, ಅಪ್ಪಾ ಇದೆಲ್ಲ ಇಲ್ಲದ ಮೇಲೆ ಸಾವಿರ ರೂಪಾಯಿ ನಂಗೆ ಯಾಕೆ ತಾ ಹೇಳ್ತ್.

ನಡುವಟ್ಟಿರ ಕಾಶಿ, ಮಡಿಕೇರಿ

---

ಆಗದವರಲ್ಲಿಗೆ ತಪ್ಪಿಯೂ ಹೋಗಬಾರದು

## ಇಂಟರ್‌ನೆಟ್ : ಎಳೆಯರಿಗೆ ಎಷ್ಟು ಸುರಕ್ಷಿತ?

ಆಕೆ 15 ವರ್ಷದ ಬೆಂಗಳೂರಿನ ವಿದ್ಯಾರ್ಥಿನಿ, ಇಂಟರ್‌ನೆಟ್‌ನ ಚ್ಯಾಟ್‌ಸೈಟ್‌ನ ಮೂಲಕ ತನ್ನಷ್ಟೇ ವಯಸ್ಸಿನ ದೆಹಲಿಯ ಬಾಲಕಿಯನ್ನು ಭೇಟಿ ಮಾಡಿದಳು. ತಂದೆ-ತಾಯಿ ಸಾಫ್ಟ್‌ವೇರ್ ಕಂಪೆನಿಯಲ್ಲಿ ಉದ್ಯೋಗಿಗಳು; ಶಾಲೆಯಿಂದ ಬಂದನಂತರ ಮನೆಯಲ್ಲಿ ಒಂಟಿಯಾಗಿರಲು ಬೇಸರ... ಹೀಗೆ ಪರಿಚಯದ ಮಾತಿನ ವಿನಿಮಯದ ನಂತರ ಸ್ನೇಹ ಬೆಳೆಯಿತು.

ದೆಹಲಿಯ ಹುಡುಗಿಗೂ ತನ್ನಂತೆ ಹಿಂದೂಸ್ತಾನಿ ಸಂಗೀತದಲ್ಲಿ ಆಸಕ್ತಿ, ಟೆನ್ನಿಸ್ ಬಲುಪ್ರಿಯವಾದ ಕ್ರೀಡೆ ಇತ್ಯಾದಿ ಮಾಹಿತಿ ತಿಳಿದ ಬೆಂಗಳೂರು ಬಾಲಕಿಗೆ ಆಕೆಯನ್ನು ಖುದ್ದಾಗಿ ಭೇಟಿ ಮಾಡುವ ಕಾತರ. ಒಂದು ವರ್ಷದ ನಂತರ ಅದಕ್ಕೆ ಕಾಲವೂ ಕೂಡಿಬಂತು. ತಾನು ತಂದೆ-ತಾಯಿಗಳ ಜೊತೆ ಬೆಂಗಳೂರಿಗೆ ಬಂದಿರುವುದಾಗಿಯೂ, ತುರ್ತು ಕೆಲಸವಿರುವುದರಿಂದ ಒಂದೇ ದಿನ ಉಳಿಯುವುದಾಗಿಯೂ ಸಂದೇಶ ನೀಡಿದ ದೆಹಲಿಯ ಬಾಲಕಿ ತಾನಿರುವ ಹೋಟೆಲ್ ಕೊಠಡಿಗೆ ಬರಬೇಕೆಂದು ಬೆಂಗಳೂರಿನ ಹುಡುಗಿಗೆ ಆಹ್ವಾನ ನೀಡಿದಳು. ತಂದೆ-ತಾಯಿ ಕೆಲಸಕ್ಕೆ ತೆರಳಿದ್ದರಿಂದ ಒಂಟಿಯಾಗಿ ಹೋಟೆಲ್‌ಗೆ ಹೋದ ಬೆಂಗಳೂರಿನ ಹುಡುಗಿಗೆ ಆಗಿದ್ದು ಭೀಕರ ಅನುಭವ, ದೆಹಲಿಯ ಬಾಲಕಿಯ ಬದಲು ಆತ ಬೆಂಗಳೂರಿನ 30 ವರ್ಷ ಹರೆಯದ ಅನಾಮಿಕ ವ್ಯಕ್ತಿಯಾಗಿದ್ದ.

ಭಾರತದಲ್ಲಿ ಇಂಟರ್‌ನೆಟ್ ಸಾರ್ವಜನಿಕ ಬಳಕೆಗೆ ಬಂದು ಮೂರು ವರ್ಷಗಳಲ್ಲಿ ಇಂತಹ ಹಲವು ಘಟನೆಗಳು ವರದಿಯಾಗುತ್ತಲೇ ಇವೆ. ಇಂತಹ ದೌರ್ಜನ್ಯಕ್ಕೆ ಒಳಗಾಗುವವರು ಹೆಚ್ಚಾಗಿ ಹದಿಹರೆಯದವರೇ, ಆರಂಭದಲ್ಲಿ ಇ-ಮೇಲ್, ದೈನಿಕಗಳು, ನಿಯತಕಾಲಿಕಗಳು, ಮನರಂಜನೆ ಎಂದು ಆರಂಭವಾದ ಇಂಟರ್‌ನೆಟ್‌ನಲ್ಲಿ ಈಗ ಪ್ರತಿಯೊಂದು ಮಾಹಿತಿಯೂ ಲಭ್ಯವಿದೆ. ಹಾಗೆಯೇ ಹಲವು ಹಾನಿಕಾರಕ ಅಂಶಗಳೂ ನುಸುಳಿದ್ದು, ನಗರದ ಮಧ್ಯಮ ಹಾಗೂ ಮೇಲ್ವರ್ಗದವರ ಬದುಕಿನ ಒಂದು ಭಾಗವೆಂಬಂತೆ ಹಾಸು ಹೊಕ್ಕಾಗಿರುವ ಇಂಟರ್‌ನೆಟ್ ಮಕ್ಕಳು ಯುವಪೀಳಿಗೆಯ ನಡವಳಿಕೆಯ ಮೇಲೂ ಅಗಾಧ ಪರಿಣಾಮ ಬೀರುತ್ತಿದೆ.

ಮೊದಲನೆಯದಾಗಿ ಲೈಂಗಿಕ ಪ್ರಚೋದಕ, ಅಶ್ಲೀಲ, ಹಿಂಸಾತ್ಮಕ ವೆಬ್‌ಸೈಟ್‌ಗಳ ಮಹಾಪೂರ, ಇವುಗಳನ್ನು ಸುಲಭವಾಗಿ ತೆರೆದು ನೋಡಬಹುದು. ಇಂತಹ ಸೈಟ್‌ಗಳ ಹೆಸರನ್ನು ಕೂಡಾ ತಿಳಿದುಕೊಳ್ಳುವ ಅಗತ್ಯವಿಲ್ಲ. ಲೈಂಗಿಕತೆಗೆ ಸಂಬಂಧಿಸಿದ ಶಬ್ದ ಟೈಪ್ ಮಾಡಿದರೆ ಸಾಕು. ಯಾವುದೋ ಅಶ್ಲೀಲ ವೆಬ್‌ಸೈಟ್ ಪ್ರತ್ಯಕ್ಷವಾಗುತ್ತದೆ. ಎರಡನೆಯದಾಗಿ ಅನಾಮಧೇಯ ವ್ಯಕ್ತಿ ಇ-ಮೇಲ್ ಮೂಲಕ ಅಶ್ಲೀಲವಾದ, ಬೈಗುಳಗಳಿಂದ ಕೂಡಿದ ಸಂದೇಶ ಕಳಿಸುವುದು ಜೊತೆಗೆ ಅಶ್ಲೀಲ ಚಿತ್ರ ಕಳಿಸುವುದು.

ತಂದೆ-ತಾಯಿ ಈ ಬಗ್ಗೆ ಗಮನವಿಟ್ಟರೆ ಒಳಿತು. ತಮ್ಮ ಮಕ್ಕಳಿಗೆ ಇಂತಹ ಸಂದೇಶ ಬರುತ್ತಿದೆಯೇ ಎಂಬುದನ್ನು ಆಗಾಗ ವಿಚಾರಿಸುವುದು ಒಳ್ಳೆಯದು. ಅವರು ಇಂಟರ್‌ನೆಟ್‌ನಲ್ಲಿ ಭೇಟಿ ಮಾಡುವ ವ್ಯಕ್ತಿಗಳ ಬಗ್ಗೆ ನಿಗಾವಹಿಸಬೇಕು. ಚಿಕ್ಕ ಮಕ್ಕಳಾದರೆ ಜೊತೆಯಲ್ಲೇ ಇಂಟರ್‌ನೆಟ್ ಬಳಸಬೇಕು. ದೊಡ್ಡವರಾದರೆ ಯಾವ ಸೈಟ್ ನೋಡಬೇಕು ಎಂಬುದನ್ನು ತಿಳಿಸಿ ಹೇಳಿದರೆ ಅನುಕೂಲ. ಕೆಲವು ಸೈಟ್‌ಗಳನ್ನು ತಡೆಹಿಡಿಯುವ ತಂತ್ರಜ್ಞಾನವಿರುವ ಸಾಫ್ಟ್‌ವೇರ್ ಬಳಸಬಹುದು.

ಇನ್ನು ಕುತೂಹಲಕ್ಕೋ ಅಥವಾ ಹಲವು ಮಂದಿಯ ಸ್ನೇಹ ಮಾಡಿ ಕೊಳ್ಳುವುದಕ್ಕೋ ಮಕ್ಕಳು ತಮ್ಮ ಇ-ಮೇಲ್ ವಿಳಾಸವನ್ನು ಶಾಲಾ ಸಹಪಾಠಿಗಳಿಗೆ ಕೊಟ್ಟುಬಿಡುತ್ತಾರೆ. ಆದರೆ ಆ ಸಹಪಾಠಿಯ ಹಿರಿಯ ಸಹೋದರರಿಗೆ ಈ ವಿಳಾಸ ದೊರಕಿ ಅನಾಹುತವಾಗುವ ಸಂಭವ ಅಧಿಕ. ಇದಲ್ಲದೇ ಸಂದೇಶ ಕಳಿಸುವಾಗ ಓದುತ್ತಿರುವ ಶಾಲೆಯ ಹೆಸರು, ಮನೆಯ ದೂರವಾಣಿ ಸಂಖ್ಯೆ, ಕೌಟುಂಬಿಕ ಮಾಹಿತಿ ನೀಡದಂತೆ ತಿಳಿಹೇಳಬೇಕು.

ಸಾರ್ವಜನಿಕ ಇಂಟರ್‌ನೆಟ್ ಕೇಂದ್ರಗಳಲ್ಲಿ ಇ-ಮೇಲ್ ಬಳಸುವಾಗ ಪಾಸ್‌ವರ್ಡ್ ಇತರರಿಗೆ ತಿಳಿಯದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಇ-ಮೇಲ್ ಸೇವೆ ಒದಗಿಸುವ ಸಂಸ್ಥೆಗಳ ಹೆಸರಲ್ಲಿ ದೂರವಾಣಿ ಮಾಡಿ ಪಾಸ್‌ವರ್ಡ್ ಕೇಳಿರುವ ಘಟನೆಗಳೂ ವರದಿಯಾಗಿವೆ. ಇಂತಹ ಕರೆಗಳು ಬಂದರೆ ಪಾಸ್‌ವರ್ಡ್ ಹೇಳಬೇಡಿ. ಏಕೆಂದರೆ ಈ ಸಂಸ್ಥೆಗಳಿಗೆ ನಿಮ್ಮ ಪಾಸ್‌ವರ್ಡ್ ಅಗತ್ಯವಿಲ್ಲ ಎಂಬುದನ್ನು ನೆನಪಿಡಿ.

ಸಾರ್ವಜನಿಕ ಇಂಟರ್‌ನೆಟ್ ಕೇಂದ್ರಗಳನ್ನು ನಿರ್ವಹಿಸುವವರು ಮಕ್ಕಳ ಮೇಲೆ ನಿಗಾ ಇಡುವುದರಿಂದಲೂ ಅವರು ಅಶ್ಲೀಲ ಸೈಟ್‌ಗಳನ್ನು ನೋಡದಂತೆ ತಡೆಯಬಹುದು. ಸುರಕ್ಷಿತ ವೆಬ್‌ಗಳ ಬಗ್ಗೆ ಮಾಹಿತಿಯನ್ನು www.getnetwise.org ಮತ್ತು www.missingkids.org ನಿಂದ ಪಡೆಯಬಹುದು.

**ಸುಧಾ ಗೋಪಾಲಕೃಷ್ಣ**

---

### ನಿಮ್ಮ ಜ್ಞಾಪನ ದಲ್ಲಿರಲಿ

ಪ್ರಥಮ ಮತ್ಸ್ಯಾಲಯ ಇಂಗ್ಲೆಂಡಿನಲ್ಲಿ ರೀಜೆಂಟ್ ಪೊಂಕಾ ಎಂಬ ಮತ್ಸ್ಯಾಲಯವು ಪ್ರಪಂಚದ ಮೊದಲ ಮೀನು ಸಂಗ್ರಹಾಲಯವಾಗಿದೆ.

ಇದೇ ರೀತಿ ಲಂಡನ್ನಿನಲ್ಲಿನ ಮೃಗಾಲಯವೇ ವಿಶ್ವದ ಮೊದಲ ಪ್ರಾಣಿ ಸಂಗ್ರಹಾಲಯವಾಗಿದೆ.

ಮೊತ್ತ ಮೊದಲ ಸಸ್ಯಪ್ರಾಣಿ ಸಸ್ಯ ಪ್ರಭೇದದಿಂದ ಪ್ರಾಣಿ ವರ್ಗಕ್ಕೆ ಮಾರ್ಪಟ್ಟ ಮೊದಲ ಜೀವಿಯು ಸಮುದ್ರದಲ್ಲಿ ಕಂಡುಬರುವ ಸಮುದ್ರ ತಾವರೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

### ವಿಚಿತ್ರ ಆದರೂ ನಿಜ

ಯುವಕ ಪಾಡಿವಾರನ್ ಮಿಲ್ಲರ್ ಎಂಬಾತನಿಗೆ 42 ವರ್ಷವಾದರೂ ಓಂಟಾರಿಯೋ ದೇಶದ ಈತನಿಗೆ ಮೊದಲ ಬಾರಿ ಹುಟ್ಟಿದ ಹಲ್ಲುಗಳು(ಹಾಲು ಹಲ್ಲುಗಳು) ಇನ್ನೂ ಬಿದ್ದಿಲ್ಲವಂತೆ

ಸಂಗ್ರಹ : ಮಿಥುನ್ ಗೋಪಾಲ್, ಯುವಕ ಪಾಡಿ

---

ಹತ್ತು ಗಂಡಸರು ಒಟ್ಟಾಗಿರುವರು, ಆದರೆ ಎರಡು ಹೆಂಗಸರು ಒಟ್ಟಾಗಿರರು

# ಪಂಚಲಿಂಗ ದರ್ಶನ

ಜೂನ್ 25ನೇ ತಾರೀಖು ಭಾನುವಾರ ಮುಂಜಾನೆ- 'ತಲಕಾಡಿಗೆ' ಎಂಬ ಬ್ಯಾನರ್ ಹೊತ್ತ ಲಕ್ಸುರಿ ಬಸ್ಸೊಂದು ಬೆಂಗಳೂರು ನಗರದ ಒಂದು ಪ್ರದಕ್ಷಿಣೆ ಹೊಡೆಯಿತು. ಮುಕ್ಕಾಲು ಗಂಟೆಯೊಳಗೆ 50 ಸೀಟರ್ ಬಸ್ಸು ಭರ್ತಿಯಾಯಿತು. ಮುಕ್ಕಾಲು ಪಾಲು ಯುವಕ ಯುವತಿಯರೇ ತುಂಬಿದ್ದ ಬಸ್ಸು ವೇಗವಾಗಿ ತಲಕಾಡಿನ ಕಡೆ ಸಾಗಿತು. ಇದು 'ಕೊಡಗು ಗೌಡ ಸಮಾಜ ಯೂತ್ ಅಸೋಸಿಯೇಷನ್(KGSYA) ವತಿಯಿಂದ ಹಮ್ಮಿಕೊಂಡ 4ನೇ ಯಶಸ್ವೀ Pleasure Picnic. ಬೆಂಗಳೂರಿನ ನಿವಾಸಿಯಾದ ಶ್ರೀಮಾನ್ ಬೈತಡ್ಕ ಜೋಯಪ್ಪ, ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಇವರು ಕಳೆದ ಹಲವಾರು ಬಾರಿಯಂತೆ ಈ ಸಲವೂ ಈ ಬಸ್ಸನ್ನು ಅತ್ಯಂತ ಕಡಿಮೆ ಬಾಡಿಗೆಗೆ ಗೊತ್ತುಮಾಡಿ ಕೊಟ್ಟಿದ್ದಲ್ಲದೆ, ತಮ್ಮ ಇಲಾಖೆಯ ವತಿಯಿಂದ ಒಂದು ಅನುಮತಿ ಪತ್ರವನ್ನೂ ಕೊಟ್ಟು ನಮ್ಮನ್ನು ಹಾರೈಸಿ ಕಳುಹಿಸಿದರು.

ಹೆದ್ದಾರಿಯ ಪಕ್ಕದಲ್ಲಿ ವಿಶಾಲವಾದ ಮರಗಳ ಕೆಳಗೆ ಬಸ್ ನಿಂತಿತು. ಮೊದಲೇ ಸಿದ್ಧವಿದ್ದ ಬಿಸಿಬಿಸಿ ಚೌಚೌಬಾತಂ ಸರಬರಾಜಾಯಿತು. ನಸುಕಿನಲ್ಲೇ ಪ್ರಯಾಣ ಬೆಳೆಸಿದ್ದ ನಮಗೆ ಉಪಹಾರವಾದ ನಂತರ ಹೊಸ ಹುರುಪು ತುಂಬಿತು. ನಾವೆಲ್ಲ ಮತ್ತೆ ಬಸ್ ಹತ್ತಿ ಕುಳಿತೆವು. ಮನೆಗಳಿಂದ ತಂದಿದ್ದ ತಿಂಡಿ, Cake ಮುಂತಾದ ತಿನಿಸುಗಳ distribution ನಡೆಯಿತು. ಹಾಡುತ್ತಾ ಕುಣಿಯುತ್ತಾ ತಲಕಾಡು ತಲುಪಿತು.

ಕಾವೇರಿ ನದಿಯ ಬೆಡಗಿನಿಂದಲೂ, ರಮಣೀಯತೆಯಿಂದ ಕಂಗೊಳಿಸುವ ತಲಕಾಡಿನ ಸುತ್ತಲೂ ಅಪಾರ ಮರಳ ರಾಶಿಯ ನಡುವೆ ಅರ್ಧ ಮುಚ್ಚಿಹೋದಂತೆ ತೋರುವ ಸುಂದರ ದೇವಾಲಯಗಳಿವೆ.

**"ತಲಕಾಡು ಮರಳಾಗಿ, ಮಾಲಿಂಗ ಮಡುವಾಗಿ;**
**ಮೈಸೂರು ದೊರೆಗಳಿಗೆ ಮಕ್ಕಳಾಗದೆ ಹೋಗಲಿ!"**

ಹೀಗೆಂದು ನಾನ್ನೂರು ವರ್ಷಗಳ ಹಿಂದೆ ಶ್ರೀರಂಗಪಟ್ಟಣದ ದೊರೆಯಾದ ಶ್ರೀ ರಂಗರಾಯನ ಮಡದಿ ಅಲಮೇಲಮ್ಮ ಮೈಸೂರು ದೊರೆಗಳಿಗೆ ಶಾಪ ಕೊಟ್ಟಳಂತೆ. ನವರಾತ್ರಿಕಾಲದಲ್ಲಿ ಈಗಲೂ ಮೈಸೂರು ಅರಮನೆಯಲ್ಲಿ ಅಲಮೇಲು ದೇವತೆಯ ಪೂಜೆ ತಪ್ಪದೆ ನಡೆಯುತ್ತದೆ. ಪುರಾತನ ಕಾಲದಲ್ಲಿ "ದಲವನಪುರ" ಎಂಬ ಊರಿಗೆ ತಲಕಾಡು ಎಂಬ ಹೆಸರು ಬರಲು ಕಾರಣವೇನೆಂಬುದರ ಹಿಂದೆಯೂ ಒಂದು ಸುಂದರ ಕಥೆಯಿದೆ.

ಇಲ್ಲಿನ ಗಜಾರಣ್ಯ ಕ್ಷೇತ್ರದಲ್ಲಿ ಈಗಲೂ ಹಿಂಡು ಹಿಂಡಾಗಿ ಆನೆಗಳಿವೆ. ಹಿಂದೊಂದು ದಿನ ಅಲ್ಲಿನ ಆನೆಗಳು ಗೋಕರ್ಣ ಸರೋವರದಲ್ಲಿ ಮಿಂದು, ಸೊಂಡಿಲಲ್ಲಿ ನೀರನ್ನು ತುಂಬಿಸಿಕೊಂಡು, ಕಮಲದ ಹೂಗಳನ್ನು ಕಚ್ಚಿ, ಒಂದು ಬೂರುಗದ ಮರದ ಬುಡದಲ್ಲಿದ್ದ ಪೊದೆಯ ಮೇಲೆ ನೀರು ಚಿಮುಕಿಸಿ, ಹೂವನ್ನಿಟ್ಟು ಹೋಗುತ್ತಿದ್ದವು.

ಈ ದೃಶ್ಯವನ್ನು ತಲ ಮತ್ತು ಕಾಡ ಎಂಬ ಇಬ್ಬರು ಬೇಡರು ನಿತ್ಯವೂ ನೋಡುತ್ತಿದ್ದರು. ಆಶ್ಚರ್ಯಗೊಂಡ ಅವರು ಅದೇನು ಎಂಬುದನ್ನು ಪರೀಕ್ಷಿಸಬೇಕೆಂದು ಎರಡು ಕೊಡಲಿಗಳನ್ನು ತೆಗೆದುಕೊಂಡು ಅತ್ತ ಬಂದರು. ಪೊದೆಗಳನ್ನು ಕಡಿದರು. ಕಡಿಯುವಾಗ ಅವರ ಕೊಡಲಿ ಯಾವುದೋ ವಸ್ತುವಿಗೆ ತಾಕಿ ಅಲ್ಲಿಂದ ರಕ್ತ ಚಿಮ್ಮಿತು. ಅದೇನೆಂದು ನೋಡುವಲ್ಲಿ ಅದೊಂದು ಶಿವಲಿಂಗ. ಅದರ ನೆತ್ತಿಯಿಂದ ರಕ್ತ ಹರಿಯುತ್ತಿದೆ. ಇದನ್ನು ನೋಡಿದ ಅವರು ಹೆದರಿ ನಡುಗಿದರು. ಆಗ ಅಶರೀರವಾಣಿಯಾಯಿತು. "ಎಲೈ ಕಿರಾತಕರೇ, ನಿಮ್ಮೆಲ್ಲರಿಗೂ ಒಳ್ಳೆಯದನ್ನು ಮಾಡುವುದಕ್ಕಾಗಿಯೇ ನಾನಿಲ್ಲಿ ಕಾಣಿಸಿಕೊಂಡಿದ್ದೇನೆ. ಈ ಬೂರುಗದ ಮರದ ಎಲೆಯನ್ನೂ ಹಣ್ಣನ್ನು ಅರೆದು ಗಾಯವಾದ ಜಾಗಕ್ಕೆ ಬಳಿಯಿರಿ. ಸುರಿಯುವ ರಕ್ತ ನಿಲ್ಲುತ್ತದೆ. ಅಷ್ಟೇ ಅಲ್ಲ ರಕ್ತ ಹಾಲಾಗುತ್ತದೆ." ದೇವ ವಾಣಿಗೆ ಬೇಡರು ತಲೆಬಾಗಿ, ಅದರಂತೆ ನಡೆದು ಹಾಲನ್ನು ಸೇವಿಸಿದಾಗ ಅವರಿಬ್ಬರಿಗೆ ಗಣಪದವಿ ದೊರೆಯಿತು. ಆ ತಲ-ಕಾಡ ಎಂಬ ಬೇಡರಿಗೆ ಅಲ್ಲಿ ಮೊದಲ ಬಾರಿಗೆ ಮೋಕ್ಷ ಪ್ರಾಪ್ತವಾದ್ದರಿಂದ ಆ ಸ್ಥಳ 'ತಲಕಾಡು' ಎನ್ನುವ ಹೆಸರನ್ನು ಹೊತ್ತಿದೆ. ತನ್ನ ಗಾಯಕ್ಕೆ ಸ್ವಾಮಿಯು ತಾನೇ ವೈಧ್ಯವನ್ನು ಸೂಚಿಸಿದನಲ್ಲವೇ? ಆದುದರಿಂದಲೇ ಅದಕ್ಕೆ ವೈದ್ಯನಾಥ ಅಥವಾ ವೈದ್ಯೇಶ್ವರನೆಂದು ಹೆಸರಾಯಿತು.

ನಾವೆಲ್ಲರು ಕಾವೇರಿ ನದಿಯಲ್ಲಿ ಈಜಾಡಿ ನೀರಿನಲ್ಲಿ ಆಟವಾಡಿ ಆಯಾಸ ಪರಿಹಾರ ಮಾಡಿಕೊಂಡೆವು. ಕೆಲವರು ತೆಪ್ಪದಲ್ಲಿ ಕುಳಿತು ಆನಂದಪಟ್ಟರು. ಇದಾದನಂತರ ಎಲ್ಲರೂ ಸೇರಿ ಗುಂಪು ಗುಂಪಾಗಿ ಮರಳ ರಾಶಿಯಲ್ಲಿ ನಡೆಯುತ್ತಾ ಹೋಗಿ ಅಲ್ಲಿನ ಕೀರ್ತಿನಾರಾಯಣ ದೇವಾಲಯ, ಪಾತಾಳದಲ್ಲಿರುವಂತೆ ತೋರುವ ಪಾತಾಳೇಶ್ವರ ದೇವಾಲಯ, ಮರಳಿನಲ್ಲಿ ಸಂಪೂರ್ಣ ಮುಳುಗಿ ಹೋದಂತೆ ತೋರುವ ಮರುಳೇಶ್ವರ ದೇವಾಲಯಗಳ ದರ್ಶನ ಮಾಡಿದೆವು. ಅಪಾರವಾದ ಮರಳ ರಾಶಿಯಲ್ಲಿ ನಡೆಯುವುದು ಪ್ರಯಾಸಕರ ಅನುಭವ.

ಪವಿತ್ರವಾದ ತಲಕಾಡಿನಲ್ಲಿ ಪಂಚಲಿಂಗ ಸ್ವರೂಪಿಯಾದ ಈಶ್ವರನು ನೆಲೆಸಿದ್ದಾನೆ.

ಗೋಕರ್ಣದಲ್ಲಿ ಮಿಂದು ವೈದ್ಯೇಶ್ವರನನ್ನು ಬೂರುಗದ ಹಣ್ಣು ಮತ್ತು ಎಲೆಗಳಿಂದ ಅರ್ಚಿಸಿ,

ಉತ್ತರವಾಹಿನಿಯಲ್ಲಿ ಮಿಂದು ಅರ್ಕೇಶ್ವರನನ್ನು ಪೂಜಿಸಿ

ಪೂರ್ವವಾಹಿನಿಯಲ್ಲಿ ಮಿಂದು ಪಾತಾಳೇಶ್ವರನನ್ನು ಪೂಜಿಸಿ,

ಪಶ್ಚಿಮವಾಹಿನಿಯಲ್ಲಿ ಮಿಂದು ಮಲ್ಲಿಕಾರ್ಜುನೇಶ್ವರನ ಪೂಜೆಯನ್ನೂ ಹಾಗೂ ದಕ್ಷಿಣವಾಹಿನಿಯಲ್ಲಿ ಮಿಂದು ಸೈಕೇಶ್ವರನ ಪೂಜೆಯನ್ನು ಸಲ್ಲಿಸುವುದು ವಾಡಿಕೆ.

ಈ ಪುರಾಣೇತಿಹಾಸ ಪ್ರಸಿದ್ಧ ನೆಲೆಯಲ್ಲಿ ಅಪೂರ್ವವಾಗಿ ಜರುಗುವ ಪಂಚಲಿಂಗ ದರ್ಶನದ ಉತ್ಸವಕ್ಕೆ ಲಕ್ಷಾಂತರ ಜನ ಬಂದು ಕಾವೇರಿ ಹಾಗೂ ಗೋಕರ್ಣ ತೀರ್ಥಗಳ ಸ್ನಾನ ಮತ್ತು ಪಂಚಲಿಂಗ ದರ್ಶನದಿಂದ ಪುನೀತರಾಗುತ್ತಾರೆ.

---

**ಕುಡಿದವನಿಗೆ ಮನೆಯೂ ಒಂದೆ, ಸ್ಮಶಾನವೂ ಒಂದೇ**

ದೇವದರ್ಶನವಾದ ನಂತರ ನಾವೆಲ್ಲರೂ ಮತ್ತೆ ಒಂದೆಡೆ ಕುಳಿತು ವಿಶ್ರಾಂತಿ ಪಡೆಯುತ್ತಾ ಹರಟೆ ಹೊಡೆಯಲಾರಂಬಿಸಿದೆವು. ಮಹಿಳೆಯರೆಲ್ಲಾ ಸೇರಿ ಎಳೆಕೂಸುಗಳಿಗೆ babyfeed ತಿನ್ನಿಸಲಾರಂಬಿಸಿದರು. ಅಂಕಲ್‌ಗಳ ಕಿಸೆಯಿಂದ Ready-Mix ಹೊರಬಂದಿತು. ಅಷ್ಟರಲ್ಲಿ ಅಡಿಗೆಯವರು ಬಿಸಿಬಿಸಿ ಚಿಕನ್ ಬಿರಿಯಾನಿ ತಯಾರು ಮಾಡಿಟ್ಟಿದ್ದರು. ಹೊಟ್ಟೆ ತುಂಬ ಊಟವಾದ ನಂತರ ಎಲ್ಲರೂ ಅಲ್ಲೇ ಹುಲ್ಲುಗಾವಲಿನ ಮೇಲೆ ಮೈಚೆಲ್ಲಿ ಸುತ್ತುವರೆದು ಕುಳಿತೆವು. ಒಂದು ಗುಂಪು ಹುಡುಗರು cards ಆಡುತ್ತಾ ಕುಳಿತರು. ಟೇಪ್‌ರಿಕಾರ್ಡ್‌ರ್‌ನಲ್ಲಿ ಕೊಡಗಿನ ವಾಲಗದ ನಾದ ತಲಕಾಡಿನ ಪ್ರತಿ ಮೂಲೆಯಲ್ಲೂ ಝೇಂಕರಿಸಲಾರಂಭಿಸಿದಾಗ ಉನ್ಮಾದದಿಂದ ಯುವಕರೆಲ್ಲಾ ಕುಣಿಯಲಾರಂಬಿಸಿದರು. ಬರಬರುತ್ತಾ ಕುಣಿತದ ತೀವ್ರತೆ ಹೆಚ್ಚಿತು. ಒಬ್ಬ ಹಾವಾದರೆ, ಮತ್ತೊಬ್ಬ ಹಾವಾಡಿಗನಾದ. ಮತ್ತಿಬ್ಬರು ಮುಖ ಸಿಂಡರಿಸಿಕೊಂಡು ಜಗಳವಾಡುವಂತೆ ಒಬ್ಬರ ಮೇಲೊಬ್ಬರು ಬೀಳುತ್ತಾ ಕುಣಿಯಲಾರಂಬಿಸಿದರು. ಇದೆಲ್ಲ ಅಲ್ಲಿ ಸುತ್ತುವರೆದ ಜನರಿಗೆ ಸೋಜಿಗವೆನಿಸತೇನೊ. ಚಡ್ಡಿ ಬನೀನ್ ದರಿಸಿದ ಲೋಕಲ್ ಪಡ್ಡೆ ಹುಡುಗರಿಗೆ ಸ್ಫೂರ್ತಿ ಬಂದು ಅವರೂ ನಮ್ಮೊಡಗೂಡಿ ಅಣ್ಣಾಮ್ಮ ಡ್ಯಾನ್ಸ್ ಆಡತೊಡಗಿದರು. ನಮ್ಮೊಡನೆ ಬಂದಿದ್ದ ಡ್ರೈವರ್ ಹುಡುಗ 'ಸಾರ್... ನಾನೂ ಗೌಡಾನೇ... ಆದ್ರೆ ನಿಮ್ ಭಾಷೆ ಏನೋ ಒಂತರಾ change ಐತಲ್ಲಾ" ಅಂತ ಕೇಳಿಯೇ ಬಿಟ್ಟ. "ನಾವೆಲ್ಲಾ ಕೊಡಗಿನ ಕಡೆ ಗೌಡ್ರು, ಅರೆಭಾಷೆ ಗೌಡ್ರು" ಎಂದಷ್ಟೇ ಹೇಳಿ ಸುಮ್ಮನಾದೆ.

ನಮ್ಮ ಮೋಜಿನಾಟವನ್ನು ಆನಂದಿಸುತ್ತಾ ಅಡಿಗೆಯವರು ಕಾಫಿ, ಟೀ ಹಾಗೂ ಬಾಳೆಕಾಯಿ ಬಜ್ಜಿ ವಿತರಣೆ ಮಾಡಿದರು. ಹೀಗೆ ಹಲವಾರು ಆಟೋಟಗಳು ನಡೆದ ಮೇಲೆ ನಾವೆಲ್ಲರೂ ಮತ್ತೆ ಬಸ್ಸನ್ನೇರಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದೆವು. ತಲಕಾಡಿನ ಪಿಕ್‌ನಿಕ್ ನಮ್ಮೆಲ್ಲರೀಗೂ ಒಂದು ಅಪರೂಪ ಅನುಭವ.

ರಾಶಿ ರಾಶಿ ಮರಳು ಕಾಣಸಿಗುವ ಮಿನಿರಾಜಾಸ್ಥಾನ ಕರ್ನಾಟಕದ ತಲಕಾಡು ಅಲಮೇಲಮ್ಮನ ಶಾಪ ಎಷ್ಟರ ಮಟ್ಟಿಗೆ ಸತ್ಯವೋ, ಯಾರು ಬಲ್ಲರು?! ಆದರೆ ಇಂದಿಗೂ ಇಲ್ಲಿನ ಭವ್ಯವಾದ ದೇವಾಲಯಗಳು ಕಾಲಕ್ರಮೇಣ ಸಂಪೂರ್ಣ ಮರಳಿನಲ್ಲಿ ಮುಚ್ಚಿ ಹೋಗುವ ಸಂಗತಿ ಆಶ್ಚರ್ಯಕರವೇ ಸರಿ. ರಾಜ್ಯ ಸರ್ಕಾರದ ವತಿಯಿಂದ ಪ್ರತಿ 5 ವರ್ಷಗಳಿಗೊಮ್ಮೆ ಮರಳನ್ನು ಸರಿಸಿ, ಮುಳುಗಿದ ದೇವಾಲಯಗಳ ಪುನರುಜ್ಜೀವನ ಗೊಳಿಸಲಾಗುತ್ತದೆ.

ತಲಕಾಡು ನಾವು ನೀವೆಲ್ಲರೂ ಒಂದು ಬಾರಿ ನೋಡಲೇ ಬೇಕಾದ ಸುಂದರ ಸ್ಥಳ.

**– ಎಡಿಕೇರಿ ಸುದರ್ಶನ್, ಬೆಂಗಳೂರು**

# ಹಸೆ ಮಣೆ (ಶೀರ್ಷಿಕೆ)

ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಬಾಂದವರಿಗೆ ಹಸೆಮಣೆ ಎಂಬುದು ಒಂದು ಪವಿತ್ರವಾದ ಮೆಟ್ಟಿಲು ಎಂದು ಹೇಳಬಹುದು. ಮಾನವ ಹುಟ್ಟಿನಿಂದ ಸಾಯುವವರೆಗೆ ಬ್ರಹ್ಮಚರ‍್ಯ, ಗೃಹಸ್ಥ, ವಾನ ಪ್ರಸ್ಥ, ಸನ್ಯಾಸ ಎಂಬ ನಾಲ್ಕು ಹಂತಗಳಿವೆ. ಹುಟ್ಟಿದ ಮಗು ಬೆಳೆದು ಪ್ರೌಢಾವಸ್ಥೆಗೆ ಬಂದು ಮದುವೆ ಎಂಬ ಮೆಟ್ಟಿಲು ಏರುವವರೆಗೆ ಬ್ರಹ್ಮಚರ‍್ಯ. ಮದುವೆ ಆದಮೇಲೆ ಗೃಹಸ್ಥ ಎಂಬ ಸ್ಥಾನವನ್ನು ಸ್ವೀಕರಿಸುತ್ತಾನೆ. ಒಬ್ಬ ವ್ಯಕ್ತಿ ಹಸೆಮಣೆ ಏರುವುದು ಎಂದರೆ ಮದುವೆಯಾಗುವನು ಎಂದು ಅರ್ಥ. ಮದುವೆ ಎಂಬ ಪವಿತ್ರ ಬಂಧನದಲ್ಲಿ ಹಸೆ ಎಂಬುವುದು ಮುಖ್ಯವಾದ ಶಾಸ್ತ್ರ.

ಮದುವೆ ಅಥವಾ ವಿವಾಹ ಎಂಬ ಬಂಧನದಲ್ಲಿ ಗಂಡು ಹೆಣ್ಣು ಕೆಲವು ಶಾಸ್ತ್ರ ಸಂಪ್ರದಾಯಗಳ ಮೂಲಕ ಸತಿಪತಿಗಳಾಗುತ್ತಾರೆ. ಮದುವೆಯಲ್ಲಿ ಮಾಡುವ ಸಂಪ್ರದಾಯಗಳನ್ನು ಹಾಡಿನ ಮೂಲಕ ವ್ಯಕ್ತ ಪಡಿಸುತ್ತಾರೆ ಇಂತಹ ಹಾಡಿನ ಪುಸ್ತಕವೇ ಹಸೆಮಣೆ.

ಶ್ರೀಮತಿ ಜಾನಕಿ ಬೆಳ್ಯಪ್ಪನವರು ಹೊರತಂದಿರುವ ಪುಸ್ತಕಕ್ಕೆ ಹಸೆಮಣೆ ಎಂದು ಹೆಸರಿಟ್ಟು, ಬೆಳಗಿಸಿರುವುದು ನಿಜವಾಗಿಯೂ ಗೌಡ ಬಾಂಧವರಿಗೊಂದು ಹೆಮ್ಮೆಯ ವಿಷಯ.

ಎಲ್ಲಕ್ಕಿಂತ ಹೆಚ್ಚಾಗಿ ಆಕರ್ಷಕವಾಗಿ ತೋರುವ ಪುಸ್ತಕದ ಹೆಸರು ಜೊತೆಗೆ ಕುಲದೇವರ ಫೋಟೊ ಹಾಗೂ ಸ್ತುತಿ. ಶೃಂಗೇರಿ ಶಾರದಾಂಬೆಯ ಹಾಗೂ ಶೃಂಗೇರಿ ಗುರುಗಳ ಚಿತ್ರ ಕೊಟ್ಟಿರುವುದು ಗೌಡರಿಗೆ ಇರುವಂತಹ ಹಿಂದಿನ ಸಂಪ್ರದಾಯವನ್ನು ಎತ್ತಿ ತೋರಿಸುತ್ತದೆ.

ಇಂದಿನ ಅಧುನಿಕ ಯುಗದಲ್ಲಿ ಗೌಡ ಬಾಂದವರಿಗೊಂದು ಮದುವೆ ಎಂದರೆ ಒಂದು ಮಾರುಕಟ್ಟೆಯಾಗಿರುವಂತೆ ತೋರುತ್ತದೆ. ಏಕೆಂದರೆ ಜನ್ಮ ಕೊಟ್ಟ ತಂದೆ ತಾಯಂದಿರು ಮಕ್ಕಳ ಭವಿಷ್ಯವನ್ನು ಆಲೋಚಿಸದೇ ಬೀದಿ ಪಾಲು ಮಾಡುವವರಿದ್ದರೆ ಇಂತವುಗಳು ದೂರವಾಗಿ ಇನ್ನು ಮುಂದೆಯಾದರು ಶಾಸ್ತ್ರ ಸಂಪ್ರದಾಯಕಗಳ ಮೂಲಕವೇ ಸತಿ ಪತಿಗಳಾಗಿ ಒಂದುಗೂಡಿಸುವುದು ಮಾತಾಪಿತರ ಕರ್ತವ್ಯವೆಂದೇ ಹೇಳಬೇಕು.

ಶ್ರೀಮತಿ ಜಾನಕಿ ಬೆಳ್ಯಪ್ಪನವರ ಇಂಥ ಭಗೀರಥ ಯತ್ನ ಗೌಡ ಬಾಂದವರಿಗೆ ಒಂದು ಹೆಮ್ಮೆಯ ಕೊಡುಗೆಯಾಗಿದೆ.

ಇವರ ಈ ಪ್ರಯತ್ನಕ್ಕೆ ಪತಿ ಬೆಳ್ಯಪ್ಪ, ಮಕ್ಕಳು ನಂಜಪ್ಪ ಪ್ರಿಸಿಲ್ಲಾ ದಂಪತಿಗಳು ಹಾಗೂ ದಿನೇಶ ಇವರ ಸಹಕಾರ ನಿಜವಾಗಿಯೂ ಒಂದು ಗೃಹ ವಲಯದಲ್ಲಿರುವ ಒಗ್ಗಟನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ಶ್ರೀ ಬೈತಡ್ಕ ಮೊಣಪ್ಪ ಮತ್ತು ದೇವಮ್ಮ ದಂಪತಿಯವರ ಸಹಕಾರವೂ ಲೇಖಕಿಗೊಂದು ದಾರಿ ದೀಪವಾಗಿದ್ದು ಸರಿಯಷ್ಟೆ. ಏಕೆಂದರೆ ಕೊಡುವಾತನಿಗೆ ದರಿದ್ರ ವೆತ್ತಣದು, ಕೊಡುಗೈ ಇಲ್ಲಿ ಎಂದು ಬಾರದು" ಎಂಬ ಗಾದೆಯಂತೆ ಯಾರು ಯಾರಿಗೆ ಕಷ್ಟ ಕಾಲದಲ್ಲಿ ಸಹಾಯ ಮಾಡುತ್ತಾರೆಯೋ ಅಂತವರಿಗೆ ಯಾವಾಗಲು ದರಿದ್ರವೆಂಬುದು ಬಾರದು.

ಮನುಷ್ಯನಿಗೆ ಸಕಲ ಸಂಪತ್ತಿದ್ದರೆ, ಅದನ್ನು ಪೀಳಿಗೆಗೆ ಕ್ರೋಢಿಕರಿಸದೇ ಜನರ ಇಂತಹ ಸಾಹಸ ಕಾರ್ಯಗಳಿಗೆ ಸಹಕಾರವಿತ್ತು ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಬೆಳಕಿಗೆ ತಂದಂತಾಗುತ್ತದೆ.

**20ನೇ ಪುಟಕ್ಕೆ**




**✦ ಕೌಂಡಿನ್ಯ : ಧಾರವಾಹಿ -36**

ಅದು ಎಡತೊರೆಯ ಬಂಗಲೆ

ಅಲ್ಲಿ ಈಗ ಕೆಲಸಗಾರರೆಲ್ಲಾ ತೂಕಡಿಸುತ್ತಾ, ಕೆಲವರು ಕುಳಿತಿದ್ದರೆ ಇನ್ನು ಕೆಲವರು ಗೋಡೆಗೆ ಒರಗಿ ಕೊಂಡಿದ್ದಾರೆ.

ಪ್ರಸನ್ನನ ಬೆಡ್‌ರೂಮಿನಲ್ಲಿ...!

ವೀರಭದ್ರ ಮಂಚದ ಮೇಲೆ ಕಾಲನ್ನು ಇರಿಸಿಕೊಂಡು ಪ್ರಸನ್ನ ಅನುಗಾಡದಂತೆ ಅಡ್ಡಲಾಗಿ ನಿಂತು ಕೊಂಡಿದ್ದಾನೆ.

ವೀರಭದ್ರ ವಿವರಣೆ ನೀಡುತ್ತಿದ್ದಾನೆ.

ಆಗ ರಾತ್ರಿ ಹನ್ನೆರಡು ಗಂಟೆ !

ವೀರಭದ್ರ "ಕೋಟ್ಯಾಂತರ ರೂಪಾಯಿ ಮೌಲ್ಯದ ನಿಧಿಯನ್ನು ಕಂಡು ನಾನು ಅಂದು ಮನಸ್ಸನ್ನು ಕೆಡಿಸಿಕೊಂಡೆ. ಇಲ್ಲದೆ ಇದ್ದಿದ್ದರೆ ನಿನಗೆ ಎಡತೊರೆ ಮನೆತನದ ಯಜಮಾನಿಕೆ ಎಲ್ಲಿ ಸಿಗುತ್ತಿತ್ತು? ನಿನಗೆ ಎಂದೂ ಗತಿ ಕಾಣಿಸುತ್ತಿದ್ದೆ. ಈಗ ಆ ಕೆಲಸವನ್ನು ಮಾಡಲು ಬಂದಿದ್ದೇನೆ"

ಪ್ರಸನ್ನನಿಗೆ ಭಯವಾಗುತ್ತಿದೆ. ಅವನು "ಹೇಗಿದ್ದರೂ ಸಹ ನೀನು ನನ್ನನ್ನು ಸಾಯಿಸುತ್ತೀಯ, ನಿನಗೆ ತಿಳಿಯದೆ ಇರುವ ರಹಸ್ಯವೊಂದನ್ನು ನಾನು ಹೇಳುತ್ತೇನೆ."

ವೀರಭದ್ರ ಕುತೂಹಲದಿಂದ "ಏನದು?"

ಪ್ರಸನ್ನ "ನೀನು ಏನು ಹೇಳಿದೆ? ಅಕ್ಕ, ಬಾವ, ಮತ್ತು ಲಿಂಗಯ್ಯ ಅಣ್ಣನನ್ನು ನಾನು ಸಾಯಿಸಿದೆ ಅಂತ ಅಲ್ಲವೆ?"

"ಹೌದು"

"ಆದರೆ ನಾನು ಯಾರನ್ನು ಸಹ ಸಾಯಿಸಿಲ್ಲ, ನಂಬಿದರೆ ನಂಬು, ಇಲ್ಲದಿದ್ದರೆ ಬಿಡು"

ವೀರಭದ್ರ ನಗುತ್ತಾ "ಖಂಡಿತಾ ನಂಬೋಲ್ಲ ಅವರುಗಳು ಬದುಕಿದ್ದರೆ ನಿನ್ನ ಶ್ರೀಮಂತಿಕೆಯಲ್ಲಿ ಎಂದಾದರೂ ಒಂದು ದಿನ ಪಾಲು ಕೊಡಬೇಕಾಗುತ್ತದೆ ಅಂತ ಅವರನ್ನೆಲ್ಲಾ ಸಾಯಿಸಿದೆ ಅಲ್ಲವೆ. ಅವರುಗಳು ಸಹ ನಿನ್ನನ್ನು ಮುಗಿಸಲು ಪ್ರಯತ್ನಿಸುತ್ತಿದ್ದರು, ನಿನಗೆ ಕೊಲೆ ಮಾಡಲು ಕಾರಣಗಳಿವೆ"

ಪ್ರಸನ್ನ ಗಂಭೀರವಾಗಿ "ಬರೀ ಕಾರಣ ಮಾತ್ರ ಅಲ್ಲ, ಕೊಲೆ ಮಾಡಲು ನನಗೆ ಅವಕಾಶಗಳು ಸಹ ಇತ್ತು, ಆದರೂ ನಾನು ಯಾರನ್ನೂ ಕೊಲೆ ಮಾಡಲಿಲ್ಲ".

ವೀರಭದ್ರ ಗಹ ಗಹಿಸಿ ನಕ್ಕನು !

ಪ್ರಸನ್ನ "ಇನ್ನು ನಿಧಿಯ ಬಗ್ಗೆ ಹೇಳಿದೆ, ಇದನ್ನು ನಾನು ಯಾವತ್ತೂ ಸಹ ಬಯಸಿರಲಿಲ್ಲ, ಅಲ್ಲದೆ ನಿಧಿಯನ್ನು ಅಪಹರಿಸಲು ನಾನು ನಿಮ್ಮಗಳ ಜೊತೆ ಬರಲಿಲ್ಲ."

ವೀರಭದ್ರ ವ್ಯಂಗ್ಯವಾಗಿ "ನಿಧಿಯನ್ನು ಕಂಡು ಹಿಡಿದದ್ದು ನಾವು, ಹೊರಗೆ ತಂದಿದ್ದು ನಾವು, ಆದರೆ ಗ್ರಹಚಾರದಿಂದ ನಮಗೆ ಹುಚ್ಚು ಹಿಡಿಯಿತು. ನೀನು ಈ ಅವಕಾಶ ಉಪಯೋಗಿಸಿಕೊಂಡು ಅದನ್ನೆಲ್ಲಾ ವಶಪಡಿಸಿಕೊಂಡು ಸುಖ, ವೈಭವದ ಜೀವನ ನಡೆಸುತ್ತಿದ್ದೀಯ?"

ಪ್ರಸನ್ನ "ನಿಜ.... ಮೊದಲಿಗಿಂತಲೂ ನಾನು ಸುಖ ಜೀವನವನ್ನು ಅನುಭವಿಸುತ್ತಿದ್ದೇನೆ. ಆದರೆ ಈ ನಿಧಿಯಲ್ಲಿ ಎಂಬತ್ತು ಭಾಗವನ್ನು ಸರ್ಕಾರಕ್ಕೆ ಈಗಾಗಲೇ ಒಪ್ಪಿಸಿದ್ದೇನೆ."

ಇವನ್ನು ಕೇಳಿದ ಕೂಡಲೇ ವೀರಭದ್ರ ಕೆರಳಿದನು. ಕೋಪದಿಂದ ಅಬ್ಬರಿಸುತ್ತಾ ಬಲಗಾಲನ್ನೆತ್ತಿ ಪ್ರಸನ್ನನ ಎದೆಗೆ ಬಲವಾಗಿ ಜಾಡಿಸಿ ಒದ್ದನು.

"ಡಬ್" ಎಂಬ ಶಬ್ದ!

ಪ್ರಸನ್ನ ಎದೆಯನ್ನು ಹಿಡಿದುಕೊಂಡು ತೂರಾಡುತ್ತಾ ನೆಲದತ್ತ ವಾಲಿಕೊಂಡನು. ವೀರಭದ್ರ ಅವನ ಮೇಲೆ ತಲೆಯಿಂದ ಡಿಕ್ಕಿ ಹೊಡೆಯುತ್ತಾ "ಸುಳ್ಳು... ಸುಳ್ಳು ಬೊಗಳಬೇಡ ನಿನ್ನನ್ನು ತುಂಡು ತುಂಡು ಮಾಡುತ್ತೇನೆ."

ಪ್ರಸನ್ನ "ನೀನು ನನ್ನನ್ನು ಏನು ಮಾಡಿದರೂ ಸಹ ಪರವಾಗಿಲ್ಲ. ಆದರೆ ನಾನು ಹೇಳ್ತಾ ಇರೋದು ನಿಜ. ಎಂಭತ್ತು ಭಾಗ ನಿಧಿಯನ್ನು ಸರ್ಕಾರಕ್ಕೆ ಏನೇನೋ ಸುಳ್ಳು ಹೇಳಿ ಒಪ್ಪಿಸಿದೆ, ಇಪ್ಪತ್ತು ಭಾಗದಲ್ಲಿ ಬಡ ಬಗ್ಗರಿಗೆ ರೋಗಿಗಳಿಗೆ ಸಹಾಯ ಮಾಡುತ್ತಿದ್ದೇನೆ. ನಾನು ಸಹ ಸುಖ ಜೀವನ ನಡೆಸುತ್ತಿದ್ದೇನೆ."

ವೀರಭದ್ರ ಹುಚ್ಚನಾಗಿದ್ದನು.

ಕೋಪ, ಆವೇಶದಿಂದ ಅಬ್ಬರಿಸುತ್ತಾ ಮೊಣಕಾಲನ್ನೆತ್ತಿ ಪ್ರಸನ್ನನ ಹೊಟ್ಟೆಗೆ ಜಾಡಿಸಿದನು !

ಬೆನ್ನಿಗೆ ಬಲವಾಗಿ ಗುದ್ದಿದನು

ಪ್ರಸನ್ನ ನೆಲದ ಮೇಲೆ ಬಿದ್ದನು.

ವೀರಭದ್ರ ಕೋಪದಿಂದ ಅರಚುತ್ತಾ "ಈ ನಿಧಿಯನ್ನು ಸಂಪಾದಿಸಲು ನಾವೇನು ಮಾಡಿದ್ದೇವೆ ಅಂತ ನಿನಗೆ ಗೊತ್ತೆ? ನಿಧಿ ಅಪಹರಿಸಲು ಬಾ ಅಂತ ಕರೆದಾಗ ವೈರಾಗ್ಯದ ಮಾತುಗಳನ್ನಾಡಿದ್ದ ನೀನು ಅದನ್ನು ಸರ್ಕಾರಕ್ಕೆ ಯಾಕೆ ಒಪ್ಪಿಸಿದೆ? ಆ ಹಕ್ಕನ್ನು ನಿನಗೆ ಕೊಟ್ಟವರು ಯಾರು?"

ಉತ್ತರಿಸಲಿಲ್ಲ ಪ್ರಸನ್ನ !

ಎದೆಗೊಂದು ಹ್ಯಾಮರ್ ಪಂಚ್ !

ತಲೆಗೊಂದು ಸಾಲಿಡ್ ಡಿಚ್ಚಿ!

ವೀರಭದ್ರನ ಈ ವೀರ ವಿಹಾರದಿಂದ ಪ್ರಸನ್ನ ತತ್ತರಿಸಿ ಹೋಗುತ್ತಿದ್ದನು. ಮೂಗು ಬಾಯಿಂದ ರಕ್ತ ಬರುತ್ತಿದೆ !

ವೀರಭದ್ರ ಅವನ ತಲೆಯ ಕೂದಲನ್ನು

**20ನೇ ಪುಟಕ್ಕೆ**

**ಇಲ್ಲಿಯವರೆಗೆ.........**

ವೀರಭದ್ರ ಈಗ ತನ್ನ ಸಹೋದರರನ್ನು ಸಾಯಿಸಲು ಪ್ರಯತ್ನಿಸುತ್ತಾನೆ. ಅದಕ್ಕೆ ಮೊದಲು ಕೆಲವು ರಹಸ್ಯಗಳನ್ನು ತಿಳಿಸುತ್ತಾನೆ. ಅರುಂಧತಿ, ಅವಳ ಗಂಡ ಮಂಜಯ್ಯ ಮತ್ತು ಲಿಂಗಯ್ಯನನ್ನು ಪ್ರಸನ್ನನೇ ಸಾಯಿಸಿದ್ದಾನೆ ಎಂದು ವೀರಭದ್ರ ಆರೋಪಿಸುತ್ತಾನೆ.

ಮುಂದೆ ಓದಿ.........

**ಮೊದಲು ಕಾಂತಾಮಣಿ, ಕೊನೆಗೆ ಚಿಂತಾಮಣಿ**

# ವಿದ್ಯಾವಂತ ನಿರುದ್ಯೋಗಿಗಳಿಗೆ ಮಾರ್ಗದರ್ಶಿ - 4

**ತಡಿಯಪ್ಪನ ಕುಮಾರ ಜಯ**

ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ.

51 ಭಾರತೀಯ ರಿಸರ್ವ್‌ಬ್ಯಾಂಕ್ ಕರೆನ್ಸಿ ನೋಟ್ಸ್
ನೋಟ್ ಮುದ್ರಣ ಲಿ.
ಮೇಟಗಳ್ಳಿ ಇಂ. ಏರಿಯಾ, ಮೈಸೂರು

52. ವಿ.ಎಸ್. ಟಿ. ಪ್ರಿಸಿಷನ್ ಕಾಂಪೋನೆಂಟ್ಸ್‌ಲಿ. ಡೀಸೆಲ್ ಇಂಜಿನ್
ಪ್ಲಾಟ್ ನಂ. 42/43, ಕೆ. ಆರ್. ಎಸ್ ರೋಡ್,
ಮೇಟಗಳ್ಳಿ, ಮೈಸೂರು

53 ಇಂಡೋಪೋಲ್ಸ್ ಬ್ಯಾಟರಿ ಪ್ರೈ. ಲಿ.
ಆರ್-6 ಡ್ರೈ ಸೆಲ್ ಬ್ಯಾಟರಿ
ಪ್ಲಾಟ್ ನಂ. 120, ಬೆಳಗೊಳ ಇಂ. ಏ.

54 ಸೌತ್ ಈಸ್ಟ್ ಆಗ್ರೋ ಲಿಮಿಟೆಡ್ ಓಲೆರ್‌ಸನ್
ಪ್ಲಾಟ್ ನಂ. 35, ಬೆಳವಾಡಿ ಇಂ. ಏರಿಯಾ (100% EOU)
ಮೈಸೂರು

55 ಡನ್‌ಲಪ್‌ಇಂಡಿಯಾ ಲಿಮಿಟೆಡ್ ವೈರ್ ಬ್ರೈಡಡ್
ಪ್ಲಾಟ್ ನಂ. 25, ಕೆ.ಆರ್. ಎಸ್. ರೋಡ್ ಹೋಸೆಸ್
ಮೇಟಗಳ್ಳಿ, ಮೈಸೂರು

56. ಜಿ.ಎಂ. ಎಂ. ಕೊ ಲಿಮಿಟೆಡ್ ಅಸೆಂಬ್ಲಿ ಆಫ್ ಡಿ. ಜಿ. ಸೆಟ್ಸ್
ಪ್ಲಾಟ್ ನಂ. 63A, ಹೂಟಗಳ್ಳಿ ಇಂ. ಏ.
ಮೈಸೂರು

57 ಸುದರ್ಶನ್ ಟೆಲಿಕಾಂಸ್ ಲಿ. ಆಪ್ಟಿಕಲ್ ಫೈಬರ್
ಪ್ಲಾಟ್ ನಂ. 386/387, ಎಲೆಕ್ಟ್ರಾನಿಕ್ಸ್ ಕೇಬಲ್ಸ್
ಇಂ. ಏರಿಯಾ, ಹೆಬ್ಬಾಳ್ ಇಂ. ಏ.
ಮೈಸೂರು

58 ಅವಸರಲಾ ಟಂಗ್‌ಸ್ಟನ್ಸ್ ಲಿ. ಟಂಗ್‌ಸ್ಟನ್ ಫಿಲಮಂಟ್ಸ್
ಹೂಟಗಳ್ಳಿ, ಇಂ. ಏರಿಯಾ ಮಾಲಿ ವೈರ್ಸ್
ಮೈಸೂರು

59 ಮೈಸೂರು ಚಿಪ್ಸ್ ಬೋರ್ಡ್ಸ್ ಲಿ. ಪ್ಲೈವುಡ್ ಬೋರ್ಡ್ಸ್
ಬೆಳವಾಡಿ ಇಂ. ಏರಿಯಾ
ಹುಣಸೂರು ರೋಡ್, ಮೈಸೂರು

60 ಮಾಣಿಕ್ಯ ಪ್ಲಾಸ್ಟಿಕೆಮ್(ಪ್ರೈ) ಲಿ. ಹೆಚ್.ಪಿ.ಇ.ಪಿ.ಪೈಪ್ಸ್
ಪ್ಲಾಟ್ ನಂ. 5 ಬೆಳವಾಡಿ ಇಂ. ಏರಿಯಾ
ಮೈಸೂರು

61 ರಾಮನ್ ಫೈಬರ್ ಪ್ರಾಡಕ್ಸ್ ಲಿ. ಸ್ಟಿಫ್ನಸ್ ಮೆಟೀರಿಯಲ್
ಪ್ರೀಮಿಯರ್ ಸ್ಟುಡಿಯೋ, ಮೆಟೀರಿಯಲ್
ಮೈಸೂರು ಸೌತ್, ಮೈಸೂರು

62 ರಾಮನ್ ಸ್ಟೆಲ್‌ಮೆಟ್ ಲಿಮಿಟೆಡ್ ಸ್ಟೀಲ್ ವೂಲ್
41/A, IIIಸ್ಟೇಜ್ ಇಂ. ಸಬರ್ಬ್
ಮೈಸೂರು

63 ಎ.ಸಿ.ಇ. ಕಾಂಪೋನೆಂಟ್ಸ್ ಲಿಮಿಟೆಡ್ ರೆಸಿಸ್ಟರ್ಸ್
ಬೆಳವಾಡಿ ಇಂ. ಏರಿಯಾ ಮೈಸೂರು ಕ್ಲೋಸ್ಡ್ ಯುನಿಟ್ಸ್

64 ಕಪ್ ಕೆಮ್ ಲಿಮಿಟೆಡ್ ಅಸಿಟಿಕ್ ಆಸಿಡ್,
ಬೆಳಗೊಳ ಇಂ. ಏರಿಯಾ ಈಥೈಲ್ ಅಸಿಟಿಕ್ ಆಸಿಡ್
ಮೈಸೂರು

65 ಎ.ಇ. ಎಸ್. ಕೆಮಿಕಲ್ಸ್ ಪ್ರೈ.ಲಿ. ಪೊಟಾಷಿಯಂ ಕ್ಲೋರೈಡ್
ಹೂಟಗಳ್ಳಿ, ಇಂ. ಏ. ಮೈಸೂರು

66 ಜೆಯ್ ಎಲೆಕ್ಟ್ರಿಕ್ ವೈರ್ ಕಾರ್ಪೋರೇಷನ್ ಟಂಗ್‌ಸ್ಟನ್
ಲಿ.ಕೆ. ಆರ್.ಎಸ್. ರೋಡ್, ಮೇಟಗಳ್ಳಿ, ಫಿಲಮಂಟ್ಸ್
ಮೈಸೂರು

67 ಆಲ್ಪ ಡೈ ಕಾಸ್ಟ್ ಪ್ರೈ ಲಿ. ಡೈ ಕಾಸ್ಟಿಂಗ್ ಶೀಟ್
ಹೂಟಗಳ್ಳಿ ಇಂ. ಏರಿಯಾ ಮೆಟಲ್ ಕಾಂಪೊನೆಂಟ್ಸ್
ಮೈಸೂರು

68 ಕರ್ನಾಟಕ ಬಾಲ್ ಬೇರಿಂಗ್ ಕಾರ್ಪೋರೇಷನ್,
ಟೇಪರ್, ರೋಲರ್
ಪ್ಲಾಟ್ ನಂ. 21, ಬೆಳವಾಡಿ ಇಂ. ಏರಿಯಾ ಸಿಲಿಂಡ್ರಿಕಲ್
ಮೈಸೂರು ಬೇರಿಂಗ್ಸ್

69 ಮೆಷಿನರಿ ಮ್ಯಾನಿಫ್ಯಾಕ್ಚರ್ಸ್ ಕಾರ್ಪೋರೇಷನ್‌ಟೆಕ್ಸ್‌ಟೈಲ್ ಮೆಷಿನ್
ಬೆಳವಾಡಿ ಇಂ. ಏರಿಯಾ ಸ್ಪಿಂಡಲ್ ಫ್ರೇಮ್ಸ್
ಮೈಸೂರು.

70ಕೆ. ಆರ್. ಮಿಲ್ಸ್ ಮೈಸೂರು ಯಾರ್ನ್ಸ್ ಕ್ಲಾತ್

71 ಎಸ್ ಆರ್. ಪಿ. ಮಿಲ್ಸ್ ಮೈಸೂರು ಮ್ಯಾನ್ ಮೇಡ್
ಫೈಬರ್ ಯಾರ್ನ್

72 ಮೈಸೂರು ರೆಸಿನ್ಸ್ ಅಂಡ್ ಕೆಮಿಕಲ್ಸ್ ಲಿ. ಸಿಲ್ಕ್ ಕ್ಲಾತ್
ಮೈಸೂರು ಫಾರ್ಮುಲಾ ಡಿಹೈಡ್

73 ಐಡಿಯಲ್ ಜಾವ ಇಂಡಿಯಾ ಲಿ. ಮೊಟಾರ್ ಸೈಕಲ್ಸ್
ಯಾದವಗಿರಿ ಇಂ. ಎಸ್ಟೇಟ್ ಅಂಡ್ ಸ್ಪೇರ್ಸ್
ಮೈಸೂರು

74 ಓ ಆರ್ ಆರ್ ಸಿ ಇ ಇ ಎಲೆಕ್ಟ್ರಾನಿಕ್ಸ್ ಲಿ ಪ್ಲಾಸ್ಟಿಕ್ ಫಿಲಿಂ
ನಂ. 45, ಕೆ. ಆರ್. ಎಸ್ ರೋಡ್, ಮೇಟಗಳ್ಳಿ ಕೆಪಾಸಿಟರ್ಸ್
ಮೈಸೂರು

75 ವಿಕಯರ್ ರಬ್ಬರ್ ಮೆ. ಕೊ. ರಬ್ಬರ್ ಮಿಕ್ಸಿಂಗ್
ಹೆಬ್ಬಾಳ್ ಇಂ. ಏರಿಯಾ, ಮೈಸೂರು

76 ಡೈಮಾಂಡ್ ಡೈಸ್ ಮೆ. ಕೋ ಲಿ. ವೈರ್ ಡ್ರಾಯಿಂಗ್
ಪ್ಲಾಟ್ ನಂ.48, ಮೇಟಗಳ್ಳಿ, ಇಂ. ಏ. ಡೈಮಂಡ್ ಡೈಸ್
ಮೈಸೂರು

77 ಜೈ ನೀಡಲ್ ಬೇರಿಂಗ್ಸ್ ನೀಡಲ್/ರೋಲರ್
ಪ್ಲಾಟ್ ನಂ. 21A, ಬೆಳವಾಡಿ ಇಂ. ಏ. ಬೇರಿಂಗ್ಸ್
ಮೈಸೂರು

78 ರೈನಿಂಗ್ ಲೈಟಿಂಗ್ಸ್(ಇಂಡಿಯಾ)ಲಿ. ಕಾಂಪ್ಯಾಕ್ಟ್ ಪ್ಲೋರೊಸೆಂಟ್
ಇಂಡಾಲ್. ಸಬರ್ಬ್, ಮೈಸೂರು ಸೌತ್ ಟ್ಯೂಬ್ಸ್
ಜೆ. ಎಲ್. ಪುರಂ, ಮೈಸೂರು

---

1 ಮೆ. ಇಂಡೋಪೋಲ್ಸ್ ಬ್ಯಾಟರಿ ಲಿ.
ಬ್ಯಾಟರೀಸ್ (ಡ್ರೈ ಸೆಲ್ಸ್)
ಬೆಳಗೊಳ ಇಂಡಸ್ಟ್ರಿಯಲ್ ಏರಿಯಾ, ಮೈಸೂರು

2 ಮೆ. ಸುಂದರಮ್ಸ್ ಪಾಲಿಮರ್ಸ್‌ಲಿ.
ಕಾಂಪೌಂಡ್ಸ್ ಅಂಡ್ ಅದರ್ ಪ್ರಾಡಕ್ಟ್ಸ್
ನಂಜನಗೂಡು

3 ಮೆ. ಲಕ್ಷ್ಮಿ ಮೆಷಿನ್ ವರ್ಕ್ಸ್
ತಾಂಡವಪುರ, ನಂಜನಗೂಡು

4 ಮೆ. ಎಂಬ್ಲಮ್ ಪ್ರೈ. ಲಿ.
ಹೂಟಗಳ್ಳಿ ಇಂ. ಏರಿಯಾ ಮೈಸೂರು

5. ಮೆ. ಕರ್ನಾಟಕ ಆಂಟಿಬಯಾಟಿಕ್
ಹೆಬ್ಬಾಳ್ ಇಂ. ಏರಿಯಾ ಮೈಸೂರು

6. ಮೆ. ಇನ್‌ಪೋಸಿಸ್ ಟೆಕ್ನೊಲಜೀಸ್ ಲಿ.
ಎಲೆಕ್ಟ್ರಾನಿಕ್ ಸಿಟಿ ಹೆಬ್ಬಾಳ್ ಇಂ. ಏರಿಯಾ ಮೈಸೂರು

---

7 ಮೆ. ವಿಪ್ರೋ ಏಸರ್ ಲಿ.
ಇಂ. ಏರಿಯಾ ಮೈಸೂರು
8 ಮೆ. ಸಾಯಿ ಲಕ್ಷ್ಮಿ ಇಂಡಸ್ಟ್ರೀಸ್
ತಾಂಡವಪುರ ಇಂ. ಏರಿಯಾ ನಂಜನಗೂಡು
9 ಆರ್.ಪಿ. ಜಿ. ಟೆಲಿಕಾಂ ಲಿ.
ಹಾಬ್ಬಾಲ್ ಮೈಸೂರು
10 ಮೆ. ವೆನ್‌ಲಾನ್ ಪಾಲಿಯೆಸ್ಟರ್ ಲಿ.
ಬೆಳವಾಡಿ ಇಂ. ಏರಿಯಾ ಮೈಸೂರು
11 ಮೆ. ಇಂಡಿಯನ್ ಅಲ್ಯೂಮಿನಿಯ್ ಕಂಪನಿ
ನಂಜನಗೂಡು
12 ಮೆ. ಎಸ್. ಕುಮಾರ್ಸ್ ಸಿನ್‌ಫಾಸ್ ಲಿ.
ಮೈಸೂರು
13 ಮೆ. ಟಿ. ವಿ. ಎಸ್. ಸುಜುಕಿ ಲಿ.
ಬ್ಯಾತಹಳ್ಳಿ, ತಾಂಡವಪುರ
ನಂಜನಗೂಡು
14 ಮೆ. ಎಲ್ ಅಂಡ್ ಟಿ. ಸ್ಯಾಂಸಂಗ್ ಲಿ.
ಹೂಟಗಳ್ಳಿ ಇಂ. ಏರಿಯಾ ಮೈಸೂರು
15 ಟಾಫೇ ನಂಜನಗೂಡು
16 ಬಿ.ಪಿ.ಸಿ.
ಬೆಳವಾಡಿ ಇಂ. ಏ. ಮೈಸೂರು
17 ರಚನಾ ರಬ್ಬರ್ಸ್
ನಂಜನಗೂಡು
18 ಮೈಸೂರು ಫುಡ್ಸ್ ಪ್ರಾಡಕ್ಟ್ಸ್
ಬಸವನಹಳ್ಳಿ ಟಿ. ಎನ್. ಪುರ
19 ಚಾಮುಂಡಿ ಡಿಸ್ಟಿಲರೀಸ್
ಕೆಂಪೇಗೌಡನ ಕೊಪ್ಪಲ್, ಟಿ. ಎನ್. ಪುರ
20 ಮೆರಿಟಾರ್ ಹೆವಿ ವೆಹಿಕಲ್ ಸಿಸ್ಟಮ್
ಆಟೋಮೊಟಿವ್ ಆಕ್ಸಲ್ಸ್ ಲಿ.
ಹೂಟಗಳ್ಳಿ, ಮೈಸೂರು
21 ಸಹನ ಆಗ್ರೋ ಪ್ರಾಡಕ್ಟ್ಸ್ ( ಪ್ರೈ)ಲಿ.
ಬಚ್ಚಹಳ್ಳಿ, ಹೊನಗನ ಹೋಬಳಿ, ಗುಂಡ್ಲುಪೇಟೆ ತಾ.
22 ಚಾಮುಂಡಿ ಟೆಕ್ಸ್‌ಟೈಲ್ಸ್ ಸಿಲ್ಕ್ ಮಿಲ್ಸ್
ಹೆಬ್ಬಾಳ್ ಇಂ. ಏರಿಯಾ ಮೈಸೂರು
23 ಈಸ್ಟರ್ನ್ ಜಿಂಗ್ ಬ್ಯಾಗ್ ಲಿ
19ಆರ್ ಎಂ ಮುಕರ್ಜಿ ರೋಡ್
ಕಲ್ಕತ್ತ (ಪ್ಲಾಂಟ್ ಅಟ್ ನಂಜನಗೂಡು ಐ. ಏ)
24 ಈಸ್ಟರ್ನ್ ಓಂಗೆಟ್ಟ ಲಿ.
ಪ್ಲಾಂಟ್ ಅಟ್ ನಂಜನಗೂಡ್ ಇಂ. ಏ.
ನಂ. 19, ಆರ್. ಎಂ. ಮುಖರ್ಜಿ ರೋಡ್, ಕಲ್ಕತ್ತ
25 ಈಸ್ಟರ್ನ್ ಎಂಟರ್ ಪ್ರೈಸಸ್ ಲಿ.
ಪ್ಲಾಂಟ್ ಅಟ್ ನಂಜನಗೂಡು ಐ. ಏ.
ನಂ. 19 ಆರ್. ಎಂ. ಮುಖರ್ಜಿ ರೋಡ್, ಕಲ್ಕತ್ತ

**ವಿವರಗಳಿಗೆ ಸಂಪರ್ಕಿಸಿ :**
ಜಂಟಿ ನಿರ್ದೇಶಕರು
ಜಿಲ್ಲಾ ಕೈಗಾರಿಗಾ ಕೇಂದ್ರ, ಸಯ್ಯಾಜಿರಾವ್ ರಸ್ತೆ
ಮೈಸೂರು - 570 001.

2) ಉಪನಿರ್ದೇಶಕರು ಹಾಗೂ ಡೆಪ್ಯೂಟಿ ಅಪ್ರೆಂಟಿಸ್ ಶಿಪ್ ಅಡ್ವೈಸರ್, ವಿಭಾಗೀಯ ಕಛೇರಿ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್, ಟಿಪ್ಪೂ ಸರ್ಕಲ್ ಬಳಿಯಲ್ಲಿ, ಬೆಂಗಳೂರು - ಊಟಿ ರಸ್ತೆ, ಮೈಸೂರು.

IX ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ಇಲಾಖೆಯ ವತಿಯಿಂದ ವಿದ್ಯಾವಂತ ನಿರುದ್ಯೋಗಿ ಯುವಕ ಯುವತಿಯರಿಗೆ ಕಿಯಾನಿಕ್ಸ್ ಸಂಸ್ಥೆಯವರ ಮೂಲಕ ಕಂಪ್ಯೂಟರ್ ತರಬೇತಿ ನೀಡಲಾಗುವುದು ಶಿಷ್ಯ ವೇತನ ಸಹಿತ ಹಾಗೂ ಶಿಷ್ಯ ವೇತನ ರಹಿತ ತರಬೇತಿಗಳು ಹಲವಾರು ಅವಧಿಯದ್ದಾಗಿರುತ್ತದೆ.

**ವಿವರಗಳಿಗೆ ಸಂಪರ್ಕಿಸಿ :**
1) ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು
ಜಿಲ್ಲಾಧಿಕಾರಗಳ ಕಛೇರಿ, ಮೈಸೂರು
2) ಸಹಾಯಕ ನಿರ್ದೇಶಕರು, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ
ಬಾಲಭವನ, ಬನ್ನಿಮಂಟಪ, ಮೈಸೂರು
3) ತರಬೇತಿ ಅಧಿಕಾರಿಗಳು,
ಕಿಯಾನಿಕ್ಸ್ ತರಬೇತಿ ಕೇಂದ್ರ
ನಂ. 918, ಮೊದಲನೇ ಮಹಡಿ
ನ್ಯೂ ಕಾಂತರಾಜ ಅರಸ್ ರಸ್ತೆ
4ನೇ ಮೈನ್ ರಸ್ತೆ ಸರಸ್ವತೀಪುರಂ,
ಮೈಸೂರು - 570 023.

X ಗ್ರಾಮೀಣ ಪ್ರದೇಶದ ಯುವ ಜನತೆಗೆ ತೋಟಗಾರಿಕೆ ಬಗ್ಗೆ ತರಬೇತಿ ನೀಡಲಾಗುವುದು.

**ವಿವರಗಳಿಗೆ ಸಂಪರ್ಕಿಸಿ:**
ಜಿಲ್ಲಾ ತೋಟಗಾರಿಕೆ ಅಧಿಕಾರಿಗಳು
ಕರ್ಜನ್ ಪಾರ್ಕ್, ಮೈಸೂರು - 570 001

**ಮುಂದಿನ ಸಂಚಿಕೆಯಲ್ಲಿ ಮುಗಿಯಲಿದೆ.**

## ಸೀತ, ದಮ್ಮು, ನ್ಯಾವಸಕೆ :

ವಾಮಕ್ಕಿ, ಒಳ್ಳೆ ಮೆಣಸು, ಬೆಳ್ಳುಳ್ಳಿ, ದೊಡ್ಡ ಬಾಜಿಗದ ಸೊಪ್ಪುನ ಕೈವುಳಿ ನೀರ್‌ಲಿ ಅರ್ದ್ ಕೈವುಳಿ ರಸಲಿ (ಎಳ್ಳುಕಾಯಿ), ಕುಡಿಸಕ್ಕು, ಮೂರು ದಿನ 5 ಸೊಪ್ಪು 7 ಮತ್ತೆ 9 ರಂತೆ ಕುಡುನ ಸಾಂಬರ್‌ಲಿ 12 ದಿನ ಪತ್ಯ ಇರಕು, ಆಗ ನೂರು ವರ್ಷ ಕುಯಿ, ಕುಯಿ, ಸುರುಸುರು ಹೇಳಿಕಿಲ್ಲೆ.

**ಬಾಲಗ್ರಹ :** ಬೆಳಿಗ್ಗೆ ನಾಲ್ಕರ ಜಾವ ತುಂಬೆ ಗಿಡದ್ ಬೇರ್ ತಂದ್ ಬಿಳಿ ಬಟ್ಟೆಲಿ ಹಾಕಿ ಕುತ್ತಿಗೆಗೆ ಕಟ್ಟಕೂ ಅದರ ಹೂವು ತೆಂಗಿನೆಣ್ಣೆಲಿ ಹಾಕಿ ತಲೆಯಿಂದ ಕಾಲಿನವರೆಗೆ ತಿಕ್ಕಕು.

**ಹೊಟ್ಟೆಬ್ಯಾನೆ :** ಇಂಗ್‌ನ ನಿಂಬೆ ನೀರ್‌ಲಿ ಸೇರ್ಸಿ ಕುಡಿಯಕು


ಮಣ್ಣಿನ ಮಡಿಕೆ ಅಡಿ ಕರಿಗೆ ಉಪ್ಪು ಹಾಕಿ ಕುಡಿದರೆ ಹೊಟ್ಟೆಯೊಳಗಿನ ಸದ್ದ್ ನಿಂತ್ ಹೋದೆ,

**ಗಾಯಕೆ :** ಪಾಣವಳ ಸೊಪ್ಪು, ಸುಣ್ಣ ಸೇರ್ಸಿ ಅರ್ದ್ ಗಾಯಕೆ ಕಟ್ಟಕು, ಯಾವ ಕಾಯಿಲೆ ಕಸ ನಿಮ್ಮ ಹತ್ತಿರ ಸೊಂಕದಂಗೆ ಮಾಡುವ ಅಮೃತ್ ಇದ್.

ಕಹಿ ಬೇವುನ ರಸನ ಒಂದು ತಿಂಗಳ ತನಕ ಕುಡಿದರೆ ಎಲ್ಲಾ ರೋಗಕು ರಾಮ ಬಾಣ, ನೀವು ಏಕೆ ಇದರ ಪ್ರಯೋಜನ ಪಡೆಯಕಾಗದ್?

**ಸಂಗ್ರಹಣೆ : ಮುಂಇಂಡ್ರ ಗಣೇಶ, ಬೆಂಗಳೂರು**

# ಪತ್ರ ವಿಭಾಗ :



**ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ ಕಂಪ್ಯೂಟರ್‌ಬಲೆಯಲ್ಲಿ - ಒಂದು ಪತ್ರ**

"Two roads diverged in a wood, and I
I took the one less travelled by,
and that has made all the difference" -
Robert Frost

**ನೆಚ್ಚಿನ ಸ್ನೇಹಿತರೆ,**

'ಸಂಗಾತಿ' ಯ ಮೂಲಕ ನಮ್ಮ ಜನಾಂಗದ ನೂರಾರು ಮಂದಿ ಸಹೋದರ /ಸಹೋದರಿಯರೊಂದಿಗೆ ಮಾತಾಡಲು ಸಂತೋಷವಾಗುತ್ತಿದೆ.

ನಮಗೆ ತಿಳಿದಿರುವಂತೆ, ಬೆಂಗಳೂರಿನಲ್ಲಿ ನಮ್ಮ ಜನಾಂಗದ ಹಿತಾಸಕ್ತಿಗಳನ್ನು ರಕ್ಷಿಸಲು ಎರಡು ಸಂಘಗಳಿವೆ ಕೊಡಗು ಗೌಡ ಸಮಾಜ ಹಾಗೂ ಕೊಡಗು ಮತ್ತುದಕ್ಷಿಣ ಕನ್ನಡ ಗೌಡ ಸಮಾಜ.

ಅನೇಕ ವರ್ಷಗಳಿಂದ ವಾರ್ಷಿಕ ಮಹಾಸಭೆ, ಕೈಲ್‌ಪೊಳ್ದ್ ಹಬ್ಬದ ಆಚರಣೆ, ಸಾಂಸ್ಕೃತಿಕ ಮತ್ತು ಕ್ರೀಡಾಕೂಟ ಮೊದಲಾದವುಗಳ ಮೂಲಕ ನಮ್ಮ ಜನಾಂಗದ ಬಾಂಧವರನ್ನುಬೆಸೆಯುವಲ್ಲಿ ಆ ಸದೃಢ ಸಂಸ್ಥೆಗಳು ಮಹತ್ತರ ಪಾತ್ರವಹಿಸಿವೆ. ಕಳೆದ ವರ್ಷ ಜನಾಂಗದ "ಕುಟುಂಬ ಕೈಪಿಡಿ"ಯೊಂದು ಹೊರಬಂದಿದೆ. ಇತ್ತೀಚೆಗೆ ವಧೂ ವರರ ಮುಖಾಮುಖಿ ಸಮಾವೇಶವೂ ನಡೆದ ಬಗ್ಗೆ ಕೇಳಿದ್ದೇವೆ ಇವು ನಿಜವಾಗಿಯೂ ಪ್ರಗತಿ ಸೂಚಕ ಚಟುವಟಿಕೆಗಳು.

ಕೆಲವು ತಿಂಗಳುಗಳ ಹಿಂದೆ ಆಲೋಚನೆಯೊಂದು ಮೂಡಿ ಬಂದಿತು. ನಮ್ಮ ಜನಾಂಗವನ್ನು "ಇಂಟರ್‌ನೆಟ್" ತೆಕ್ಕೆಯೊಳಗೆ ತಂದರೆ ಹೇಗೆ? ಎಂದು ನಾವು ಅದರ ವ್ಯಾಪ್ತಿಗೊಳಪಟ್ಟಿಲ್ಲ. ಪ್ರಗತಿಶೀಲ, ವಿಚಾರಪೂರ್ಣ ಜನಾಂಗ ಎಂದು ಪರಿಗಣಿಸಲ್ಪಡ ಬೇಕಾದರೆ ಇನ್ನು ತಡ ಮಾಡದೆ ಅದರ ವ್ಯಾಪ್ತಿಗೊಳಪಡಲೇಬೇಕು. ನಮ್ಮಲ್ಲಿ ಅನೇಕರು "ಇಂಟರ್‌ನೆಟ್" ಎಂಬ ಝೇಂಕಾರದ ಪದವನ್ನು ಕೇಳಿರಬಹುದು ಇದೊಂದು "ಸಂಪರ್ಕಜಾಲ" ವಿಶ್ವದಾದ್ಯಂತ ಎಲ್ಲಾ ಕಂಪ್ಯೂಟರ್‌ಗಳು ಪರಸ್ಪರ ಸಂಪರ್ಕ ಹೊಂದಿರುತ್ತವೆ. ಯಾವುದೇ ಸಮಯದಲ್ಲಿ ಯಾವುದೇ ಸ್ಥಳದಲ್ಲಿ ವಿಶ್ವದ ಇತರ ಭಾಗಗಳೊಂದಿಗೆ ಸಂಪರ್ಕವನ್ನು ಸಾಧ್ಯಮಾಡುವ ವಿಶಿಷ್ಟ ಜಾಲವದು. ಈ ವಿಶಿಷ್ಟ ಜಾಲದೊಂದಿಗೆ, ದೂರವಾಣಿ ಸಂಪರ್ಕವನ್ನು ಹೊಂದಿರುವ ಕಂಪ್ಯೂಟರ್ ಒಂದು ಇದ್ದರೆ ಸಾಕು ಅಥವಾ ಹಲವೆಡೆ ಹರಡಿರುವ ಸೈಬರ್ ಕೇಂದ್ರಗಳಲ್ಲಿ ಒಂದಕ್ಕೆ ಭೇಟಿ ನೀಡಿ.

ಸ್ನೇಹಿತರೆ, ಈಗ ನಮಗೊಂದು "ಸಂಪರ್ಕ ವೇದಿಕೆ" ಇದೆ, ಅದೇ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಬಂದ "ಅರೆಭಾಷೆ" ಗೌಡ ಜನಾಂಗ. ಈ ಸಂಪರ್ಕ ವೇದಿಕೆಯನ್ನು ಕೆಎಮ್‌ಡಿ.ಕೆಜಿಎಸ್ ಆನ್‌ಲೈನ್@ಇಗ್ರೂಪ್ಸ್.ಕಾಮ್ (kmdkgs-online@egroups.com) ಎಂದು ಕರೆಯಲಾಗುತ್ತದೆ. ಈ ವೇದಿಕೆಯ ಅಸ್ತಿತ್ವವದ ಬಗ್ಗೆ ತಿಳಿಯಪಡಿಸುವುದೇ ನನ್ನ ಉದ್ದೇಶ. ಕೆಲವೇ ನಿಮಿಷಗಳಲ್ಲಿ ವಿಶ್ವದಾದ್ಯಂತ ಶ್ರೋತೃ ವೃಂದವನ್ನು ತಲುಪಿ ಮುಕ್ತ ಚರ್ಚೆಯಲ್ಲಿ ಭಾಗವಹಿಸುವಂತೆ ಮಾಡುವ ಸಂಪರ್ಕ ಜಾಲದ ಮೋಡಿ ಅಗಾಧವಾದುದು. ಚರ್ಚಾಜಾಲದ ಕೆಲಸವನ್ನು ಕೆಎಮ್‌ಡಿಕೆಜಿಎಸ್ -ಆನ್‌ಲೈನ್ @ಇಗ್ರೂಪ್ಸ್.ಕಾಮ್ ಮಾಡುತ್ತದೆ.

1999 ರ ಕೊನೆಯಲ್ಲಿ ಆರಂಭಗೊಂಡಾಗ ಈ ಚರ್ಚಾ ಬಣದಲ್ಲಿ 20ಮಂದಿ ಸದಸ್ಯರಿದ್ದರು. ನಿಮ್ಮ ಭಾಗವಹಿಸುವಿಕೆಯಿಂದ ಬೆಳೆಯುವ ನಿರೀಕ್ಷೆಯೂ ಇದೆ. ಯಾವುದೇ ಭೌಗೋಳಿಕ ಇತಿಮಿತಿಗಳಿಲ್ಲದೆ ನಮ್ಮ ಪಟ್ಟಿಯಲ್ಲಿ ಭಾರತ ಮಾತ್ರವಲ್ಲದೆ ಅಮೇರಿಕಾ, ಕೆನಡಾ ಮೊದಲಾದ ರಾಷ್ಟ್ರಗಳಲ್ಲಿರುವ ಸದಸ್ಯರಿದ್ದಾರೆ. ಚದುರಿದ ಜನಾಂಗವನ್ನು ಒಗ್ಗೂಡಿಸಿ, ಸ್ನೇಹವನ್ನು ಬೆಸೆದು ಐಕ್ಯತೆಯ ಮನೋಭಾವನೆಯನ್ನು ಬೆಳೆಸುವಲ್ಲಿ ಈಗಾಗಲೇ ಮುಂದಡಿ ಇಟ್ಟಿದ್ದೇವೆ. ಭಾರತದಲ್ಲಿ ಇಂಟರ್‌ನೆಟ್ ವ್ಯಾಪಕ ಬಳಕೆ ಆರಂಭವಾಗಿದೆ. ನಿಮ್ಮಲ್ಲಿ ಹಲವರು ಅದರ ಬಳಕೆಯನ್ನು ಆರಂಭಿಸಿರಲೂಬಹುದು. ಹತ್ತು ಹಲವು ಸಂಗತಿಗಳ, ಅಭಿಪ್ರಾಯಗಳ ವಿನಿಮಯದಿಂದ ನಮ್ಮ ಜನಾಂಗದ ಬೌದ್ಧಿಕ ಮಟ್ಟ ಹೆಚ್ಚುವುದರಲ್ಲಿ ಅನುಮಾನವಿಲ್ಲ. ಜನರ ಬಗ್ಗೆ ತಿಳಿದು, ಅವರಿಂದಲೂ ತಿಳಿಯುವುದು ಒಂದು ಅಪೂರ್ವ ಅನುಭವ. ಇದೊಂದು ಹದಿಹರೆಯದ ಯುವಕರು, ವಿದ್ಯಾವಂತರು ಹಾಗೂ ಹಿರಿಯರಿಂದ ತಿಳಿದು, ಅವರಿಗೂ ತಿಳಿಸುವ ಪ್ರಕ್ರಿಯೆ. ಇದೊಂದು ವಿಚಾರ ಮಂಥನ ಯಂತ್ರ. ಇತರ ಸದೃಢ ಸಂಸ್ಥೆಗಳಂತೆ ಅಭಿಪ್ರಾಯಗಳನ್ನು ಕಾರ್ಯರೂಪಕ್ಕಿಳಿಸುವುದೇ ಇದರ ಉದ್ದೇಶ.

ಈ ಮಾತುಗಳೊಂದಿಗೆ ತಮ್ಮೆಲ್ಲರನ್ನೂ kmdkgs-online@egroups.com ಗೆ ಆಹ್ವಾನಿಸುತ್ತೇನೆ.

ದಯಮಾಡಿ ಸದಸ್ಯರಾಗಲು ಕೆಳಗಿನ ಸರಳ ಸೂಚನೆಗಳನ್ನು ಅನುಸರಿಸಿ.

1. internet e-mail id ಯನ್ನು ಹೊಂದಿ. ಇದಿಲ್ಲದಿದ್ದರೆ http:llwww.yahoo.com ಅಥವಾ http:llwww.hotmail.com ಅಥವಾ ಇನ್ಯಾವುದೇ ಉಚಿತ e-mail site ಗೆ ಹೋಗಿ. ನೀವು internetಗೆ ಹೊಸಬರಾಗಿದ್ದರೆ, ಅದರ ಬಗ್ಗೆ ತಿಳಿದವರೊಂದಿಗೆ ಮಾತಾಡಿ.

2. ನಿಮ್ಮ e-mailid ಯಿಂದ kmdkgs-online @egroups.com ಗೆ e-mail ಮಾಡಿ ಸದಸ್ಯತ್ವಕ್ಕಾಗಿ ಮನವಿ ಮಾಡಿ. ಪೂರ್ಣ ಹೆಸರಿನೊಂದಿಗೆ ನಿಮ್ಮನ್ನು ಪರಿಚಯ ಮಾಡಿ ಕೊಳ್ಳಿ (ಉದಾ : ನನ್ನ ಹೆಸರು ಪ್ರಹ್ಲಾದ್ ಪೊಕ್ಕುಳಂಡ್ರ ಅಪ್ಪಾಜಿ)

3. ನೀವು ಸದಸ್ಯರಾದ ಕೂಡಲೆ http:llwww. egroups.com/group/kmdkgs-online ಗೆ ಭೇಟಿ ನೀಡಿ, ಹಿಂದಿನ ವರ್ತಮಾನಗಳೇನಾದರೂ ಇವೆಯೇ ಎಂದು ಪರೀಕ್ಷಿಸಿ ಕೊಳ್ಳಿ, ಹಾಗೆಯೇ ಇತರ ಸದಸ್ಯರಿಂದ e-mail ಬರಲಾರಂಭಿಸುತ್ತದೆ.

ನೀವು kmdkgs-online@egroup.com ಗೆ e-mail ಕಳುಹಿಸುವುದರ ಮೂಲಕ ನಿಮ್ಮ ಬರವಣಿಗೆಯನ್ನು ಆರಂಭಿಸಬಹುದು.

ಫ್ರಾಪ್ಸ್‌ನ 'ಕಡಿಮೆ ಅತಿಕ್ರಮಿಸಿದ ದಾರಿ ಹಿಡಿದು ಹೆಚ್ಚಿನ ವ್ಯತ್ಯಾಸ ಕಂಡ' ವಾಕ್ಯವು ಜೀವನಗತಿಯ ನಿಜವಾದ ವ್ಯತ್ಯಾಸವನ್ನು ಗುರುತಿಸಲು ಸಹಾಯಕವಾಗುವುದು.

ಈ ವೇದಿಕೆಯನ್ನು ಉತ್ತಮ ಪಡಿಸಲು ತಮ್ಮ ಅಭಿಪ್ರಾಯಗಳು ಹಾಗೂ ಸಲಹೆಗಳಿಗೆ ಸದಾ ಸ್ವಾಗತವಿದೆ.

**ಪ್ರಹ್ಲಾದ್ ಪೊಕ್ಕುಳಂಡ್ರ ಅಪ್ಪಾಜಿ**
ನಿರ್ವಾಹಕ, kmdkgs-online@egroups.com
ಕಾನ್ಸಸ್ ಸಿಟಿ, ಅಮೇರಿಕಾ.

---

**15ನೇ ಪುಟದಿಂದ**

It takes two, make a quarel ಈ ಗಾದೆಯಂತೆ ಎರಡೂ ಕೈ ಸೇರಿದರೆ ಚಪ್ಪಾಳೆ ಅಂದರೆ ಗೌಡ ಬಾಂದವರು ಇಂತಹ ಒಬ್ಬ ಆದರ್ಶ ಲೇಖಕಿ/ಲೇಖಕರಿಗೆ ಸಹಕರಿಸಿದರೆ ನಮ್ಮಲ್ಲಿರುವ ಎಲೆ ಮರೆಯ ಕಾಯಿಯಂತೆ ಇರುವ ಅದೆಷ್ಟೊ ಪ್ರತಿಭೆಗಳನ್ನು ಬೆಳಕಿಗೆ ತಂದಂತಾಗುತ್ತದೆ.

ಇನ್ನು ಶ್ರೀಮತಿ ಜಾನಕಿಯವರು ಹೊರತಂದಿರುವ ಪುಸ್ತಕದಲ್ಲಿ ಗೌಡರ ಸಂಪ್ರದಾಯ ಸೊಬಾನೆಗಳು ಕುಲದೇವರ ಹರಿಸೇವೆ ಹಾಡು ಮಂಗಳಾರತಿ, ಸತ್ಯನಾರಾಯಣ ಸ್ವಾಮಿಯ ಹಾಡು ಉತ್ತಮ ರೀತಿಯಿಂದ ಸಂಗ್ರಹ ಮಾಡಿದ್ದಾರೆ.

ಹೆಣ್ಣೊಳಿಸಿ ಕೊಡುವಾಗ ಹೇಳುವ ಹಾಡಿನ ಶೈಲಿ, ತಾಯಿ ಮಗಳ ಅಗಲಿಕೆ, ಆಗುವ ಸಂಕಷ್ಟ ಒಂದೊಂದಂತೆ ಅತ್ಯುತ್ತಮ ರೀತಿಯಲ್ಲಿ ಮೂಡಿ ಬಂದಿದೆ.

"ಪ್ರೀತಿಯೊಂದೊಡಗುಡಿ ಸಂತಸದಿ ಬಾಳು... ಹೆತ್ತವರ ಮನೆಗಿಂದು ಹೊರಗಾದೆ ಮುಂದೆ ಮಗಳು ಪತಿಯ ಮನೆಯಲ್ಲಿ ಹೇಗೆ ಬಾಳುವಳು ಎಂಬ ಶೈಲಿಯನ್ನು ತೋರಿಸುತ್ತದೆ. ಹಿಂದಿನ ಕಾಲದಲ್ಲಿ ಗೌಡರಿಗೆ ಇದ್ದ ಸ್ಥಾನ ಮತ್ತು ಕರ್ತವ್ಯವನ್ನು ತೋರಿಸುತ್ತದೆ. ಇದೆ ರೀತಿ ಇನ್ನು ಮುಂದೆ ಮನಸ್ಸಿನಲ್ಲಿ ಗುಪ್ತವಾಗಿ ಗೌಡರ ಆಚಾರ ವಿಚಾರ, ಸಂಪ್ರದಾಯಗಳು ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಬಾಂದವರ ಮುಂದಿಡಲು ಪ್ರಯತ್ನಿಸುತ್ತಿದ್ದಾರೆ, ಇನ್ನು ಮುಂದೆಯು ಜನಾಂಗ ಬಾಂದವರು ಇಂತಹ ಓರ್ವ ಲೇಖಕರಿಗೆ ಸರ್ವ ರೀತಿಯಲ್ಲಿ ಸಹಕಾರವಿತ್ತು ಸಹಕರಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವು ಆಗಿದೆ.

ಶ್ರೀಮತಿ ಜಾನಕಿ ಮತ್ತು ಪತಿ ಬೆಳ್ಯಪ್ಪರವರಿಗೂ ನಂಜಪ್ಪ, ಪ್ರಿಸಿಲ್ಲಾ ಹಾಗೂ ದಿನೇಶರವರಿಗೆ ಕುಲದೇವರು ಶೃಂಗೇರಿಯ ಗ್ರಾಮ ದೇವತೆಯು, ಇಷ್ಟದೇವತೆ, ಕುಟುಂಬದ ದೈವಗಳು ಇನ್ನು ಮುಂದೆಯು ಇಂತಹ ಒಂದು ಒಳ್ಳೆಯ ಕಾರ್ಯ ಮಾಡುವಂತೆಯು ಅನುಗ್ರಹಿಸಿ ಸದಾ ಸುಖ ಶಾಂತಿ ನೆಮ್ಮದಿ ದೀರ್ಘಾಯುಷ್ಯ ಕೊಟ್ಟು ಉತ್ತಮ ಅಭಿವೃದ್ಧಿ ಪಡಿಸಲೆಂದು ಆತ್ಮ ಪೂರ್ವಕ ಗೌಡ ಬಾಂದವರ ಪರವಾಗಿ ಬೇಡಿಕೆ.

**– ಗುತ್ತಿ ಮುಂಡನ ಗಿರೀಶ್‌ಕುಮಾರ್, ಕೊಯನಾಡು**

**16ನೇ ಪುಟದಿಂದ**

ಹಿಡಿದು ಎಳೆದಾಡುತ್ತಾ"! ಈ ನಿಧಿಯನ್ನು ಅಪಹರಿಸಲು ನಿನ್ನನ್ನು ಹೊರತು ಉಳಿದವರೆಲ್ಲಾ ಶ್ರಮಿಸಿದ್ದರು. ರಕ್ತದ ಹೊಳೆಯನ್ನೇ ಹರಿಸಿದ್ದರು. ಮಾಡಬಾರದ್ದನ್ನೇ ಮಾಡಿದ್ದರು. ಆದರೆ ನೀನು ಆ ನಿಧಿಯ ಸೌಭಾಗ್ಯವನ್ನು ಹಾಳು ಮಾಡಿದೆ. ನೀನು ! ಇಲ್ಲಿ.... ಇಲ್ಲಿ ನೀನು ಬದುಕಬಾರದು" ಎಂದು ಬಲವಾಗಿ ನೂಕುತ್ತಾ ಅಬ್ಬರಿಸಿದನು !

ಪ್ರಸನ್ನ ಗಿರಗಿರನೆ ತಿರುಗುತ್ತಾ ತೂರಿಕೊಂಡು ಹೋಗಿ ಗೋಡೆಗೆ ಗುದ್ದಿದನು.

ಬಾಯಿಂದ ಹೊರ ಬಂದ ಚೀತ್ಕಾರ !

ನಿಧಿಗಾಗಿ ಮಾಡ ಬಾರದ್ದನ್ನು ಮಾಡಿದ್ದಾರೆ ! ರಕ್ತದ ಹೊಳೆಯನ್ನೇ ಹರಿಸಿದ್ದಾರೆ ! ಏನೋ ದುರಂತ ನಡೆದಿದೆ !

ನಿಧಿ ಅದಾಗಿಯೇ ಸಿಕ್ಕಿಲ್ಲ !

ಇನ್ನು ಯಾವುದೋ ರಾಜ ಕುಟುಂಬವನ್ನು ಸರ್ವನಾಶ ಮಾಡಿ ಈ ನಿಧಿಯನ್ನು ಅಪಹರಿಸಿದ್ದಾರೆ !

ಈ ರಹಸ್ಯ ಪ್ರಸನ್ನನಿಗೆ ತಿಳಿದಿರಲಿಲ್ಲ !

ವೀರಭದ್ರ ಹಲ್ಲು ಕಡಿಯುತ್ತಾ ಸೊಂಟದಲ್ಲಿ ಇರಿಸಿ ಕೊಂಡಿದ್ದ ಸೀಸೆಯೊಂದನ್ನು ಹೊರ ತೆಗೆದನು.

ಅದು ಆಸಿಡ್ ಸೀಸೆ !

ವೀರಭದ್ರ ಹತ್ತಿರ ಬರುತ್ತಾ "ಮರ್ಯಾದೆಯಿಂದ ನಾನು ಹೇಳಿದಂತೆ ಆತ್ಮಹತ್ಯೆಯ ಪತ್ರ ಬರೀ"

ಕೈಯಲ್ಲಿ ಆಸಿಡ್ ಸೀಸೆ ಇದೆ ! ಈಗ ಅದರ ಮುಚ್ಚಳ ನೆಲ ಸೇರಿತು !

ಸೀಸೆಯಿಂದ ಹೇಗೆ ಬರುತ್ತಿದೆ !

**(ಮುಂದುವರೆಯುತ್ತದೆ)**

---

## ಅಬ್ರಹಾಂ ಲಿಂಕನ್‌ರ ವಾರದ ನಂಟು

| | |
|---|---|
| ಲಿಂಕನ್‌ರ ಜನನವಾದದ್ದು | ಭಾನುವಾರ |
| ಅವರು ಚುನಾವಣೆಯಲ್ಲಿ ಆಯ್ಕೆಯಾದದ್ದು | ಸೋಮವಾರ |
| ಅವರು ಎರಡನೇ ಬಾರಿ ರಾಷ್ಟ್ರಾಧ್ಯಕ್ಷರಾದದ್ದು | ಮಂಗಳವಾರ |
| ಅವರು ವಕೀಲರಾಗಿ ನೋಂದಣಿಯಾದುದು | ಬುಧವಾರ |
| ಅವರ ಗೇಟ್ಸ್‌ಬರ್ಗ್ ಭಾಷಣ ನಡೆದದ್ದು | ಗುರುವಾರ |
| ಅವರ ಮೇಲೆ ಗುಂಡು ಹಾರಿಸಿದ್ದು | ಶುಕ್ರವಾರ |
| ಅವರುಕೊನೆಯುಸಿರೆಳೆದದ್ದು | ಶನಿವಾರ |

**ಕುದುಕುಳಿ ಕಾಂಚನ ಭರತ್, ಭಾಗಮಂಡಲ**

---

## ನಗೆಹನಿ

ರಾಜ : (ಗೆಳೆಯನ ಕುರಿತ್) ಏನ್ರ ನೀನ್ ಹೆಣ್ಣ್ ನೊಟ್ಟಿಗೆ ಸೂರ್ಯ ಚಂದ್ರ ಇರಾಮಟ್ಟ ಡೈವರ್ಸ್ ಮಾಡ್ಲೆತ ಭಾಷೆ ಕೊಟಂಬುಟ್ ಈಗ ದೂರ ಮಾಡಿಬುಟ್ಟಗಡ !

ಗೆಳೆಯ : ಹ್ಞೊ ! ಅದಾ ವಿಷಯ ನಾನು ಅವಳ ಬುಡ್‌ಕನ ಚಂದ್ರನೂ ಇತ್ಲೆ ಸೂರ್ಯನು ಇತ್ಲೆ. ಆಗ ಸೂರ್ಯಂಗೆ ಗ್ರಹಣ ಹಿಡಿದಿತ್ತ್ ಗೊತ್ತಾ !

ಎಂ. ಪಿ. ಜಯರಾಮು, ಅಪ್ಪಾ

---

**ಉಂಡವನಿಗೆ ಹಸಿವೆ ಹೆಚ್ಚು, ಮಿಂದವನಿಗೆ ಕೊಳೆ ಹೆಚ್ಚು**

## ಶುಭ ಹಾರೈಕೆ



ನಂಗಾರು ಇ. ಭುವನೇಶ್ವರ

1999-2000ರಲ್ಲಿ S.S.L.C ಪರೀಕ್ಷೆಯಲ್ಲಿ ನಂಗಾರು ಶ್ರೀಮತಿ ಮತ್ತು ಶ್ರೀ ಈಶ್ವರ್ ಮತ್ತು ವನಿತಾ ಇವರ ಪುತ್ರ ಭುವನೇಶ್ವರ ಇವರು ಒಟ್ಟು 625 ರಲ್ಲಿ 561 ಅಂಕಗಳನ್ನು (ಶೇ 89.76) ಗಳಿಸಿ ಉತ್ತೀರ್ಣನಾಗಿರುತ್ತಾನೆ. ಇವರು St. Attns High School ಬೆಂಗಳೂರು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಈ ಎಳೆಯ ಪ್ರತಿಭೆಗೆ ಕುಲದೇವರು ವೆಂಕಟರಮಣ ಸ್ವಾಮಿಯ ಕೃಪೆ ಇರಲಿ ಎಂದು ಹಾರೈಸುವ

ಗೌಡ ಬಂದು ಮಿತ್ರರ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು.

ಸಂಘದ ಪರವಾಗಿ ಕಾರ್ಯದರ್ಶಿ
ಶ್ರೀ ಉಡುದೋಳಿರ ಎಲ್. ಸೋಮಪ್ಪ (ವಕೀಲರು ಮತ್ತು ನೋಟರಿ ಬೆಂಗಳೂರು)
ನಂ. 708/41, ಮಹಡಿ ಮೇಲೆ, ಶ್ರೀರಾಮಾಂಜನೆಯ ರಸ್ತೆ, ಶ್ರೀನಗರ
ಬೆಂಗಳೂರು - 560 050. ✆ : 6671721 Res: 6750108, Mobile 98440-20417

---

**ಮೈಸೂರಿನಿಂದ ಮಾಜಿ ಸೈನಿಕರಿಗಾಗಿ ಪ್ರಸಾರವಾಗುತ್ತಿರುವ ಏಕೈಕ ಪಾಕ್ಷಿಕ ಪತ್ರಿಕೆ.**

**ಪ್ರತಿಯೊಬ್ಬ ಮಾಜಿ ಸೈನಿಕರು ಕೊಂಡು ಓದಲೇ ಬೇಕಾದ ಪಾಕ್ಷಿಕ ಪತ್ರಿಕೆ.**

**Ex : Servicemen TO DAY** (English Fortnightly Magajine)

ಒಂದು ವರ್ಷಕ್ಕೆ ಕೇವಲ ರೂ 50/= ಮಾತ್ರ. ಬಿಡಿ ಪ್ರತಿ ರೂ 2/=, ಸ್ಥಳೀಯ ಚೆಕ್ ಸ್ವೀಕರಿಸಲಾಗುವುದು.

*ಚಂದ ಕಳುಹಿಸುವ ವಿಳಾಸ*

Smt. Valarmathi, Editor
1636/3A, 3rd Cross, Raghavendra Nagar Extn., Mysore - 570 011
and
Sri P. Ashokan(SGT)
ಗೌರವ ಸಂಪಾದಕ, Ex. ಇಂಡಿಯನ್ ಏರ್‌ಪೋರ್ಸ್. Tele : 0821- 472649

---

## ತಾಲೂಕು ಪಂಚಾಯಿತಿ ಸದಸ್ಯರು, ಭಾಗಮಂಡಲ



ಕಟ್ಟೆಕೋಡಿ ಬೋಜಪ್ಪನಾಗಪ್ಪ

ಭಾಗಮಂಡಲನಾಡು ಕರಿಕೆ ಗ್ರಾಮದ ಎಳ್ಳುಕೊಚ್ಚಿ ಎಂಬಲ್ಲಿ ಕಟ್ಟೆಕೋಡಿ ಬೋಜಪ್ಪ ಮತ್ತು ನಾಗಮ್ಮನವರ ಪುತ್ರನಾಗಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಶಾಲೆಯಲ್ಲಿಯೇ ಪೂರೈಸಿದರು. ನಂತರ ವ್ಯಾಪಾರ ವೃತ್ತಿಯನ್ನು ಕೈಗೊಂಡರೂ, ಇವರನ್ನು ರಾಜಕೀಯ ಕ್ಷೇತ್ರದತ್ತ ಆಕರ್ಷಿಸಿತು. 1978ರಲ್ಲಿ ಕರಿಕೆ ವ್ಯವಸಾಯ ಸೇವಾ ಸಹಕಾರಿ ಸಂಘದ ಸದಸ್ಯನಾಗಿ ಚುನಾಯಿತನಾದರು. 1993ರಲ್ಲಿ ಗ್ರಾಮ ಪಂಚಾಯತ್‌ಗೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಕೆಲ ಮತಗಳ ಅಂತರದಿಂದ ಪರಾಜಯರಾದರು. ಈ ಸಾಲಿನ ತಾಲೋಕ್ ಪಂಚಾಯತ್‌ಗೆ ಭಾಗಮಂಡಲದ ಕ್ಷೇತ್ರದಿಂದ, ಜನತಾ ಪರಿವಾರದಿಂದ ಸ್ಪರ್ಧಿಸಿ 807 ಮತಗಳಿಂದ ಜಯಗಳಿಸಿ ಕೊಡಗು ತಾಲೂಕು ಪಂಚಾಯಿತಿಗೆ ಆಯ್ಕೆ ಆದರು. ಶ್ರೀಯುತರಿಂದ ಹಲವಾರು ಉತ್ತಮ ಪ್ರಗತಿಪರ ಜನ ಸೇವೆಯು ನಡೆಯುವುದಲ್ಲದೆ. ಹೆಚ್ಚಿನ ಯಶಸ್ಸು ಸಿಗಲೆಂಬುದಾಗಿ ಈ ಸಂದರ್ಭದಲ್ಲಿ ಶುಭವನ್ನು ಹಾರೈಸೋಣ.

---

## ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು

C/o. ಕೊಡಗು ಗೌಡ ವಿದ್ಯಾರ್ಥಿನಿಲಯ, ಜಯಲಕ್ಷ್ಮಿಪುರಂ, ಮೈಸೂರು -12

ವಿನಂತಿ :-

ಗೌಡ ಜನಾಂಗದ ಮಾಜಿ ಸೈನಿಕರು ಈ ಮೇಲ್ಕಂಡ ಸಂಘದ ಸದಸ್ಯತ್ವ ಹೊಂದಲು ಅಪೇಕ್ಷಿಸಿದಲ್ಲಿ ಈ ಕೆಳಗಿನವರನ್ನು ಸಂಪರ್ಕಿಸಲು ವಿನಂತಿ. ಸಂಘದ ಸದಸ್ಯರಾಗಲು ಭೂಸೇನೆ, ನೌಕಾ ಪಡೆ, ವಾಯುಪಡೆ, CSIF BSF CRPF,RAP ನಲ್ಲಿ ಸೇವೆ ಸಲ್ಲಿಸಿದವರು ಅರ್ಹರು.

ಸಂಪರ್ಕಿಸಿ :-

ತಡಿಯಪ್ಪನ ಕುಮಾರ ಜಯ, ಅಧ್ಯಕ್ಷರು Ph: 568574 ಕುಯ್ಯಮುಡಿ ರಾಮಪ್ಪ, ಉಪಾಧ್ಯಕ್ಷರು Ph:517658
ಕರ್ಣಯ್ಯನ ಲಕ್ಷ್ಮಣ, ಕಾರ್ಯದರ್ಶಿ. Ph:489052. ಗೌಡ ಜನಾಂಗದ ಮಾಜಿ ಸೈನಿಕರಲ್ಲಿ ಪಿಂಚಣಿಯ ಬಗ್ಗೆ ಯಾವುದೆ ತೊಂದರೆ ಇದ್ದಲ್ಲಿ ಕುಯ್ಯಮುಡಿ ರಾಮಪ್ಪ, ಮೈಸೂರು ಇವರನ್ನು ಸಂಪರ್ಕಿಸಲು ವಿನಂತಿಸಲಾಗಿದೆ.

KA/SK/MYS-88 10-01-96 TCI Kar. 09592

# ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ)

ಒಂದನೇ ಸಿ, ಮುಖ್ಯರಸ್ತೆ, ಗಂಗಾನಗರ, ಬೆಂಗಳೂರು -32

## ವಾರ್ಷಿಕ ಮಹಾಸಭೆ ಮತ್ತು ಕ್ರೀಡಾ ಮಹೋತ್ಸವ

ಸರ್ವರಿಗೂ ಆದರದ ಸ್ವಾಗತ

| | | | |
|---|---|---|---|
| ಕ್ರೀಡಾ ಪಂದ್ಯಾಟಗಳು | : | ದಿನಾಂಕ **20-8-2000** ಸಮಯ | ಬೆಳಿಗ್ಗೆ 8-00 ಗಂಟೆಗೆ |
| ವಾರ್ಷಿಕ ಕ್ರೀಡಾ ಕೂಟ | : | ದಿನಾಂಕ **27-8-2000** ಸಮಯ | ಬೆಳಿಗ್ಗೆ 8-00 ಗಂಟೆಗೆ |
| ಸ್ಥಳ | : | ಬಿ.ಇ.ಎಲ್. ಅಂಬೇಡ್ಕರ್ ಕ್ರೀಡಾಂಗಣ, ಜಾಲಹಳ್ಳಿ, ಬೆಂಗಳೂರು - 13 | |
| ಸಾಂಸ್ಕೃತಿಕ ಸ್ಪರ್ಧೆಗಳು | : | ದಿನಾಂಕ **3-9-2000** ಸಮಯ | ಬೆಳಿಗ್ಗೆ 8-30 ಗಂಟೆಗೆ |
| ಸ್ಥಳ | : | ಇನ್‌ಸ್ಟಿಟ್ಯೂಟ್ ಆಫ್ ಆಗ್ರಿಕಲ್ಚರ್ ಟೆಕ್ನಾಲಜಿಸ್ಟ್ಸ್ ಭವನ, ಕ್ವೀನ್ಸ್ ರಸ್ತೆ, ಬೆಂಗಳೂರು - 52. | ದೂರವಾಣಿ - 2260173 |

## ವಾರ್ಷಿಕ ಮಹಾಸಭೆ ಮತ್ತು ಕೈಲ್ ಮುಹೂರ್ತ ಹಬ್ಬದ ಮಮತೆಯ ಕರೆಯೋಲೆ

| | | |
|---|---|---|
| ಸಮಯ | : | ಪೂರ್ವಾಹ್ನ 9-00ಗಂಟೆಗೆ ದಿನಾಂಕ **17-9-2000** |
| ಸ್ಥಳ | : | ಜಪ್ಪಾ ಭವನ, ಕ್ವೀನ್ಸ್ ರಸ್ತೆ, ವಸಂತನಗರ, ಬೆಂಗಳೂರು -52 |

ಮುಖ್ಯ ಅಥಿತಿಯಾಗಿ **ಶ್ರೀಮಾನ್ ಪಡ್ಡಂಬೈಲ್ ವೆಂಕಟ್ರಮಣ ಗೌಡರು** ಭಾಗವಹಿಸುವರು. ಕೊಡಗಿನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸರ್ವ ಗೌಡ ಬಾಂದವರು ಇದನ್ನೇ ಆಮಂತ್ರಣವೆಂದು ಭಾವಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯ ಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

### ಕಾರ್ಯಕ್ರಮ : 17-9-2000

1.) ಪ್ರಾಥನೆ, 2) ಆಯುಧ ಪೂಜೆ, 3) ಸ್ವಾಗತ ಭಾಷಣ, 4) 1999-00 ವಾರ್ಷಿಕ ವರದಿ, 5) 1999-00 ಲೆಕ್ಕ ಪತ್ರವರದಿ 6) ಮಹಿಳಾ ಘಟಕದ ವರದಿ, 7) ಪ್ರಶಸ್ತಿ ವಿಜೇತರಿಗೆ ಮತ್ತು ಗಣ್ಯರಿಗೆ ಸನ್ಮಾನ 8) ಸಾಂಸ್ಕೃತಿಕ ಕಾಯಕ್ರಮ 9) ಇತರ ವಿಷಯಗಳು 10) ಬಹುಮಾನ ವಿತರಣೆ 11) ಮುಖ್ಯ ಅತಿಥಿಗಳ ಭಾಷಣ 12) ಅಧ್ಯಕ್ಷರ ಭಾಷಣ 13) ವಂದನಾರ್ಪಣೆ 14) ಭೋಜನ 15)ಮನರಂಜನೆ.

ವಿ. ಸೂ : 1999-2000ದ ಲೆಕ್ಕ ಪತ್ರದ ವರದಿಯನ್ನು ಸಮಾಜದ ಆಫೀಸಿನಲ್ಲಿ ಪಡೆದು ಕೊಳ್ಳಲು ವಿನಂತಿ( ಸಮಯ ಸಂಜೆ 5-00 ರಿಂದ 7-00 ಗಂಟೆ ತನಕ) ಫೋನ್: 3433014

ಕ್ರೀಡೋತ್ಸವ ಅಂಗವಾಗಿ ಪುರಷರಿಗೆ : ವಾಲಿಬಾಲ್, ಶಟ್ಲ್ ಬ್ಯಾಡ್ ಮಿಂಟನ್, ಮಹಿಳೆಯರಿಗೆ : ಥ್ರೋಬಾಲ್, ವಿವಿಧ ಆಟೋಟಗಳು

15 ವರ್ಷ ಒಳಗಿನ ಬಾಲಕರಿಗೆ ಕ್ರಿಕೆಟ್, ಸರ್ವರಿಗೂ ಸಾಂಸ್ಕೃತಿಕ ಸ್ಪರ್ಧೆಗಳು, ಪ್ರಕೃತಿ ವಿಷಯದ ಬಗ್ಗೆ ನರ್ಸರಿ, ಪ್ರಾಥಮಿಕ, ಪ್ರೌಢಶಾಲೆ ಮಕ್ಕಳಿಗೆ ಸ್ಥಳದಲ್ಲಿ ಚಿತ್ರ ಬರೆಯುವ ಸ್ಪರ್ಧೆ, ಛದ್ಮಾವೇಷ, ಏಕ ಪಾತ್ರಭಿನಯ, ಯಕ್ಷಗಾನ, ಭೂತಕೋಲಗಳು, ಸೋಬಾನೆ, ಭಾವಗೀತೆ, ಭಕ್ತಿಗೀತೆ, ಚಿತ್ರಗೀತೆ, ಜನಪದ ಗೀತೆಗಳ ಸರಮಾಲೆ, ಭಾರತೀಯ ಮತ್ತು ಪಾಶ್ಚಿಮಾತ್ಯ ನೃತ್ಯಗಳ ರಸದೌತಣ, ರಸಪ್ರಶ್ನೆ, ಇತ್ಯಾದಿಗಳು, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ ದೂರವಾಣಿ ಸಂಖ್ಯೆ : 3433014

---

" ಸರ್ವರಿಗೂ ಸುಸ್ವಾಗತ "

ಗೌರವ ಕಾರ್ಯದರ್ಶಿ : ಶ್ರೀ ನೂಜಿ ದಿನಕರ ಗೌಡ, ಅಧ್ಯಕ್ಷರು : ಶ್ರೀ ದಂಬೆಕೋಡಿ ಆನಂದ

ಖಜಾಂಚಿ : ಶ್ರೀ ಬಿ. ಚೆನ್ನಪ್ಪ ಗೌಡ, ಉಧಾಧ್ಯಕ್ಷರು : ಶ್ರೀ ಪಿ. ಅನಂತರಾಜ ಗೌಡ

*ಮತ್ತು ಆಡಳಿತ ಮಂಡಳಿ ಹಾಗೂ ಸದಸ್ಯರು.*

*" ಸಂಘಟನೆ ಮತ್ತು ಐಕ್ಯತೆಯೇ ನಮ್ಮ ಏಕೈಕ ಗುರಿ "*

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.